






ಸ್ವಾತಂತ್ರ್ಯ ದಿನ
ವಿಶೇಷಾಂಕ
1994





ಮುಂಬೈಯಲ್ಲಿ



ಕೇರಳ: ಮಳೆಯ ಮಧ್ಯೆಯೂ ನಡೆದ ಬಂಧನ

ಪ್ರಧಾನಿ ನಿವಾಸದೆದುರು


ಧಾರವಾಡದಲ್ಲಿ ಸ್ವಾತಂತ್ರ್ಯ ದಿನದಂದು

ಕಾಯಿದೆ ಭಂಗ ಚಳುವಳಿ

ದೇಶದ ಎಲ್ಲೆಡೆ ನಡೆದ ಐತಿಹಾಸಿಕ ಚಳುವಳಿಯ ಇತರ ಚಿತ್ರಗಳಿಗೆ ಪುಟ 20-21 ನೋಡಿ







ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 16 ಸಂಚಿಕೆ 40-41 ರೂ. 4.00

ಸ್ವಾತಂತ್ರ್ಯ ದಿನ ವಿಶೇಷಾಂಕ ೧೯೯೪

ಮೊದಲ ಸ್ವಾತಂತ್ರ್ಯ ಯುದ್ಧ ನಡೆದ 1857 ರಿಂದ ಸ್ವಾತಂತ್ರ್ಯ ಪಡೆದ ಆಗಸ್ಟ್ 15, 1947 ರವರೆಗೆ ಸುಮಾರು ಒಂದು ಶತಮಾನದ ಕಾಲ ಬ್ರಿಟಿಷರ ಚಾಟಿಯೇಟಿಗೆ, ಗುಂಡಿನೇಟಿಗೆ ಹೆದರದೆ ನಿಂತ, ಬಿದ್ದು ಮತ್ತೆ ಎದ್ದುನಿಂತ, ಮತ್ತೆ ಹೋರಾಡಿದ ದೇಶಬಾಂಧವರೆಷ್ಟೋ ಬ್ರಿಟಿಷರ ಬಂದೂಕುಗಳಿಗೆ ಎದೆಯೊಡ್ಡಿ ನಿಂತು, ಜೈಲುಗಳನ್ನು ತುಂಬಿದ, ನೇಣುಗಂಬಕ್ಕೆ ಕತ್ತನ್ನೊಡ್ಡಿದ ದೇಶಪ್ರೇಮಿಗಳಷ್ಟೋ! ಕಾಲಚಕ್ರದ ಕ್ರೂರ ಹಿಡಿತದಲ್ಲಿ ನಲುಗಿದ ಕುಟುಂಬಗಳೆಷ್ಟೋ ಅವರೆಲ್ಲಾ ಈ ಕಷ್ಟ-ನಷ್ಟಗಳನ್ನು ಎದುರಿಸಿದಾದ್ದರೂ ಏಕೆ?

ಸ್ವಾತಂತ್ರ್ಯಕ್ಕಾಗಿ !

ಆದರೆ ಈಗ 48 ನೇ ಸ್ವಾತಂತ್ರ್ಯ ದಿನದಂದು ಮತ್ತೊಮ್ಮೆ ನಾವೆಲ್ಲಾ ನಮ್ಮನ್ನೇ ಪ್ರಶ್ನಿಸಿಕೊಳ್ಳಬೇಕಾಗಿ ಬಂತು- ನಾವು ಬಯಸಿದ್ದು, ನಾವು ಹೋರಾಡಿದ್ದು ಯಾವ ಸ್ವಾತಂತ್ರ್ಯಕ್ಕಾಗಿ?

ಈ 'ಸ್ವಾತಂತ್ರ್ಯ' ಎಂದರೇನು? ಅದೇನು ಮುಟ್ಟಲಾಗದ, ಕಣ್ಣಿಗೆ ಕಾಣದ, ಅನುಭವಕ್ಕೆ ಬಾರದ ಅಮೂರ್ತ ತತ್ವವೇ? ಏನೆಂದು ಹೇಳಲಾಗದ ಆಧ್ಯಾತ್ಮಿಕ ಕಲ್ಪನೆಯೇ? ಅಥವಾ ಕೇವಲ ತತ್ವಜ್ಞಾನಿಗಳ ತರ್ಕದ ವಿಷಯವೇ?

ಸ್ವಾತಂತ್ರ್ಯ ಸಮರದ ಸಾಮಾನ್ಯ ಸೈನಿಕರಿಗಂತೂ ಸ್ವಾತಂತ್ರ್ಯ ಎಂದರೆ ಎರಡು ಹೊತ್ತು ಕೂಳು, ತಲೆಯ ಮೇಲೊಂದು ಸೂರು, ದೇಹ ಮುಚ್ಚಲು ಸಾಕಷ್ಟು ಬಟ್ಟೆ, ತಮ್ಮನ್ನು ತಮ್ಮ ಕುಟುಂಬವನ್ನು ಪೋಷಿಸಬಲ್ಲ ನೌಕರಿ, ಹೂವಾಗಿ ಅರಳಿ ಕಂಪು ಬೀರುವಂತಹ ಒಂದು ಸಾರ್ಥಕ ಸಾಂಸ್ಕೃತಿಕ ಬದುಕು.

48ನೇ ಸ್ವಾತಂತ್ರ್ಯದಿನದಂದು ಈ ದೇಶದ ಜನಸಾಮಾನ್ಯ, ದುಡಿಯುವ ಜನ ಕೇಳುತ್ತಿದ್ದಾರೆ- ಈ ಸುಂದರ ಕನಸು ಕನಸಾಗೇ ಉಳಿಯಬೇಕೆ? ನಮ್ಮ ಹೊಂಗನಸು ಘೋರ ದುಸ್ವಪ್ನವಾಗುತ್ತಿದೆಯೇಕೆ? ಉದಾರೀಕರಣದ ಜಾಗತೀಕರಣದ ಸ್ವರ್ಗದ ಬಿಸಿಲುಗುದುರೆ ಬೆಂಬತ್ತಿ ಹೋಗಬೇಕೇಕೆ? ಜೇಬುಗಳ್ಳರು, ಪುಂಡರು, ದರೋಡೆಕೋರರು, ಜೂಜುಕೋರರು, ಇಸ್ತ್ರಿ ಮಾಡಿದ ಶುಭ್ರ ಖಾದಿಯ, ಸೂಟುಬೂಟಿನ ಕ್ರಿಮಿನಲ್‌ಗಳು, ಹಗರಣಕೋರರು ಮಾತ್ರ ಸಂತೋಷದಿಂದಿರಬಹುದಾದ ಸ್ಥಿತಿಯೇಕೆ? ”

ಹೌದು, ದುಡಿಯುವ ಜನ ತಮ್ಮ ಹೊಂಗನಸುಗಳನ್ನು ದುಸ್ವಪ್ನವಾಗಿಸಲು ಇನ್ನು ಬಿಡೆವು, ಬೊಫೋರ್ಸ್, ಹೆಲಿಕಾಪ್ಟರ್, ಸಬ್‌ಮೆರೀನ್, ತೈಲ, ಸಕ್ಕರೆ ಹೀಗೆ ಪ್ರತಿಯೊಂದು ಖರೀದಿಯನ್ನೂ ಹಗರಣವಾಗಿಸುವುದನ್ನು ಬಿಡೆವು, ದೇಶವನ್ನು, ಜನರನ್ನು ಲೂಟಿ ಹೊಡೆಯಲು ಬಿಡೆವು, ಆಳರಸರು ಹುಟ್ಟಿಸಿದ ಭ್ರಮೆಗಳ ದಾಸರಾಗೆವು ಎನ್ನುತ್ತಿದ್ದಾರೆ.

ಈ ವರ್ಷ ಸ್ವಾತಂತ್ರ್ಯದಿನದಂದು ದೇಶಾದ್ಯಂತ ಕೋಟ್ಯಂತರ ಜನ ಹಲವಾರು ದಶಕಗಳ ಜನತೆಯ ಹೋರಾಟಗಳಿಂದ, ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಸಾರ್ವಭೌಮತೆಯನ್ನು ಈ ಆಳರಸರು ಮಾರಿ ತಿನ್ನಲು ಬಿಡುವುದಿಲ್ಲ ಎಂದು ಪಣ ತೊಟ್ಟಿದ್ದಾರೆ. ಧರ್ಮದ ಹೆಸರಲ್ಲಿ, ಜಾತಿಯ ಹೆಸರಲ್ಲಿ, ಭಾಷೆಯ ಹೆಸರಲ್ಲಿ ಜನಗಳ ಐಕ್ಯತೆಯನ್ನು ಮುರಿದು ತಪ್ಪು ದಾರಿಗೆಳೆಯುವವರ ಮಾತುಗಳಿಗೆ ಇನ್ನು ಮೋಸಹೋಗುವುದಿಲ್ಲ ಎಂದು ದೃಢ ನಿರ್ಧಾರ ಮಾಡಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಯ ಮರುದಿನದಿಂದ ಸೆಪ್ಟೆಂಬರ್ 9, 1994 ರವರೆಗೆ ಎಡಪಕ್ಷಗಳು ಕರೆ ನೀಡಿದ ಕಾಯ್ದೆ ಭಂಗ ಚಳುವಳಿಗೆ ದೊರೆತ ಅಪಾರ ಜನಸ್ಪಂದನವೇ ಇದಕ್ಕೆ ಒಂದು ಸಾಕ್ಷಿ. ಎಡಪಕ್ಷಗಳು ಈ ಚಳುವಳಿಯಲ್ಲಿ 10 ಲಕ್ಷ ಸ್ವಯಂಸೇವಕರನ್ನು ಭರ್ತಿ ಮಾಡುವ ಗುರಿಯಿಟ್ಟು ಕೊಂಡಿದ್ದವು. ಆದರೆ ಈ ಪುಟ 2 ನೋಡಿ

ಪುಟ 1 ರಿಂದ

ಗುರಿಯನ್ನು ಮೀರಿ 11.5 ಲಕ್ಷ ಸ್ವಯಂ ಸೇವಕರು ಈ ಆಂದೋಲನದಲ್ಲಿ ಅಮಿತೋತ್ಸಾಹದಿಂದ ಭಾಗವಹಿಸಿದರು. ಇದಲ್ಲದೆ ಪಶ್ಚಿಮ ಬಂಗಾಳದಲ್ಲಿ ಇನ್ನೂ 5 ಲಕ್ಷಕ್ಕೂ ಹೆಚ್ಚುಮಂದಿ ಕೇಂದ್ರ ಸರ್ಕಾರದ ಕಚೇರಿಗಳೆದುರು ಧರಣಿ ಇತ್ಯಾದಿ ನಡೆಸಿದರು. ಪ್ರತಿಯೊಂದು ರಾಜ್ಯದಲ್ಲೂ ಸ್ವಾತಂತ್ರ್ಯ ಸಮರದ ಸ್ಫೂರ್ತಿ ಮತ್ತೆ ಚಿಮ್ಮಿ ಬಂದಂತಿತ್ತು. ಕೆಲವೆಡೆ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ, ಕೆಲವೆಡೆ ಪ್ರವಾಹವನ್ನು ಲೆಕ್ಕಿಸದೆ, ಇನ್ನು ಕೆಲವೆಡೆ ಬರ ಪರಿಸ್ಥಿತಿಯಿದ್ದರೂ, ಹಲವೆಡೆ ಪೋಲೀಸರ ಲಾಠಿ, ಅಶ್ರುವಾಯು ಗಳನ್ನೂ ಲೆಕ್ಕಿಸದೆ ಸಾವಿರ-ಸಾವಿರ ಸಂಖ್ಯೆಯಲ್ಲಿ ಸ್ವಯಂ ಸೇವಕರು ಜನಸಾಮಾನ್ಯರ ಅಪಾರ ಕ್ರೋಧವನ್ನು ಆಳರಸರವರೆಗೆ ಮುಟ್ಟಿಸಿದರು.

*ಈ ಚಾರಿತ್ರಿಕ ಆಂದೋಲನದ ಬೆನ್ನ ಹಿಂದೆಯೇ **'ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ'**ಯ ಕರೆಗೆ ಓಗೊಟ್ಟು ದೇಶಾದ್ಯಂತ ದುಡಿಯವ ಜನ, ವಿದ್ಯಾರ್ಥಿ-ಯುವಜನ, ಮಹಿಳೆಯರು ಸೆಪ್ಟೆಂಬರ್ 20 ರಂದು ನಡೆಸಿದ 'ರೈಲು ತಡೆ' ಪ್ರತಿಭಟನೆಯನ್ನು ಆಳುವ ಮಂದಿಯ ತುತ್ತೂರಿಗಳೂ ಗಮನಿಸಬೇಕಾಗಿ ಬಂತು. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಇದೇ 'ರಾಷ್ಟ್ರೀಯ ವೇದಿಕೆ'ಯ ಕರೆಯಂತೆ ಸೆಪ್ಟೆಂಬರ್ 27 ರಂದು ಪಂಜಿನ ಮೆರವಣಿಗೆ, ಸೆಪ್ಟೆಂಬರ್ 29 ರಂದು ಕಾರ್ಮಿಕರ, ನೌಕರರ ಬೃಹತ್ ಮುಷ್ಕರಕ್ಕೆ ಭರದ ಸಿದ್ಧತೆ ನಡೆಯುತ್ತಿದೆ.*

***ಭಾರತದ ಸಾರ್ವಭೌಮತೆಯನ್ನು, ಸ್ವಾವಲಂಬನೆಯನ್ನು ಬುಡಮೇಲು ಮಾಡುವ ನೀತಿಗಳನ್ನು ನರಸಿಂಹರಾವ್** ಸರಕಾರ ಕೈ ಬಿಡಲು ಈಗಲೂ ಸಿದ್ಧವಿಲ್ಲವಾದರೆ ಈ ದೇಶದ ಜನಗಳೂ ಕೂಡಾ ಹೆಚ್ಚುತ್ತಿರುವ ಆರ್ಥಿಕ ಸಂಕಟಗಳನ್ನು ಸಹಿಸಿಕೊಳ್ಳಲು ಈಗ ಸಿದ್ಧರಿಲ್ಲ ಎನ್ನುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ದುಡಿಯುವ ಜನಗಳ ಕ್ರೋಧಕ್ಕೆ ದನಿ ನೀಡಿದೆ.*

ಆಗಸ್ಟ್ ೧೫, ೧೯೯೪ ರಂದು ದೇಶಾದ್ಯಂತ ಎಡಪಕ್ಷಗಳ ನೇತೃತ್ವದಲ್ಲಿ ಲಕ್ಷಾಂತರ ಸ್ವಯಂಸೇವಕರು ಕೈಗೊಂಡ

ಭಾರತದ ಆರ್ಥಿಕ ಸಾರ್ವಭೌಮತೆಯ ರಕ್ಷಣೆಯ ಪ್ರತಿಜ್ಞೆ

ದೇಶ ಕವಲುದಾರಿಯಲ್ಲಿದೆ. ನೂರಾರು ವರ್ಷಗಳ ಜನತೆಯ ಹೋರಾಟಗಳು ಹಾಗೂ ಅಗಣಿತ ತ್ಯಾಗ-ಬಲಿದಾನಗಳ ನಂತರ ಅಪಾರ ಶ್ರಮದಿಂದ ಗಳಿಸಿದ ನಮ್ಮ ಸ್ವಾತಂತ್ರ್ಯಕ್ಕೆ ಈಗ ಸಂಚಕಾರ ಬಂದಿದೆ.

ಪ್ರತಿಯೊಬ್ಬ ದೇಶಪ್ರೇಮಿಯೂ ನಮ್ಮ ದೇಶದ ತ್ವರಿತ ಆರ್ಥಿಕ ಅಭಿವೃದ್ಧಿ ಹಾಗೂ ನಮ್ಮ ಜನಗಳ ಸಮೃದ್ಧಿಯನ್ನು ಬಯಸುತ್ತಾನೆ. ಆದರೆ ಹೊಸ ಆರ್ಥಿಕ ನೀತಿಗಳು ಮತ್ತು ಗ್ಯಾಟ್ ಸಂಧಿಗೆ ಸಹಿ ಹಾಕಿ ಡಂಕೆಲ್ ಪ್ರಸ್ತಾವನೆಗಳನ್ನು ಒಪ್ಪಿಕೊಂಡಿರುವುದರಿಂದ ಶರಣಾಗತಿಗೆ ಹೆಬ್ಬಾಗಿಲು ತೆರೆದಿಟ್ಟಂತಾಗಿದೆ. ನಮ್ಮ ಮಹಾನ್ ದೇಶದ ಆರ್ಥಿಕ ಸಾರ್ವಭೌಮತೆಯನ್ನೇ ಬಿಟ್ಟುಕೊಡುವಂತಹ ಒತ್ತಡಕ್ಕೆ ತೆರೆದಿಟ್ಟಂತಾಗಿದೆ. ಇದರಿಂದ ಒಂದು ಸಣ್ಣ ವಿಭಾಗಕ್ಕೇನೊ ಪ್ರಯೋಜನವಾಗ ಬಹುದು. ಆದರೆ ವಿಶಾಲ ಜನಸಮೂಹಗಳ ಜೀವನ ಪರಿಸ್ಥಿತಿ ಮಾತ್ರ ತ್ವರಿತವಾಗಿ ಹದಗೆಡುತ್ತಿದೆ.

ಕಳೆದ ಎರಡು ವರ್ಷಗಳಲ್ಲಿ:

- ನಮ್ಮ ಆರ್ಥಿಕದ ಸ್ವಾವಲಂಬೀ ನೆಲೆಯನ್ನು ವ್ಯವಸ್ಥಿತವಾಗಿ ಬುಡಮೇಲು ಮಾಡಲಾಗುತ್ತಿದೆ,
- ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳು ಹಾಗೂ ವಿದೇಶೀ ಹಣಕಾಸು ಬಂಡವಾಳಕ್ಕೆ ನಮ್ಮ ರಾಷ್ಟ್ರೀಯ ಸಂಪನ್ಮೂಲಗಳನ್ನು, ಮಾನವ ಬಂಡವಾಳವನ್ನು ಸೂರೆಗೊಳ್ಳಲು ಮುಕ್ತ ಅವಕಾಶ ನೀಡಲಾಗುತ್ತಿದೆ,
- ನಮ್ಮ ದೇಶದ ಮೇಲಿನ ಸಾಲದ ಹೊರೆ ಅಪಾರ ಪ್ರಮಾಣದಲ್ಲಿ ಹೆಚ್ಚಿದೆ,
- ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಯೋಜಿತ ರೀತಿಯಲ್ಲಿ ಕುಂಠಿತಗೊಳಿಸಲಾಗುತ್ತಿದೆ,
- ಬೆಲೆಗಳು ಗಗನಕ್ಕೇರುತ್ತಿವೆ,
- ನಿರುದ್ಯೋಗ ನಾಗಾಲೋಟ ಹೂಡುತ್ತಿದೆ,
- ಸಾರ್ವಜನಿಕ ವಲಯವನ್ನು ಮನಸ್ವೇಚ್ಚೆಯಾಗಿ ಖಾಸಗೀಕರಿಸಲಾಗುತ್ತಿದೆ,
- ಲಕ್ಷಾಂತರ ಸಣ್ಣ ಪ್ರಮಾಣದ ಉದ್ದಿಮೆಗಳು ಮುಚ್ಚಿಹೋಗಿವೆ,
- ಸಾವಿರಾರು ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ, ಇನ್ನೂ ಸಾವಿರಾರು ಮಂದಿ ಆ ಬೆದರಿಕೆಯನ್ನು ಎದುರಿಸುತ್ತಿದ್ದಾರೆ,
- ಶಿಕ್ಷಣ ಒದಗಿಸುವ ತನ್ನ ಹೊಣೆಗಾರಿಕೆಯನ್ನು ಸರಕಾರ ಒಂದೊಂದಾಗಿ ಕಳಚಿಕೊಳ್ಳುತ್ತಿದೆ,
- ಸೀಮಿತವಾಗಿರುವ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಕಡಿತ ಮಾಡಲಾಗುತ್ತಿದೆ, ಅತ್ತ ಜೀವವುಳಿಸುವ ಔಷಧಿಗಳ ಬೆಲೆಗಳು ಏರುತ್ತಿವೆ,
- ಸಬ್ಸಿಡಿಗಳನ್ನು, ಸಹಾಯಧನಗಳನ್ನು ಕಡಿತ ಮಾಡಲಾಗುತ್ತಿದೆ, ಕೃಷಿ ಸಲಕರಣೆಗಳ ಬೆಲೆಗಳು ಏರುತ್ತಿವೆ, ಕೃಷಿ ಕೂಲಿಕಾರರ ಸ್ಥಿತಿ ದಿನಗಳೆದಂತೆ ಇನ್ನಷ್ಟು ಶೋಚನೀಯವಾಗುತ್ತಿದೆ,
- ಹಸಿವಿನಿಂದ ಸಾವು–ವಿಶೇಷವಾಗಿ ದಲಿತ ಹಾಗೂ ಬುಡಕಟ್ಟು ಜನಗಳಲ್ಲಿ ಹೆಚ್ಚುತ್ತಲೇ ಇದೆ.


ಇಂತಹ ಸನ್ನಿವೇಶದಲ್ಲಿ, ನಾನು ಒಬ್ಬ/ಳು ದೇಶಪ್ರೇಮಿಯಾಗಿ, ಸ್ವಾತಂತ್ರ್ಯಕ್ಕಾಗಿ ನಮ್ಮ ಜನಗಳ ಹೋರಾಟದ ಭವ್ಯ ಪರಂಪರೆಯಿಂದ ಸ್ಫೂರ್ತಿ ಪಡೆದು ನನ್ನ ದೇಶದ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸುವ, ಕಾಪಾಡುವ ಹಾಗೂ ಉತ್ತಮ ಜೀವನಕ್ಕಾಗಿ ಜನಗಳ ಹೋರಾಟವನ್ನು ಮುನ್ನಡೆಸುವಲ್ಲಿ ನನ್ನ ಶಕ್ತಿಮೀರಿ ದುಡಿಯುವ ಪ್ರತಿಜ್ಞೆ ಮಾಡುತ್ತೇನೆ.

ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸಲು, ಜನಗಳ ಹೋರಾಟವನ್ನು ಮುನ್ನಡೆಸಲು ಆಗಸ್ಟ್–ಸೆಪ್ಟೆಂಬರ್ 1994ರಲ್ಲಿ ಸವಿನಯ ಕಾಯಿದೆಭಂಗ ಚಳುವಳಿ ನಡೆಸಬೇಕೆಂಬ ಎಡಪಕ್ಷಗಳ ಕರೆಗೆ ಓಗೊಟ್ಟು ನಾನು, ನನ್ನನ್ನು ಸ್ವಯಂಸೇವಕನಾ/ಳಾಗಿ ಅರ್ಪಿಸಿಕೊಳ್ಳುತ್ತೇನೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಉದ್ಧಾರಕ್ಕಾಗಿ ಮತ್ತು ಕಾರ್ಮಿಕ ವರ್ಗದ ಹಾಗೂ ಕೋಟಿಗಟ್ಟಲೆ ಶ್ರಮಜೀವಿಗಳ ಹಕ್ಕುಗಳ ರಕ್ಷಣೆಗಾಗಿ ನಮ್ಮ ಜನಗಳು ನಡೆಸಿರುವ ಹೋರಾಟಗಳ ಭವ್ಯ ಪರಂಪರೆಗಳಿಗೆ ಅನುಗುಣವಾಗಿ ನನ್ನ ಈ ನಿರ್ಧಾರದ ಪರಿಣಾಮವಾಗಿ ಏನೇ ಕಷ್ಟಗಳು ಬಂದರೂ ಅವನ್ನೆಲ್ಲಾ ಎದುರಿಸುತ್ತೇನೆ.   ಸಹಿ

ಭಾರತದ ಸ್ವಾತಂತ್ರ್ಯ—ಸಾರ್ವಭೌಮತೆಗೆ ಮಾರಕವಾದ

ವಿನಾಶಕಾರಿ ನೀತಿಗಳನ್ನು ಬದಲಿಸುವ

ಹೋರಾಟ ಮುಂದುವರಿಯುತ್ತದೆ.



—ಹರ್ಕಿಶನ್ ಸಿಂಗ್ ಸುರ್ಜಿತ್

48ನೇ ಸ್ವಾತಂತ್ರ್ಯ ದಿನದಂದು ಭಾರತದ ಸ್ವಾತಂತ್ರ್ಯದ, ಸಾರ್ವಭೌಮತೆಯ ರಕ್ಷಣೆಯ ಪ್ರತಿಜ್ಞೆ ಸ್ವೀಕರಿಸಿ ಆರಂಭವಾದ ಎಡಪಕ್ಷಗಳ ಕಾಯಿದೆಭಂಗ ಆಂದೋಲನ ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಆಂದೋಲನ. ಇದರ ಹಿನ್ನೆಲೆ, ಸನ್ನಿವೇಶ ಹಾಗೂ ಜನಸಾಮಾನ್ಯರ ಆಕಾಂಕ್ಷೆಗಳನ್ನು ಈಡೇರಿಸಿ, ವಿಶ್ವದಲ್ಲಿ ಘನತೆಯಿಂದ ತಲೆಯೆತ್ತು ನಿಲ್ಲಬಲ್ಲ ಭಾರತದ ನಿರ್ಮಾಣಕ್ಕಾಗಿ ನಡೆಯುತ್ತಿರುವ ದೀರ್ಘವಾದ ಹೋರಾಟದಲ್ಲಿ ಈ ಆಂದೋಲನ ವಹಿಸಿರುವ ಪಾತ್ರದ ಬಗ್ಗೆ ವಿವರಿಸುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು

ಸೆಪ್ಟೆಂಬರ್9, 1994. ನಮ್ಮ ದೇಶದ ಆರ್ಥಿಕ ಸ್ವಾತಂತ್ರ್ಯಕ್ಕೆ ಅಡ್ಡ ಬರುವ ನರಸಿಂಹರಾವ್ ಸರಕಾರದ ಆರ್ಥಿಕ ನೀತಿಗಳು ಮತ್ತು ಗ್ಯಾಟ್ ಸಂಧಿಗೆ ಸಹಿ ಹಾಕಿರುವುದರ ವಿರುದ್ಧ ಎಡಪಕ್ಷಗಳು ನಡೆಸಿರುವ ದೇಶವ್ಯಾಪಿ ಹೋರಾಟದ ಮೊದಲ ಘಟ್ಟ ಮುಕ್ತಾಯಗೊಂಡಿತು. ಅಂದು ದೇಶಾದ್ಯಂತ ಸಾವಿರಾರು ಸ್ವಯಂಸೇವಕರು ಬಂಧನಕ್ಕೊಳಗಾದರು. ದೇಶದ ರಾಜಧಾನಿಯಲ್ಲಿ ಎಡಪಕ್ಷಗಳ ಉನ್ನತ ಮುಖಂಡರು ಬಂಧನಕ್ಕೊಳಗಾದರು.

ಆಗಸ್ಟ್ 15, 1994 ಸ್ವಾತಂತ್ರ್ಯ ದಿನದಂದು ಲಕ್ಷಾಂತರ ಸ್ವಯಂಸೇವಕರು ನಮ್ಮ ದೇಶದ ಆರ್ಥಿಕ ಸಾರ್ವಭೌಮತೆಯನ್ನು ರಕ್ಷಿಸುವ, ಏನೇ ಬಂದರೂ ಸಾಮ್ರಾಜ್ಯಶಾಹಿ ಆಕ್ರಮಣಗಳನ್ನು ಹಿಮ್ಮೆಟ್ಟಿಸುವ ಪ್ರತಿಜ್ಞೆಯನ್ನು ಕೈಗೊಂಡ ನಂತರ ಆಗಸ್ಟ್ 16ರಿಂದ ಸೆಪ್ಟೆಂಬರ್ 9ರವರೆಗೆ 25 ದಿನಗಳ ಕಾಲ ಈ ಮೇಲೆ ಪರಿಣಾಮ ಬೀರಿದೆ. ಸರಕಾರದ ಈ ನೀತಿಗಳು ಜನ ಸಾಮಾನ್ಯರ ಜೀವನವನ್ನು ಮತ್ತಷ್ಟು ಶೋಚನೀಯಗೊಳಿಸಲಿವೆ ಎಂಬು ದನ್ನು ಅವರು ಅರಿಯಲಾರಂಭಿಸಿದ್ದಾರೆ.

ನಿಜ, ಈ ನೀತಿ ಒಮ್ಮಿಂದೊಮ್ಮೆಲೇ 1991ರಲ್ಲಿ ಆರಂಭವಾದದ್ದಲ್ಲ. ಇನ್ನೂ ಕೆಲವು ವರ್ಷಗಳ ಹಿಂದೆಯೇ ಆರಂಭವಾಗಿತ್ತು. ಅಂದಿನಿಂದಲೂ ಈ ನೀತಿಗಳಲ್ಲಿ ಅಡಗಿರುವ ಅಪಾಯದ ಬಗ್ಗೆ ನಾವು ಎಚ್ಚರಿಸುತ್ತಾ ಬಂದಿದ್ದೆವು. ಆದರೆ ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಆಳುವ ವರ್ಗಗಳ ನಿಜಸ್ವರೂಪ

'ಜೈಲ್ ಭರೋ' ಆಂದೋಲನ ನಡೆಯಿತು. ಎಡಪಕ್ಷಗಳು ನೀಡಿದ ಹೋರಾಟದ ಕರೆಗೆ ಆರಂಭದಿಂದಲೇ ಉತ್ಸಾಹಕಾರೀ ಜನಸ್ಪಂದನ ದೊರೆತಿತ್ತು. ಕಾಯಿದೆ ಭಂಗ ಚಳುವಳಿಯ ಈ ಘಟ್ಟದ ಮೊದಲು ಎಂಟು ತಿಂಗಳಿಗೂ ಹೆಚ್ಚು ಕಾಲ ದೇಶದ ಹಲವು ರಾಜ್ಯಗಳಲ್ಲಿ ವ್ಯಾಪಕ ಪ್ರಚಾರ–ಪ್ರಕ್ಷೋಭೆ ನಡೆಯಿತು. ನರಸಿಂಹರಾವ್ ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳ, ಗ್ಯಾಟ್ ಸಂಧಿಯ ಭಯಾನಕ ದುಷ್ಪರಿಣಾಮಗಳ ವಿರುದ್ಧ ಜನರಿಗೆ ತಿಳಿಹೇಳಲಾಯಿತು. ಆಳುವ ಮಂದಿ ತಮ್ಮೆಲ್ಲಾ ಶಕ್ತಿ, ಸಂಪನ್ಮೂಲಗಳನ್ನು ಬಳಸಿ ತಮ್ಮ ನೀತಿಗಳನ್ನು ಸಮರ್ಥಿಸಿಕೊಳ್ಳಲು ಬೃಹತ್ ಪ್ರಮಾಣದಲ್ಲಿ ಪ್ರಚಾರ ನಡೆಸಿದ್ದರೂ ಎಡಪಕ್ಷಗಳುನಡೆಸಿದ ಪ್ರಚಾರ ಕಾರ್ಮಿಕ ವರ್ಗ, ರೈತಾಪಿ ವರ್ಗ, ಕೃಷಿಕೂಲಿಕಾರರು, ಮಧ್ಯಮ ವರ್ಗದ ನೌಕರರು ಇತ್ಯಾದಿ ವಿಭಾಗಗಳ ವನ್ನು ತೋರಲಾರಂಭಿಸಿತು. ಆಳುವ ವರ್ಗಗಳ ಹಿತಾಸಕ್ತಿಗಳನ್ನು ರಕ್ಷಿಸಲು ಐ.ಎಂ.ಎಫ್–ವಿಶ್ವಬ್ಯಾಂಕ್ ಆದೇಶಗಳಿಗೆ ಮಣಿಯುವುದಲ್ಲದೆ ಅನ್ಯ ಮಾರ್ಗವೇ ಇಲ್ಲ ಎಂಬ ನಿರ್ಧಾರಕ್ಕೆ ಬಂತು. ಹಿಂದೆ ಭಾರತ ಸರಕಾರವೇ ವಿರೋಧಿಸಿದ್ದ ಗ್ಯಾಟ್ ಸಂಧಿಗೆ ಸಹಿ ಹಾಕಲು ರಾವ್ ಸರಕಾರ ಹಿಂಜರಿಯಲಿಲ್ಲ.

ಪ್ರತಿಭಟನೆಯ ಮೊದಲ ದನಿ ಕಾರ್ಮಿಕ ವರ್ಗದಿಂದ

ಸಹಜವಾಗಿಯೇ ಈ ಹೊಸ ನೀತಿಗಳ ವಿರುದ್ಧ ಮೊದಲು ದನಿಯೆತ್ತಿದ್ದು ಕಾರ್ಮಿಕ ವರ್ಗ. ಜೂನ್ 1991ರಲ್ಲಿ ರಾವ್ ಸರಕಾರ ಅಧಿಕಾರ ವಹಿಸಿಕೊಂಡಿತು. ಆ ವರ್ಷದ ನವಂಬರ್‌ನಲ್ಲೇ ಕಾರ್ಮಿಕ ವರ್ಗ ರಾವ್–ಸಿಂಗ್ ನೀತಿಗಳ ವಿರುದ್ಧ ದೇಶವ್ಯಾಪಿ ಬೃಹತ್ ಮುಷ್ಕರ ನಡೆಸಿತು. ಜೂನ್ 1992

ರಲ್ಲಿ ಇನ್ನೊಂದು ಮುಷ್ಕರ ನಡೆಯಿತು. ಸೆಪ್ಟೆಂಬರ್ 1992ರಲ್ಲಿ ಭಾರತ ಬಂದ್ ನಡೆಯಿತು. ರ್‍ಯಾಲಿಗಳು, ಮೆರವಣಿಗೆಗಳು, ಮತ ಪ್ರದರ್ಶನಗಳು, ಸಾಮೂಹಿಕ ಜಾಗೃತಿ ಚಳುವಳಿಗಳು ಭರದಿಂದ ನಡೆಯಲಾರಂಭಿಸಿದವು. ಕ್ರಮೇಣ ಇತರ ಜನವಿಭಾಗಗಳು ನೌಕರರು, ಯುವಜನ, ವಿದ್ಯಾರ್ಥಿಗಳು, ಮಹಿಳೆಯರು, ರೈತರು, ಕೃಷಿಕೂಲಿಕಾರರು ಇತ್ಯಾದಿ ಇತ್ಯಾದಿ ಹೋರಾಟದ ಸಾಗರಕ್ಕೆ ಬಂದು ಸೇರಲಾರಂಭಿಸಿದರು. ಫಲವಾಗಿ **ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ** ರಚನೆಗೊಂಡಿತು. ವೇದಿಕೆಯ ಕರೆಯ ಮೇರೆಗೆ ಈ ವರ್ಷ ನವದೆಹಲಿಯಲ್ಲಿ ಏಪ್ರಿಲ್ 5ರಂದು ನಡೆದ ರ್‍ಯಾಲಿಯಿಂದ ಸರಕಾರ ಎಷ್ಟೊಂದು ಭಯಭೀತವಾಯಿತೆಂದರೆ ಪ್ರತಿಭಟನಾಕಾರರನ್ನು ಸಂಸತ್ತಿನತ್ತ ಹೋಗಲು ಕೂಡಾ ಬಿಡಲಿಲ್ಲ. ಕಳೆದ 23 ವರ್ಷಗಳಲ್ಲಿ ಕಾಣದಷ್ಟು ಭಾರೀ ಪ್ರಮಾಣದ ಅಶ್ರುವಾಯು ಪ್ರಯೋಗ ನಡೆಯಿತು.

ತಮ್ಮ ನೀತಿಗಳು ಗ್ರಾಮೀಣ ಜನಗಳಿಗೆ ಹೊಸ ದಾರಿಗಳನ್ನು ತೆರೆಯುತ್ತವೆ ಎಂದು ಪ್ರಚಾರ ನಡೆಸಿ ಮೋಸ ಮಾಡುವ ಸರಕಾರದ ಪ್ರಯತ್ನಗಳನ್ನೂ ಕಾರ್ಮಿಕ ವರ್ಗದ ಈ ಕಾರ್ಯಾಚರಣೆಗಳು ಬಯಲಿಗೆಳೆದವು. ಎಡಪಕ್ಷಗಳ, ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರ ನಿರಂತರ ಪ್ರಯತ್ನಗಳಿಂದಾಗಿ ಗ್ರಾಮೀಣ ಜನತೆ ಸರಕಾರದ ನೀತಿಗಳಲ್ಲಿ ಅಡಕವಾಗಿರುವ ಅಪಾಯಗಳನ್ನೂ ಅರಿಯಲಾರಂಭಿಸಿದ್ದಾರೆ; ಸರಕಾರದ ಪ್ರಚಾರದ ಪ್ರಭಾವದಿಂದ ಹೊರಬರುತ್ತಿದ್ದಾರೆ ಗ್ಯಾಟ್ ಸಂಧಿಯಿಂದ ಭಾರತದ ಕೃಷಿಗೆ ಬಂದಿರುವ ಬೆದರಿಕೆಯನ್ನು ತಾಳ್ಮೆಯಿಂದ ವಿವರಿಸಿರುವುದು ಜನಗಳ ಅರಿವಿನ ಪ್ರಕ್ರಿಯೆಯನ್ನು ಇನ್ನಷ್ಟು ತ್ವರಿತಗೊಳಿಸಿದೆ.

ಆದರೂ ರಾವ್ ಸರಕಾರ ಇನ್ನೂ ಸಾಮ್ರಾಜ್ಯಶಾಹಿ ಹೇರಿದ ನೀತಿಗಳನ್ನು ಅನುಸರಿಸಲು ಕಟಿಬದ್ಧವಾದಂತಿದೆ.

ಕಾಯಿದೆ ಭಂಗ ಚಳುವಳಿ

ಆದ್ದರಿಂದ ಅಂತಿಮವಾಗಿ ಎಡಪಕ್ಷಗಳು ದೇಶಾದ್ಯಂತ ಹಲವು ತಿಂಗಳು ಒಂದು ಪ್ರಭಾವಶಾಲೀ ಪ್ರಚಾರಾಂದೋಲನವನ್ನು ಆರಂಭಿಸಬೇಕಾಯಿತು. ನಂತರ ಭಾರತ ಸರಕಾರದ ವಿನಾಶಕಾರಿ ನೀತಿಗಳ ವಿರುದ್ಧ ಕಾಯಿದೆಭಂಗ ಚಳುವಳಿಗೆ ಕರೆ ನೀಡಬೇಕಾಯಿತು. ಕಾನೂನು ಮುರಿದು, ಜೈಲಿಗೆ ಹೋಗಿ, ಬಂದ ಎಲ್ಲಾ ಕಷ್ಟ–ನಷ್ಟಗಳನ್ನು ಎದುರಿಸಲು ಸಿದ್ಧರಿರುವ ಲಕ್ಷಾಂತರ ಸ್ವಯಂಸೇವಕರನ್ನು ಭರ್ತಿ ಮಾಡಿಕೊಳ್ಳಲಾಯಿತು. ನಮ್ಮ ಹಿಂದಿನ ತಲೆಮಾರಿನವರು ಅಪೂರ್ವ ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಬಂಡವಾಳಶಾಹಿ–ಭೂಮಾಲಕ ವರ್ಗಗಳು ತಮ್ಮ ಕೊಬ್ಬು ಬೆಳೆಸಿಕೊಳ್ಳಲಿಕ್ಕೆ ಬಳಸುತ್ತಿದ್ದಾರೆ, ಈಗ ಸಾಮ್ರಾಜ್ಯಶಾಹಿಗಳ ಆಕ್ರಮಣಗಳಿಂದಾಗಿ, ಭಾರತಗಳ ಕೈಗಾರಿಕೆಗಳನ್ನು ನಾಶ ಮಾಡಿ ಮತ್ತೆ ಅದನ್ನು ವಸಾಹತುವಾಗಿಸುವ ಅವರ ಪ್ರಯತ್ನಗಳಿಂದಾಗಿ ಈ ಸ್ವಾತಂತ್ರ್ಯಕ್ಕೆ ಕುತ್ತು ಬಂದಿದೆ ಎಂಬುದನ್ನು ಈ ಪ್ರಚಾರಾಂದೋಲನ ದೇಶದ ಜನತೆಗೆ ಅರಿವುಮಾಡಿಕೊಟ್ಟಿತು.

ಎಡಪಕ್ಷಗಳು ಹೊಸ ತಂತ್ರಜ್ಞಾನವನ್ನು ವಿರೋಧಿಸುತ್ತಿಲ್ಲ. ಆದರೆ ವಿದೇಶೀ ಬಂಡವಾಳ ಬರುತ್ತಿರುವುದು ಹೊಸ ತಂತ್ರಜ್ಞಾನ ಬೇಕಾಗಿರುವ ಕ್ಷೇತ್ರಗಳಲ್ಲಿ ಅಲ್ಲ, ಬದಲಾಗಿ ಹಿಡಿಯಷ್ಟು ಮೇಲ್ವರ್ಗದ ಜನರ ಭೋಗ ವಸ್ತುಗಳನ್ನು ತಯಾರಿಸುವ ಉದ್ದಿಮೆಗಳಿಗೆ ಎಂಬುದನ್ನು ಈ ಪ್ರಚಾರಾಂದೋಲನ ಕಾಲದಲ್ಲಿ ಜನರಿಗೆ ವಿವರಿಸಲಾಯಿತು. ದೇಶದ ಪ್ರಮುಖ ಹಿತಾಸಕ್ತಿಗಳನ್ನು ಬಲಿಗೊಟ್ಟು ಇದನ್ನು ಮಾಡ ಲಾಗುತ್ತಿದೆ. ದೇಶವನ್ನು ಲ್ಯಾಟಿನ್ ಅಮೇರಿಕಾ ಮಾದರಿಯ ದುರ್ಬಲ ಸನ್ನಿವೇಶದತ್ತ ತಳ್ಳ ಲಾಗುತ್ತಿದೆ., ಲ್ಯಾಟಿನ್ ಅಮೇರಿಕಾದಲ್ಲಿ 1970ರ ದಶಕದಲ್ಲಿ ಶ್ರೀಮಂತರ ಭೋಗವಸ್ತುಗಳ ಪೂರೈಕೆ ಹೆಚ್ಚಿಸಿ, ಆಮದು ಹೆಚ್ಚಿಸಿ, ಆಂತರಿಕ ಉತ್ಪಾದನೆ ಕುಗ್ಗಿಸಿದ ಪರಿಣಾಮವಾಗಿ 1980ರ ದಶಕದಲ್ಲಿ ವಿದೇಶೀ ಸಾಲದ ಹೊಳೆ ಬತ್ತಿದಾಗ, ಸಾಲಗಾರರು ತಮ್ಮ ಹಣವನ್ನು ಕೇಳಲಾರಂಭಿಸಿದಾಗ ಜನಸಾಮಾನ್ಯರನ್ನು ಹಿಂಡಿ–ಹಿಪ್ಪೆ ಮಾಡಲಾಯಿತು ಎಂದು ವಿವರಿಸಲಾಯಿತು.

ಇದರೊಂದಿಗೇ ಭಾರತದ ಈ ದಾರಿ ಹಿಡಿಯುವುದಲ್ಲದೇ ಬೇರೆ ಉಪಾಯವಿಲ್ಲ ಎಂಬ ಸರ್ಕಾರದ ಸುಳ್ಳು ಪ್ರಚಾರವನ್ನು ಅಲ್ಲಗಳೆದು ತಮ್ಮ ಪರ್ಯಾಯ ನೀತಿಗಳನ್ನು ಎಡಪಕ್ಷಗಳು ದೇಶದ ಮುಂದಿಟ್ಟವು. ಆಳುವ ಜನಗಳಲ್ಲಿ ಇಚ್ಛಾಶಕ್ತಿಯಿದ್ದರೆ ಬಹುಪಾಲು ಅವರ

‘ಕಾಂಗ್ರೆಸ್-ಬಾಜಪಾ ದೋನೋ ಯಾರ್(ಮಿತ್ರರು) ದೇಶ್ ಬೇಚನೋ ಕೋ ತಯ್ಯಾರ್’ ಇತ್ಯಾದಿ ಘೋಷಣೆಗಳೊಂದಿಗೆ ಕಾಯಿದೆಭಂಗ ಮಾಡಲು ಹೊರಟ ಸಿಪಿಐ(ಎಂ) ಸ್ವಯಂಸೇವಕರು



ಹಿತಾಸಕ್ತಿಗಳ ಬಗ್ಗೆ ಕಳಕಳಿಯಿದ್ದರೆ ಈ ಪರ್ಯಾಯ ನೀತಿಗಳನ್ನು ಖಂಡಿತಾ ಜ್ಯಾರಿಗೆ ತರಲು ಸಾಧ್ಯ ಎಂದು ಜನರಿಗೆ ಮನವರಿಕೆ ಮಾಡಿಸಿದವು.

ಜನತೆಯಿಂದ ಭಾರೀ ಸ್ಪಂದನ

ಈ ಪ್ರಚಾರಾಂದೋಲನಕ್ಕೆ ಜನತೆಯಿಂದ ಭಾರೀ ಸ್ಪಂದನ ದೊರೆಯಿತು. ಆಗಸ್ಟ್ 16 ರಂದೇ ಕಾಯಿದೆಭಂಗ, ಮೆರವಣಿಗೆ ಇತ್ಯಾದಿಗಳೆಲ್ಲ ದೇಶದಲ್ಲಿ ಮಾತ್ರವೇ ಅಲ್ಲ ವಿದೇಶಗಳಲ್ಲೂ ಗಮನ ಸೆಳೆದವು. ಕಾಯಿದೆ ಭಂಗ ಚಳುವಳಿ ನಡೆದದ್ದು ಒಂದೆರಡು ರಾಜ್ಯಗಳಲ್ಲಿ ಮಾತ್ರವೇ ಅಲ್ಲ, ಇಡೀ ದೇಶವನ್ನೇ ವ್ಯಾಪಿಸಿತು. ಎಡಪಕ್ಷಗಳ ರಾಜ್ಯ ಸಮಿತಿಗಳು ತಂತಮ್ಮ ನಿರ್ದಿಷ್ಟ ಪರಿಸ್ಥಿತಿಗಳಿಗನುಸಾರವಾಗಿ ತಮ್ಮದೆ ಕಾರ್ಯಕ್ರಮಗಳನ್ನು ರೂಪಿಸಿ ಜ್ಯಾರಿಗೊಳಿಸಿದವು. ಆಗಸ್ಟ್ 16 ರಿಂದ ಸೆಪ್ಟೆಂಬರ್ 9ವರೆಗಿನ ದಿನಗಳು ಸ್ವಾತಂತ್ರ್ಯ ಆಂದೋಲನದ ಉತ್ಸಾಹವನ್ನು ನೆನಪಿಸಿಕೊಟ್ಟವು.

ಸಹಜವಾಗಿಯೇ ಈ ಆಂದೋಲನ ಸರಾಗವಾಗಿ ನಡೆಯಲಿಲ್ಲ. ಅಮೃತಸರ, ಹೈದರಾಬಾದ್, ಭೂಪಾಲ್, ಮುಂಬೈ ಇತ್ಯಾದಿ ಹತ್ತು ಹಲವೆಡೆ ಪೋಲೀಸರು ಲಾಠೀ ಪ್ರಹಾರ, ಅಶ್ರುವಾಯು ಪ್ರಯೋಗ ನಡೆಸಿದರು. ಸ್ವಯಂ ಸೇವಕರನ್ನು ರಸ್ತೆಗಳಲ್ಲಿ ಎಳೆದೊಯ್ಯಲಾಯಿತು. ಕುದುರೆ ಲಾಳಗಳಿಂದ ಥಳಿಸಲಾಯಿತು. ಮಹಿಳಾ ಸ್ವಯಂ ಸೇವಕರನ್ನೂ ಬಿಡಲಿಲ್ಲ. ಅಮೃತ್‌ಸರದಲ್ಲಿ ಆಗಸ್ಟ್ 22 ರಂದು ಹಾಗೂ ಮತ್ತೆ 30 ರಂದು ಲಾಠೀ ಪ್ರಹಾರ ನಡೆಯಿತು. ಇದನ್ನು ಖಂಡಿಸಿ ಆಗಸ್ಟ್ 31 ರಂದು 25 ಸಾವಿರ ಕೈಗಾರಿಕಾ ಕಾರ್ಮಿಕರು ದೊಡ್ಡ ಮತ ಪ್ರದರ್ಶನ ಹಾಗೂ ಮುಷ್ಕರ ನಡೆಸಿದರು.

ಸರಕಾರಿ ಹತೋಟಿಯ ಮಾಧ್ಯಮ ಮಾತ್ರವಲ್ಲ, ತಮ್ಮ ವರ್ಗ ಗುಣಕ್ಕೆ ಅನುಗುಣವಾಗಿ ದೊಡ್ಡ ಬಂಡವಾಳಶಾಹಿ ಪತ್ರಿಕೆಗಳೂ ಎಡಪಕ್ಷಗಳ ಕರೆಗೆ ದೊರೆತ ಸ್ಪಂದನವನ್ನು ನಿರ್ಲಕ್ಷಿಸಲು ಸತತ ಪ್ರಯತ್ನ ನಡೆಸಿದವು.

ಹತ್ತು ಲಕ್ಷ ಸ್ವಯಂಸೇವಕರನ್ನು ಈ ಆಂದೋಲನದಲ್ಲಿ ಭರ್ತಿ ಮಾಡುವ ಗುರಿಯಿಟ್ಟುಕೊಳ್ಳಲಾಗಿತ್ತು. ಈ ಗುರಿಯನ್ನು ಸುಲಭವಾಗಿ ದಾಟಲು ಸಾಧ್ಯವಾಗಿದೆ. 11.5 ಲಕ್ಷ ಸ್ವಯಂಸೇವಕರು ಈ ಆಂದೋಲನದಲ್ಲಿ ಭಾಗವಹಿಸಿದರು. ಇದಲ್ಲದೆ ಪಶ್ಚಿಮ ಬಂಗಾಳದಲ್ಲಿ ಪ್ರತಿದಿನ ಪ್ರತಿ ಹಳ್ಳಿ–ಪಟ್ಟಣದಲ್ಲಿ ಧರಣಿ, ಮತಪ್ರದರ್ಶನಗಳಮೂಲಕ ತಮ್ಮದೇ ರೀತಿಯಲ್ಲಿ ಐದು ಲಕ್ಷ ಮಂದಿ ಭಾಗವಹಿಸಿದರು.

ಮಹತ್ವಪೂರ್ಣ ಆಂದೋಲನ

ಇದು ಸ್ವಾತಂತ್ರ್ಯಾನಂತರ ಎಡ ಪಕ್ಷಗಳು ನಡೆಸಿರುವ ಅತೀ ದೊಡ್ಡ ಅಖಿಲ ಭಾರತ ಆಂದೋಲನ. ಹಿಂದೆಂದಿಗಿಂತಲೂ ಬಹಳ ದೊಡ್ಡ ಪ್ರಮಾಣದಲ್ಲಿ ನಡೆದ ಆಂದೋಲನ. ಇತರ ಪಕ್ಷಗಳು, ಗುಂಪುಗಳು ಕೂಡಾ ಹಿಂದೆ ದೊಡ್ಡ ಆಂದೋಳನಗಳನ್ನು ನಡೆಸಿವೆ– ಉದಾಹರಣೆಗೆ ಪ್ರಜಾಪ್ರಭುತ್ವದ ಪ್ರಶ್ನೆಯ ಬಗ್ಗೆ. ಆದರೆ ಅವೆಲ್ಲಾ ಕೆಲವೇ ರಾಜ್ಯಗಳಿಗೆ ಸೀಮಿತಗೊಂಡಿದ್ದ ಆಂದೋಲನಗಳು. ಆರ್ಥಿಕ ನೀತಿಗಳು ಮತ್ತು ಆರ್ಥಿಕ ಸಾರ್ವಭೌಮತೆಯ ಪ್ರಶ್ನೆಯ ಮೇಲಂತೂ ಇದು ನಿಸ್ಸಂಶಯವಾಗಿಯೂ ಅತ್ಯಂತ ದೊಡ್ಡ ಹಾಗೂ ಅತ್ಯಂತ ವ್ಯಾಪಕ ಆಂದೋಲನ

ಈ ಮೂಲಕ ಎಡಪಕ್ಷಗಳು ದೇಶದ ಪ್ರತಿ ತಮ್ಮ ಕರ್ತವ್ಯಗಳನ್ನು ಚಾಚೂ ತಪ್ಪದೆ ಪಾಲಿಸಿದಂತಾಗಿದೆ. ಈಗಾಗಲೇ ಹೇಳಿರುವಂತೆ ಹೊಸ ಆರ್ಥಿಕ ನೀತಿಗಳು ದೇಶದ ಕೈಗಾರಿಕರಣಕ್ಕೇ ಬೆದರಿಕೆಯೊಡ್ಡಿ, ದೇಶವನ್ನು ಮತ್ತೆ ವಸಾಹತುವಾಗಿಸಹೊರಟಿವೆ. ವಿದೇಶಾಂಗ ನೀತಿ, ದೇಶದ ರಕ್ಷಣಾ ನೀತಿಗೆ ಸಂಬಂಧಪಟ್ಟಂತೆ ಈ ಹೊಸ ಆರ್ಥಿಕ ನೀತಿಗಳ ದುಷ್ಟಭಾವವನ್ನು ಆಗಲೇ ದೇಶ ಕಾಣಲಾರಂಭಿಸಿದೆ. ಎರಡನೆಯದಾಗಿ, ಈ ನೀತಿಗಳ ಫಲವಾಗಿ ಹಲವಾರು ಹಗರಣಗಳು ನಡೆದಿವೆ. ಜನಸಾಮಾನ್ಯರ ಹಿತಗಳನ್ನು ಬಲಿಗೊಟ್ಟು ರಾಜಕಾರಣಿಗಳು, ಅಧಿಕಾರಶಾಹಿಗಳು, ವ್ಯಾಪಾರಸ್ಥರು ಹಾಗೂ ಬಿಳಿ ಕಾಲರ್ ದಗಾಕೋರರ ಕೂಟ ಸಮೃದ್ಧಿ ಹೊಂದುತ್ತಿದೆ. ಮೂರನೆಯದಾಗಿ ಬಂಡವಾಳಶಾಹಿ– ಭೂಮಾಲಕ ಪಕ್ಷಗಳೆಲ್ಲಾ ಜನಗಳ ಅಸಂತೃಪ್ತಿಯನ್ನು ತಪ್ಪುದಾರಿಗೆಳೆಯುವಂತೆ ಅಥವಾ ಜಾತಿ, ಧರ್ಮ, ಪ್ರದೇಶದ ಹೆಸರಲ್ಲಿ ಅದರ ಲಾಭ ಗಿಟ್ಟಿಸಲು ತಂತ್ರಗಳನ್ನು ಅಂಗೀಕರಿಸಿವೆ. ಇಂತಹ ಸನ್ನಿವೇಶದಲ್ಲಿ ಎಡಪಕ್ಷಗಳು ಮಾತ್ರವೇ ಈ ತಂತ್ರಗಳ ವಿರುದ್ಧ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗಾಗಿ ಹೋರಾಡುತ್ತಿವೆ. ಎಡಪಕ್ಷಗಳ ಹಲವು ಅಮೂಲ್ಯ ಕಾರ್ಯಕರ್ತರು ಬಲಿದಾನ ನೀಡಿದ್ದಾರೆ. ಇತ್ತೀಚಿನ

ನವದೆಹಲಿಯಲ್ಲಿ ಐ.ಎಂ.ಎಫ್. ಕಛೇರಿಯೆದುರು ಮಹಿಳೆಯರ ಪ್ರತಿಭಟನೆ - ಕಾನೂನು ಉಲ್ಲಂಘನೆ




MYSORE LAMPS
RANGE OF LUMINAIRES
DOMESTIC
MFP - 120/140
MTBD - 140
MTML - 120
DECORATIVE
MTRM - 140/240/340
MTPP - 420
MPLI - 81/126
MSPLI - 71
MCRM - 2 x 11
INDUSTRIAL
MTI - 140/165/240/265
MTIV - 140/165/240/265
MWGV - 20
MHBMI - 250/400
MSBMI - 150/250
STREET LIGHTING
MTS - 140/240
MVLSI - 81 (C)/126 (C)
MSLI - 71 (C)
FLOOD LIGHTING
MAT - 2 (C)
MHFF - 500/1000
MSF - 1 (C)
ACCESSORIES
STP, HDP,
HDPC - 20/40/65
FSUC & FS2
MSIG - 10
MSIG - 30
MYSORE Lamps
The leading light
LAMPS TUBES LUMINAIRES LIGHTING SYSTEMS

ಕಾಯಿದೆ ಭಂಗ ಚಳುವಳಿ ಕೂಡಾ ದೇಶದ ವಿವಿಧೆಡೆ ವಿಚ್ಛಿದ್ರಕಾರಿ ಪ್ರವೃತ್ತಿಗಳು ತಲೆಯೆತ್ತಿರುವ ಸನ್ನಿವೇಶದಲ್ಲಿ ನಡೆಯಿತು. ಈ ಪ್ರವೃತ್ತಿಗಳ, ತಂತ್ರಗಳ ವಿರುದ್ಧ ಹೋರಾಡುವ, ನಮ್ಮ ಆರ್ಥಿಕ ಸಾರ್ವಭೌಮತೆಗೆ, ವಿದೇಶಾಂಗ ನೀತಿಗೆ, ರಕ್ಷಣಾ ನೀತಿಗೆ ಬಂದಿರುವ ಬೆದರಿಕೆಗಳನ್ನು ಐಕ್ಯತೆಯಿಂದ ಎದುರಿಸಬೇಕಾದ ಅಗತ್ಯವನ್ನು ಈ ಆಂದೋಲನದ ಸಮಯದಲ್ಲಿ ಜನರಿಗೆ ಮನವರಿಕೆ ಮಾಡಲಾಯಿತು.

ಎಡಪಕ್ಷಗಳ ಧೃಢ ನಿರ್ಧಾರ

ಇನ್ನೊಂದು ಗಮನಾರ್ಹ ಸಂಗತಿ– ಜನತೆ ಈ ಆಂದೋಲನಕ್ಕೆ ಬೃಹತ್ ಪ್ರಮಾಣದಲ್ಲಿ ಸ್ಪಂಧಿಸುವ ಮೂಲಕ ದೇಶದ ಎದುರಿಸುವ ಸವಾಲುಗಳನ್ನು ಎದುರಿಸುವಲ್ಲಿ ಎಡಶಕ್ತಿಗಳ ಸಾಮರ್ಥ್ಯವನ್ನು ಹೆಚ್ಚಿಸಿದ್ದಾರೆ.

ಖಂಡಿತವಾಗಿಯೂ ಈ ಹೋರಾಟ ಇಲ್ಲಿಗೇ ನಿಲ್ಲುವುದಿಲ್ಲ. ತಕ್ಷಣವೇ ದೇಶ ಎರಡು ದೊಡ್ಡ ಪ್ರಮಾಣದ ನೇರ ಕಾರ್ಯಾಚರಣೆಗಳನ್ನು ಕಾಣುತ್ತಿದೆ. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಕರೆಯ ಮೇರೆಗೆ ಸೆಪ್ಟೆಂಬರ್ 20ರಂದು 'ರೈಲ್ ರೋಕೋ' ಚಳುವಳಿ ಹಾಗೂ ಸೆಪ್ಟೆಂಬರ್ 29ರಂದು ರಾಷ್ಟ್ರವ್ಯಾಪಿ ಕೈಗಾರಿಕಾ ಮುಷ್ಕರ. ಜವಳಿ ಕಾರ್ಮಿಕರು ಸಂಸತ್ತಿನ ಚಳಿಗಾಲದ ಅಧಿವೇಶನದ ಎರಡನೇ ದಿನ ಸಂಸತ್ತಿನೆದುರು ಒಂದು ಸಮರಧೀರ ಮತಪ್ರದರ್ಶನ ನಡೆಸಲಿದ್ದಾರೆ.

ಇನ್ನು ಎಡಪಕ್ಷಗಳಿಗೆ ಮುಂಬರುವ ಚುನಾವಣೆಗಳೂ ಒಂದು ಸಮರಾಂಗಣ. ಅಲ್ಲಿ ಕಾಂಗ್ರೆಸ್ (ಐ) ಮತ್ತು ಬಿಜೆಪಿ ವಿರುದ್ಧ ಹೋರಾಟದಲ್ಲಿ ಈ ಪ್ರಶ್ನೆಗಳನ್ನೇ ಎತ್ತಲಾಗುತ್ತದೆ.

ಮುಂಬರುವ ಹೋರಾಟದಲ್ಲೂ ಕಾರ್ಮಿಕ ವರ್ಗ, ಕೃಷಿ ಕಾರ್ಮಿಕರು, ಬಡರೈತರು, ಇತರ ಶ್ರಮಜೀವಿಗಳು ಸಮರದ ಮುಂಚೂಣಿಯಲ್ಲಿರುತ್ತಾರೆ. ಇದು ನಮ್ಮ ಆಂದೋಲನದ ಭವಿಷ್ಯದ ಬಗ್ಗೆ ಭರವಸೆ ಮೂಡಿಸುವ ಅಂಶ. ಈ ಆಂದೋಲನವನ್ನು ತೀವ್ರವಾಗಿ ಬೆಸೆದರೆ ಅದು ಕೂಡಾ ಎಡಪಕ್ಷಗಳು ದೇಶದಲ್ಲಿ ಬೆಳೆದು ಬರುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸಲು ಹಾಗೂ ಒಂದು ಬಲವಾದ ಶಕ್ತಿಯಾಗಲು ಅನುವು ಮಾಡಿಕೊಡುತ್ತದೆ. ಇದು ಈಗಿನ ಅವಶ್ಯಕತೆ ಕೂಡಾ.


ಒಟ್ಟಿನಲ್ಲಿ ಎಂದಿನವರೆಗೆ ಸಾಮ್ರಾಜ್ಯಶಾಹಿಗಳ ಮತ್ತು ಈ ದೇಶದಲ್ಲಿ ಅವರೊಂದಿಗೆ ಶಾಮೀಲಾಗುವವರ ಆಟ ವಿಫಲಗೊಳ್ಳುವುದಿಲ್ಲವೋ ಅಲ್ಲಿಯವರೆಗೂ ಈ ಹೋರಾಟ ಮುಂದುವರಿಯುತ್ತದೆ. ಇದಕ್ಕಾಗಿ ಸ್ವಾತಂತ್ರ್ಯ ಹೋರಾಟದ ದಿನಗಳ ಸ್ಫೂರ್ತಿಯನ್ನು ಮತ್ತೆ ಬೆಳಗಿಸಲು, ಎಲ್ಲಾ ಕೋಮುಗಳು, ವಿಭಾಗಗಳನ್ನು ಒಗ್ಗಟ್ಟಾಗಿಸಿ ದೇಶಪ್ರೇಮದ ಜ್ಯೋತಿಯನ್ನು ಮತ್ತೆ ಬೆಳಗಿಸಲು ಎಡಪಕ್ಷಗಳು ತಮ್ಮ ಸಾಮರ್ಥ್ಯ ಮೀರಿ ದುಡಿಯುತ್ತವೆ. ನಮ್ಮಲ್ಲಿ ಅಪಾರ ಸಂಪನ್ಮೂಳವಿದೆ, ಬೆವರು ಸುರಿಸಿ ದುಡಿಯವ ಶ್ರಮಜೀವಿಗಳಿದ್ದಾರೆ. ಈ ಮೂಲಕ ನಮ್ಮ ದೇಶದ ಅಭಿವೃದ್ಧಿ ಸಾಧಿಸಲು ಸಾಧ್ಯ. ಸಾಮ್ರಾಜ್ಯಶಾಹಿ ಸೂರೆಕೋರರ ಒತ್ತಡಗಳಿಗೆ ಮಣಿಯದೆ ಸಾಧಿಸಲು ಸಾಧ್ಯ, ಬಡತನ, ನಿರುದ್ಯೋಗ, ಹಸಿವಿನಿಂದ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ, ಜನಗಳ ಆಕಾಂಕ್ಷೆಗಳನ್ನು ಈಡೇರಿಸಿ ವಿಶ್ವದಲ್ಲಿ ನಮ್ಮ ದೇಶಕ್ಕೊಂದು ಘನತೆಯ ಸ್ಥಾನ ಪಡೆಯಲು ಸಾಧ್ಯ ಎಂದು ಜನಗಳಿಗೆ ಮನವರಿಕೆ ಮಾಡಲು ಎಡಪಕ್ಷಗಳು ಶ್ರಮಿಸುತ್ತವೆ. ಇದೊಂದು ಭಾರೀ ಶ್ರಮದಾಯಕ ಹೋರಾಟ. ಆದರೆ ಎಡಪಕ್ಷಗಳು ಈ ಹೋರಾಟ ನಡೆಸಲು ದೃಢ ನಿರ್ಧಾರ ಮಾಡಿವೆ; ಈ ಉದಾತ್ತ ಧ್ಯೇಯ ಸಾಧನೆಯಲ್ಲಿ ಯಾವ ತ್ಯಾಗ, ಬಲಿದಾನಕ್ಕೂ ಅವು ಹಿಂತೆಗೆಯುವುದಿಲ್ಲ.

ಸೆಪ್ಟೆಂಬರ್ 9ರಂದು ನವದೆಹಲಿಯಲ್ಲಿ ಕಾನೂನುಭಂಗ ಮಾಡಿ ಬಂಧನಕ್ಕೊಳಗಾಗುತ್ತಿರುವ ಸುರ್ಜಿತ್ ಹಾಗೂ ಇತರ ಎಡಪಕ್ಷಗಳ ಮುಖಂಡರು.



ಈ ವರ್ಷ ಆಗಸ್ಟ್ 15ಕ್ಕೆ ಭಾರತ ಸ್ವತಂತ್ರವಾಗಿ 47 ವರ್ಷಗಳಾದವು. ಈ ಅವಧಿಯಲ್ಲಿ ನಮ್ಮ ನೆರೆಯ ದೇಶಗಳಂತೆ ಅದು ಮಿಲಿಟರಿ ಕೈಗೆ ಹೋಗಿಲ್ಲವೆಂಬುದು ನಮಗೆಲ್ಲಾ ಹೆಮ್ಮೆಯ ವಿಷಯ. 1950 ರಲ್ಲಿ ಸ್ಥಾಪಿಸಿದ ಸಂಸದೀಯ ಪ್ರಜಾಪ್ರಭುತ್ವ 1975-77 ರಲ್ಲಾದಂತೆ ಆಘಾತಗಳನ್ನು ಎದುರಿಸಿದರೂ ಮುಂದುವರೆದಿದೆ.

ಆದರೂ ಸತ್ಯ ಸಂಗತಿಯೆಂದರೆ ಇದೀಗ ರಾಜಕೀಯ ವ್ಯವಸ್ಥೆಯಲ್ಲಿ ಸದಾ ಹೆಚ್ಚುತ್ತಿರುವ ಬಿಕ್ಕಟ್ಟುಗಳ ಅವಧಿ. ಮುಂದೇನು ಪರಿಸ್ಥಿತಿ ಬೆಳೆದು ಬರಬಹುದು, ಸರಕಾರೀ ಯಂತ್ರದ ಮೇಲೆ ಹತೋಟಿ ಪಡೆಯಲು ರಾಜಕೀಯ ಪಕ್ಷಗಳ ನಡುವೆ, ಕೋಮುವಾದಿ ಸಂಘಟನೆಗಳ ನಡುವೆ ಹೇಗೆ ತಿಕ್ಕಾಟ ಹೆಚ್ಚುತ್ತಾ



—ಇ.ಎಂ.ಎಸ್.

ಸ್ವಾತಂತ್ರ್ಯಾನಂತರದ ಭಾರತ

ಈ ಬಿಕ್ಕಟ್ಟಿಗೆ ಪರಿಹಾರ ಹೇಗೆ?

47 ವರ್ಷಗಳಲ್ಲಿ ಭಾರತ ಮಿಲಿಟರಿ ಕೈಗೆ ಹೋಗಿಲ್ಲವೆಂಬುದು ಹೆಮ್ಮೆಯ ವಿಷಯವಾದರೂ, ಒಂದು ರಾಜಕೀಯ ಬಿಕ್ಕಟ್ಟು ದೇಶವನ್ನು ತ್ವರಿತವಾಗಿ ಆವರಿಸುತ್ತಿದೆಯೆಂಬುದೂ ಅಷ್ಟೇ ನಿಜ. ಆಳುವ ಕಾಂಗ್ರೆಸ್(ಐ) ಮತದಾರರ ವಿಶ್ವಾಸ ಕಳೆದುಕೊಂಡಿದೆ; ಆಂತರಿಕವಾಗಿ ಗುಂಪುಗಳಾಗಿ ಒಡೆದಿದೆ. ಆದರೆ ಅದರ ಸ್ಥಾನಕ್ಕೆ ಬರಬಲ್ಲ ಒಂದು ಪಕ್ಷ ಅಥವಾ ಕೂಟ ಕಾಣುತ್ತಿಲ್ಲ. ಇಂತಹ ರಾಜಕೀಯ ಅಸ್ಥಿರತೆಯಿಂದ ಹೊರ ಬರಲು ಸಾಧ್ಯವೇ?

ಎಡಪಕ್ಷಗಳು ಪ್ರತಿಪಾದಿಸುವ ಕಾರ್ಯಕ್ರಮದ ಮೂಲಕ ಸಾಧ್ಯ, ಎನ್ನುತ್ತಾರೆ ಹಿರಿಯ ಮಾರ್ಕ್ಸ್‌ವಾದಿ ರಾಜಕೀಯ ಚಿಂತಕ ಇ.ಎಂ.ಎಸ್ ನಂಬೂದಿರಿಪಾಡ್

ಹೋಗಬಹುದು ಎಂಬುದರ ಆಭಾಸ ಮಹಾತ್ಮಾ ಗಾಂಧೀಜಿಗಿತ್ತೆಂದು ಹೇಳಬಹುದು. ಅವರು ಈ ತಿಕ್ಕಾಟವನ್ನು ತಪ್ಪಿಸಬಯಸಿದ್ದರು. ಆದ್ದರಿಂದ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಬೇಕು ಎಂದಿದ್ದರು; ವಿವಿಧ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಲು ಒಂದು 'ಲೋಕಸೇವಕ ಸಂಘ' ರಚಿಸಬೇಕು ಎಂದಿದ್ದರು.

ಆದರೆ ಪ್ರಮುಖ ಕಾಂಗ್ರೆಸ್ ಮುಖಂಡರು, ಮಹಾತ್ಮಾ ಗಾಂಧಿಯವರ ನಿಕಟ ಸಹಯೋಗಿಗಳು, ಸಹಾಯಕರು, ಅವರ ಪರಮ ಶಿಷ್ಯರೆನಿಸಿಕೊಂಡ ಕೆಲವರು ಕೂಡಾ ಈ ಸಲಹೆಯನ್ನು ತಿರಸ್ಕರಿಸಿದರು; ಕಾಂಗ್ರೆಸ್ ಪಕ್ಷವನ್ನು ಒಂದು ರಾಜಕೀಯ ಪಕ್ಷವಾಗಿ ಮುಂದುವರಿಸಲು ನಿರ್ಧರಿಸಿದರು; ಇತರ ರಾಜಕೀಯ ಪಕ್ಷಗಳೊಂದಿಗೆ, ಕೋಮುವಾದಿ ಪಕ್ಷಗಳೊಂದಿಗೆ ಘರ್ಷಿಸಿ ರಾಜಕೀಯ ಅಧಿಕಾರ ಪಡೆಯಬೇಕೆಂದು ನಿರ್ಧರಿಸಿದರು.

30 ವರ್ಷ ಕಾಂಗ್ರೆಸ್ ಸತತವಾಗಿ ಸಂಸತ್ತಿನಲ್ಲಿ ಮತ್ತು ಹೆಚ್ಚಿನ ರಾಜ್ಯ ವಿಧಾನಮಂಡಲಗಳಲ್ಲಿ ಬಹುಮತ ಪಡೆಯಿತು. ಏಕೆಂದರೆ ವಿರೋಧ ಪಕ್ಷಗಳಲ್ಲಿ ಎಡಧೋರಣೆಗಳು, ಬಲಧೋರಣೆ ಗಳು, ರಾಷ್ಟ್ರೀಯವಾದಿ ಧೋರಣೆಗಳು, ಕೋಮುವಾದಿ ಪಕ್ಷಗಳು, ಜಾತೀವಾದಿ ಪಕ್ಷಗಳು ಇತ್ಯಾದಿಯಾಗಿ ಒಗ್ಗಟ್ಟು ಇರಲಿಲ್ಲ. ಆದ್ದರಿಂದ ಈ ಎಲ್ಲಾ ಪಕ್ಷಗಳು ಒಟ್ಟಾಗಿ ಅರ್ಧಕ್ಕೂ ಹೆಚ್ಚಿನ ಮತದಾರರ ಬೆಂಬಲ ಗಳಿಸಿದರೂ ಅಲ್ಪ ಮತ ಪಡೆಯುತ್ತಿದ್ದ

ದೇಶ ಸ್ವಾತಂತ್ರ್ಯ ಪಡೆದ ಮೇಲೆ ನಡೆದ ರಾಜಕೀಯ ಬೆಳವಣಿಗೆಗಳಿಂದ ಎದ್ದು ಬಂದ ಸಾಮಾಜಿಕ-ಆರ್ಥಿಕ ಸಮಸ್ಯೆಗಳ ವಸ್ತುನಿಷ್ಠ, ವಾಸ್ತವಿಕ ಪರಿಶೀಲನೆ ಮಾಡಬೇಕಿತ್ತು. ಆಳುವ ಕಾಂಗ್ರೆಸ್ ಪಕ್ಷ ಮತ್ತು ವಿರೋಧ ಪಕ್ಷಗಳಲ್ಲಿ ಎಡಪಕ್ಷಗಳನ್ನು ಬಿಟ್ಟು ಇತರ ಪಕ್ಷಗಳು ಇಂತಹ ಪರಿಶೀಲನೆ ಮಾಡುವಲ್ಲಿ ವಿಫಲಗೊಂಡಿವೆ. ಆದ್ದರಿಂದ ದೇಶ ಎದುರಿಸುತ್ತಿರುವ ದೊಡ್ಡ ಸಮಸ್ಯೆಗಳನ್ನು ಎದುರಿಸಲು ಅವು ಅಸಮರ್ಥವಾಗಿವೆ.

ಕಾಂಗ್ರೆಸ್ ಸಂಸತ್ತಿನಲ್ಲಿ, ವಿಧಾನಮಂಡಲಗಳಲ್ಲಿ ಬಹುಮತ ಪಡೆಯುತ್ತಿತ್ತು.

1957ರಲ್ಲಿ ಕೇರಳದಲ್ಲಿ, 1967ರಲ್ಲಿ ಆರೇಳು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು ರಾಜ್ಯ ಮಟ್ಟದಲ್ಲಿ ಗೆದ್ದವು. ಆದರೂ ಕೇಂದ್ರದಲ್ಲಿ 1977ರವರೆಗೆ ಸತತವಾಗಿ ಅಧಿಕಾರದಲ್ಲಿ ಮುಂದುವರೆದ ಕಾಂಗ್ರೆಸ್ ಪಕ್ಷ ವಿವಿಧ ತಂತ್ರಗಳಿಂದ ಅವನ್ನು ಉರುಳಿಸಿತು. 1977 ರಲ್ಲಿ ಕಾಂಗ್ರೆಸ್ ಅಧಿಕಾರದಿಂದ ಕಿತ್ತೆಸೆಯಲ್ಪಟ್ಟರೂ ಹೊಸ ಆಳುವ ಕೂಟದಲ್ಲಿ ಗುಂಪುಗಳಾಗಿ ಹಾಗೂ ಸೈದ್ಧಾಂತಿಕವಾಗಿ ಎಷ್ಟೊಂದು ಅನೈಕ್ಯತೆ ಇತ್ತೆಂದರೆ ೧೯೭೯ ರಲ್ಲಿ ಅದು ವಿಘಟನೆಗೊಂಡಿತು.

ಒಂದು ದಶಕದ ನಂತರ (೧೯೮೯ರಲ್ಲಿ) ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರದಿಂದ ಕಿತ್ತೆಸೆಯಲ್ಪಟ್ಟಿತು. ಆದರೆ ಹೊಸ ಆಳುವ ಪಕ್ಷವೂ ವಿಘಟನೆಹೊಂದಿತು. ಹೀಗೆ ಕಾಂಗ್ರೆಸ್ಸೇತರ ಪಕ್ಷಗಳಲ್ಲಿನ ರಾಜಕೀಯ ಭಿನ್ನತೆ ಮತ್ತು ಗುಂಪು ಅನೈಕ್ಯತೆಯಿಂದಾಗಿ ಕಾಂಗ್ರೆಸ್ ಕೇಂದ್ರದಲ್ಲಿ ೧೯೪೭ ರಿಂದ ೧೯೭೭ ರವರೆಗೆ ನಂತರ ೧೯೮೦ರಿಂದ ೧೯೮೯ ರವರೆಗೆ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಯಿತು. ೧೯೯೧ ರಲ್ಲಿ ಮತಗಳ ದೃಷ್ಟಿಯಿಂದ ಮಾತ್ರವಲ್ಲ, ಸ್ಥಾನಗಳ ದೃಷ್ಟಿಯಿಂದಲೂ ಅಲ್ಪಮತ ಪಡೆದ ಕಾಂಗ್ರೆಸ್ ಸಂಸತ್ತಿನಲ್ಲಿ ಅತಿ ಹೆಚ್ಚು ಸ್ಥಾನ ಪಡೆದ ಪಕ್ಷವಾಗಿಯಷ್ಟೇ ಮೂಡಿಬಂತು. ಆದರೆ ನಂತರ ವಿವಿಧ ಸಂಸದೀಯ ತಂತ್ರಗಳಿಂದ, ಹಲವು ಕಾಂಗ್ರೆಸ್ಸೇತರ ಪಕ್ಷಗಳನ್ನು ಮುರಿದು ನಿಚ್ಚಳ ಬಹುಮತ ಗಿಟ್ಟಿಸಿತು.

ಮುಂದಿನ ಸಂಸತ್ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಮತ ಪಡೆದು ಏಕಪಕ್ಷ ಸರಕಾರ ರಚಿಸಬಲ್ಲುದೋ, ಹಾಗಾಗದಿದ್ದರೆ ಕಾಂಗ್ರೆಸ್‌ನ ಸ್ಥಾನ ತಗೊಳ್ಳಬಲ್ಲ ಒಂದು ಪಕ್ಷ ಅಥವಾ ಪಕ್ಷಗಳ ಕೂಟ ಇದೆಯೇ ಎಂಬುದು ಚರ್ಚೆಯ ಪ್ರಶ್ನೆ.

ಕಾಂಗ್ರೆಸ್‌ನ ಸ್ಥಾನ ಪಡೆಯುವ ಆಕಾಂಕ್ಷೆ ಹೊತ್ತ ಬಿಜೆಪಿ ಸೈದ್ಧಾಂತಿಕ ಗೊಂದಲದಲ್ಲಿದೆ, ಗುಂಪುಗಾರಿಕೆಯಿಂದ ಒಡೆದಿದೆ. ಬಿಜೆಪಿಯೇತರ ವಿರೋಧಪಕ್ಷಗಳ ಒಂದು ಸಮರ್ಥ ಕೂಟ ರಚಿಸುವ ಎಲ್ಲಾ ಪ್ರಯತ್ನಗಳು ವಿಫಲಗೊಂಡಿವೆ. ಜನತಾದಳ, ರಾಷ್ಟ್ರೀಯರಂಗದಲ್ಲಿ ನಡೆಯುತ್ತಿರುವುದನ್ನು ನೋಡಿದರೆ ಎಡ, ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಂದು ಸಮರ್ಥ ಕೂಟ ಮೂಡಿಬರುವ ಭರವಸೆ ಕಾಣುತ್ತಿಲ್ಲ.

ಏಕೆ ರಾಜಕೀಯ ಅಸ್ಥಿರತೆ?

ಹೀಗೆ ತಕ್ಷಣಕ್ಕೆ ಕಂಡು ಬರುವುದು ಒಂದು ರಾಜಕೀಯ ಅಸ್ಥಿರತೆಯ ಚಿತ್ರ. ಆಳುವ ಕಾಂಗ್ರೆಸ್(ಐ) ಮತದಾರರ ವಿಶ್ವಾಸ ಕಳೆದುಕೊಂಡಿದೆ; ಆಂತರಿಕವಾಗಿ ಗುಂಪುಗಳಾಗಿ ಒಡೆದಿದೆ. ಅದರ ಸ್ಥಾನಕ್ಕೆ ಬರಬಲ್ಲ ಯಾವುದೇ ಒಂದು ಪಕ್ಷ ಅಥವಾ ಕೂಟ ಕಾಣುತ್ತಿಲ್ಲ. ಇಂತಹ ಅಸ್ಥಿರ ರಾಜಕೀಯ ಸ್ಥಿತಿಯಿಂದ ಹೊರಬರುವ ದಾರಿಯಿದೆಯೇ?

ಈ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳು–ಆಳುವ ಮತ್ತು ವಿರೋಧ ಪಕ್ಷಗಳು ಗಂಭೀರವಾಗಿ ಯೋಚಿಸಬೇಕು. ಏಕೆ ಇಂತಹ ರಾಜಕೀಯ ಅಸ್ಥಿರತೆಯ ಸನ್ನಿವೇಶ? ದೇಶ ಸ್ವಾತಂತ್ರ್ಯ ಪಡೆದ ಮೇಲೆ ನಡೆದ ರಾಜಕೀಯ ಬೆಳವಣಿಗೆಗಳಿಂದ ಎದ್ದು ಬಂದ ಸಾಮಾಜಿಕ–ಆರ್ಥಿಕ ಸಮಸ್ಯೆಗಳ ವಸ್ತುನಿಷ್ಠ, ವಾಸ್ತವಿಕ ಪರಿಶೀಲನೆ ಮಾಡಬೇಕಿತ್ತು. ಆಳುವ ಕಾಂಗ್ರೆಸ್ ಪಕ್ಷ ಮತ್ತು ವಿರೋಧ ಪಕ್ಷಗಳಲ್ಲಿ ಎಡಪಕ್ಷಗಳನ್ನು ಬಿಟ್ಟು ಇತರ ಪಕ್ಷಗಳು ಇಂತಹ ಪರಿಶೀಲನೆ ಮಾಡುವಲ್ಲಿ ವಿಫಲಗೊಂಡಿವೆ. ಆದ್ದರಿಂದ ದೇಶ ಎದುರಿಸುತ್ತಿರುವ ದೊಡ್ಡ ಸಮಸ್ಯೆಗಳನ್ನು ಎದುರಿಸಲು ಅವು ಅಸಮರ್ಥವಾಗಿವೆ.

ದೇಶದ ಆಳುವ ಪಕ್ಷವಾಗಿ ಕಾಂಗ್ರೆಸ್ ಭಾರತ ಸ್ವತಂತ್ರ ದೇಶವಾಗುತ್ತಿದ್ದಾಗ ತನ್ನ ಮುಂದೆ ಹಾಗೂ ಜನತೆಯ ಮುಂದೆ ಒಂದು ಕಣ್ಣೋಟವನ್ನು ಇಟ್ಟಿತ್ತು. ಭಾರತವನ್ನು ಬಂಡವಾಳಶಾಹೀ ದಾರಿಯಲ್ಲಿ ಅಭಿವೃದ್ಧಿ ಪಡಿಸುವ ದಾರಿ, ಪಾಳೆಯಗಾರಿ ವ್ಯವಸ್ಥೆಯ ಕಪಿಮುಷ್ಠಿಯನ್ನು ಒಡೆಯದೆ, ದುಡಿಯುವ ಕೋಟಿ–ಕೋಟಿ ಜನಗಳ ಸಾಮಾಜಿಕ–ರಾಜಕೀಯ ಉತ್ಸಾಹವನ್ನು ಚಿಮ್ಮಿಸದೆ ಹಿಡಿದ

ಒಂದು ಮಟ್ಟದವರೆಗೆ ನಮ್ಮ ಆರ್ಥಿಕದ ಆಧುನೀಕರಣ, ಕೈಗಾರಿಕೀಕರಣ ನಡೆದರೂ ಅದು ಶ್ರಮ ಜೀವಿಗಳನ್ನು ರಾಷ್ಟ್ರೀಯ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸೇರಿಯಲಿಲ್ಲ.

ದಾರಿ. ಕಾಂಗ್ರೆಸ್‌ನ ಈ ಬಂಡವಾಳಶಾಹಿ ಬೆಳವಣಿಗೆಯ ಕಾರ್ಯಕ್ರಮ ಕೋಟ್ಯಂತರ ಶ್ರಮಜೀವಿಗಳನ್ನು ಪಾಳೆಯಗಾರಿ ಪ್ರಭುಗಳ ಹಿಡಿತದಿಂದ ವಿಮೋಚನೆಗೊಳಿಸುವಲ್ಲಿಯೂ ವಿಫಲವಾಯಿತು. ಅಷ್ಟೇ ಅಲ್ಲ. ಬ್ರಿಟಿಷ್ ಗುತ್ತೇದಾರಿಗಳಿಂದಲೂ ಸಂಬಂಧ ಕಡಿದು ಕೊಳ್ಳಲಿಲ್ಲ. ಬ್ರಿಟಿಷ್‌ರ ರಾಜಕೀಯ ಆಳ್ವಿಕೆ ಮುಗಿಯಿತು. ಆದರೆ ಬ್ರಿಟಿಷ್ ಬಂಡವಾಳ ಶಾಹಿಗಳು ಉಳಿದರು. ಇತರ ಅಭಿವೃದ್ಧಿ ಹೊಂದಿದ ದೇಶಗಳ ಬಂಡವಾಳಶಾಹಿಗಳಿಗೂ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸಲು ಅವಕಾಶ ನೀಡಲಾಯಿತು.

ಆಳುವ ಪಕ್ಷದ ವಿಫಲತೆ

ದೇಶದ ಕೈಗಾರೀಕರಣದಲ್ಲಿ ಅವರು ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳ ನೆರವು ಪಡೆದರೂ ಎಲ್ಲಾ ದೇಶಗಳ ಬಂಡವಾಳಶಾಹಿಗಳಿಗೂ ನಮ್ಮ ಆರ್ಥಿಕವನ್ನು ಪ್ರವೇಶಿಸಲು ಅವಕಾಶ ನೀಡಲಾಯಿತು.

ಎಲ್ಲಕ್ಕೂ ಮಿಗಿಲಾಗಿ ಕಾರ್ಮಿಕರ, ರೈತರ ಉತ್ಪಾದಕ ಉತ್ಸಾಹವನ್ನು ಚಿಮ್ಮಿಸುವ ಬದಲು ಗ್ರಾಮೀಣ ಮತ್ತು ನಗರ ಜನಸಮೂಹಗಳ ವ್ಯವಸ್ಥಿತ ಶೋಷಣೆ ನಡೆಯಿತು. ಸದಾ ಏರುತ್ತಿರುವ ನಿರುದ್ಯೋಗ, ಜೀವನ ವೆಚ್ಚದಲ್ಲಿ ಏರಿಕೆ, ಹೆಚ್ಚುತ್ತಾ ಸಾಗಿರುವ ತೆರಿಗೆ, ಸಾಲದ ಹೊರೆ – ಇವೇ ಕೋಟ್ಯಾಂತರ ಶ್ರಮಜೀವಿಗಳ ಪಾಲಿಗೆ ಬಂದದ್ದು. ಇದರ ವಿರುದ್ಧ ನಡೆಸಿದ ಹೋರಾಟಗಳನ್ನು ನಿರ್ದಯವಾಗಿ ಹತ್ತಿಕ್ಕಲಾಗಿದೆ.

ಇವೆಲ್ಲದರ ಫಲಿತಾಂಶವೆಂದರೆ ಒಂದು ಮಟ್ಟದವರೆಗೆ ನಮ್ಮ ಆರ್ಥಿಕದ ಆಧುನೀಕರಣ, ಕೈಗಾರಿಕೀಕರಣ ನಡೆದರೂ ಅದು ಶ್ರಮ ಜೀವಿಗಳನ್ನು ರಾಷ್ಟ್ರೀಯ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸೆಳೆಯಲಿಲ್ಲ. ಜನಸಮೂಹಗಳಿಗೆ ಸೀಮಿತ ಪ್ರಮಾಣದಲ್ಲಿ ಪರಿಹಾರ ಕೊಡಲು ಪ್ರಯತ್ನಿಸಿದ ಎಡ ರಾಜ್ಯ ಸರಕಾರಗಳನ್ನು ಕೇಂದ್ರ ಸರಕಾರ ಮತ್ತು ಆಳುವ ಪಕ್ಷ ವಿವಿಧ ವಿಧಾನಗಳಿಂದ ಅಧಿಕಾರದಿಂದ ಉರುಳಿಸಿತು.

ಈ ಧೋರಣೆ ಜನ–ವಿರೋಧಿ ಮಾತ್ರವಲ್ಲ, ದೇಶ ವಿರೋಧಿ ಕೂಡಾ.

ಕಾರ್ಮಿಕ ಸಂಘಗಳು, ಕಿಸಾನ್ ಸಭಾಗಳು, ಕೃಷಿಕೂಲಿಕಾರರ ಸಂಘಟನೆ, ವಿದ್ಯಾರ್ಥಿ, ಯುವಜನ, ಮಹಿಳೆಯರು, ಬುದ್ಧಿಜೀವಿಗಳು, ಇಷ್ಟೇ ಅಲ್ಲ, ದೇಶದ ಸಾರ್ವಭೌಮತೆಯನ್ನು, ಆರ್ಥಿಕ ಸ್ವಾವಲಂಬನೆಯನ್ನು, ಸಾಂಸ್ಕೃತಿಕ ಮುನ್ನಡೆಯನ್ನು ರಕ್ಷಿಸಿಕೊಳ್ಳ ಬಯಸುವವರೆಲ್ಲಾ ಈ ಜಂಟಿ ಕಾರ್ಯಾಚರಣೆಗಿಳಿದಿದ್ದಾರೆ. ಎಡಪಕ್ಷಗಳು ಈ ರೀತಿ ದೇಶದ ನೀತಿ - ಧೋರಣೆಗಳಿಗೆ ಬೇರೆ ದಿಕ್ಕು ನೀಡಲು ದುಡಿಯುತ್ತಿವೆ.

1955ರಲ್ಲಿ ಹೊಸ ದಿಕ್ಕು ಪಡೆದ, ಬಲ ಪಡೆದ ಯೋಜನಾ ಪ್ರಕ್ರಿಯೆ ಬಿಕ್ಕಟ್ಟಿನಲ್ಲಿ ಬೀಳುವಂತಾಯಿತು. ಈ ಬಿಕ್ಕಟ್ಟಿಗೆ ಕಂಡು ಹಿಡಿದ ಭಾಗಶಃ ಮತ್ತು ತಾತ್ಕಾಲಿಕ ಪರಿಹಾರಗಳಿಂದಾಗಿ ಹೊಸ ಬಿಕ್ಕಟ್ಟುಗಳು ಮೂಡಿ ಬಂದವು. ಸರಕಾರ ಅನುಸರಿಸಿದ ವಿಧಾನಗಳಿಂದಾಗಿ ಅದು ಬಿಕ್ಕಟ್ಟನ್ನು ಪರಿಹರಿಸಲು ವಿಫಲಗೊಂಡಿತಷ್ಟೇ ಅಲ್ಲ, ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸಿತು.

ಇಂದಿರಾಗಾಂಧಿಯವರ ಎರಡನೇ ಅಧಿಕಾರಾವಧಿಯಲ್ಲಿ, ರಾಜೀವ್‌ಗಾಂಧಿ ಸರಕಾರದ ಅವಧಿಯಲ್ಲಿ ಬಿಕ್ಕಟ್ಟು ಇನ್ನಷ್ಟು ಹದಗೆಟ್ಟಿತು. ದೇಶ ಹೊಸ ಆರ್ಥಿಕ ನೀತಿಯನ್ನು ಅಂಗೀಕರಿಸಬೇಕಾದ ಒತ್ತಡ ಎದುರಿಸಿತು. ಇದರಿಂದಾಗಿ ದೇಶ ವಿಶ್ವ ಬ್ಯಾಂಕ್, ಐ.ಎಂ.ಎಫ್. ಗ್ಯಾಟ್ ಇತ್ಯಾದಿಗಳ ಮೇಲೆ ಅವಲಂಬಿಸಬೇಕಾಗಿ ಬಂತು. ನರಸಿಂಹರಾವ್ ಸರಕಾರ ಅಧಿಕಾರ ಸ್ವೀಕರಿಸುವ ವೇಳೆಗೆ ಬಿಕ್ಕಟ್ಟು ಎಷ್ಟೊಂದು ತೀವ್ರಗೊಂಡಿತ್ತೆಂದರೆ ದೇಶ ಇಂದು ತನ್ನ ಸ್ವಾತಂತ್ರ್ಯವನ್ನು, ಸಾರ್ವಭೌಮತೆಯನ್ನು ಕಳೆದುಕೊಳ್ಳುವ, ಒಂದು ಅರೆ–ವಸಾಹತುಮಟ್ಟಕ್ಕಿಳಿಯುವ ಅಪಾಯ



ಬೆಂಗಳೂರಿನಲ್ಲಿ ವಿದೇಶೀ ಬ್ಯಾಂಕ್‌ನೆದುರು ಪಿಕೆಟಿಂಗ್ ಮಾಡಲು ಹೊರಟ ವಿದ್ಯಾರ್ಥಿ-ಯುವಜನ, ಹೋಟೆಲ್ ಕಾರ್ಮಿಕರು ಪೋಲೀಸರೊಂದಿಗೆ ಸೆಣಸಾಡಬೇಕಾಯಿತು

ಶುಭಾಶಯಗಳೊಂದಿಗೆ,

ನಗರಸಭೆ ಕಾರ್ಯಾಲಯ, ವಿಜಾಪುರ

ಪ್ರಗತಿ ಪಕ್ಷಿನೋಟ

ಕಳೆದ ಬೇಸಿಗೆಯಲ್ಲಿ ನಗರವು ಭೀಕರ ಬರಲಾಗಲಕ್ಕೆ ತುತ್ತಾದಾಗ ನಗರಸಭೆ, ಸದಸ್ಯರುಗಳು, ಸಿಬ್ಬಂದಿ ವರ್ಗ ರಾತ್ರಿ ಹಗಲೆನ್ನದೇ ನಗರ ಜನತೆಗೆ ನೀರು ಪೂರೈಕೆ ಕಾರ್ಯದಲ್ಲಿ ತತ್ಪರರಾಗಿ ಬರಗಾಲಕ್ಕೆ ಎದಿರೇಟು ನೀಡಿ ಸಾರ್ವಜನಿಕ ಪ್ರಶಂಸೆಗೆ ಅರ್ಹವಾಗಿದೆ. ಈ ದಿಶೆಯಲ್ಲಿ ಸುಗಮ ನೀರು ಪೂರೈಕೆಗಾಗಿ ರೂ. 42.94 ಲಕ್ಷ ಮೊತ್ತ ವೆಚ್ಚ ಮಾಡಿದೆ.

ನಗರಸಭೆ ಸದಸ್ಯರುಗಳು ಅವಿರತ ಹೋರಾಟದಿಂದಾಗಿ ನಗರದ ಸಂಪೂರ್ಣ ನೀರು ಸರಬರಾಜು ಶಾಶ್ವತ ಸುಧಾರಣೆಗೆ ನೀರು ಪೂರೈಕೆಯ ಯಾವತ್ತೂ ನಿರ್ವಹಣೆಯನ್ನು ಜಲಮಂಡಳಿಗೆ ವಹಿಸಿಕೊಡುವ ಪ್ರಸ್ಥಾವನೆಗೆ ಸರ್ಕಾರದ ಮಂಜೂರಾತಿ ದೊರಕಿದೆ.

ಸರಕಾರದ ಅಭಿವೃದ್ಧಿ ಯೋಜನೆಗಳಲ್ಲೊಂದಾದ ಆಶ್ರಯ ಯೋಜನೆಯಡಿ ಮಂಜೂರಾದ 15 ಕೆರೆ 15 ಗುಂಟೆ ಸ್ಥಳದಲ್ಲಿ ಒಟ್ಟು 615 ನಿವೇಶನಗಳನ್ನು ರಚಿಸಿ ನಿವೇಶನ ರಹಿತ ಫಲಾನುಭವಿಗಳನ್ನು ಸಮಿತಿಯಿಂದ ಗುರ್ತಿಸಿ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಪರಿಶಿಷ್ಟ ಜಾತಿ, ಪಂಗಡದ ಜನರಿಗೆ ನೀಡಲಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಭೂಸೇನಾ ನಿಗಮಕ್ಕೆ ವಹಿಸಿಕೊಡುವ ಉದ್ದೇಶದಿಂದ ಸದರಿ ಸ್ಥಳವನ್ನು ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ನಗರ ಸಭೆಯು ಸಾರ್ವತ್ರಿಕ ಸುರಕ್ಷತೆ ಮತ್ತು ನಗರದ ನೈರ್ಮಲೀಕರಣದತ್ತ ಹೆಚ್ಚು ಗಮನ ಹರಿಸಿದ್ದು ವಾತಾವರಣ ಹಾಗೂ ಉತ್ತಮ ಪರಿಸರ ನಿರ್ಮಾಣಕ್ಕೆ ರೂ. 1.53 ಖರ್ಚು ಮಾಡಿದೆ.

ನಗರದಲ್ಲಿ ಬೆಳೆಯುತ್ತಿರುವ ಬಡಾವಣೆಗಳಲ್ಲಿ ಉತ್ತಮ ರಸ್ತೆ, ಒಳಚರಂಡಿ ಹಾಗೂ ಸಾರ್ವಜನಿಕ ಕಾಮಗಾರಿಗಳನ್ನು ಕೈಗೊಂಡು ರೂ. 1.22 ವೆಚ್ಚ ಮಾಡಲಾಗಿದೆ.

ಸಾರ್ವಜನಿಕ ಶಿಕ್ಷಣ ರಂಗದತ್ತ ಶೇ. 18 ರಡಿ ಬಾಲವಾಡಿ ಶಾಲೆಗಳನ್ನು ನಗರಸಭೆ ನಡೆಸುತ್ತಿದ್ದು. ಪರಿಶಿಷ್ಟ ಜಾತಿ ಬುಡಕಟ್ಟು ಜನಾಂಗದ ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಂಡು ರೂ. 6,09,025 ವೆಚ್ಚ ಮಾಡಿ ಶೇ. 100 ಪ್ರಗತಿ ಸಾಧಿಸಲಾಗಿದೆ. ಹಿಂದುಳಿದ ವರ್ಗಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರವು ನಗರ ಸಭೆಯು ಈ ದಿಶೆಯಲ್ಲಿ ಸಾಧಿಸಿದ ಶೇ. 100 ಪ್ರಗತಿಯನ್ನು ಮಾದರಿ ಎಂದು ಪ್ರಶಂಸಿಸಿದ್ದಾರೆ.

ಸಾರ್ವಜನಿಕ ಸುರಕ್ಷತೆಯಡಿ ರೂ. 9.93 ವೆಚ್ಚ ಮಾಡಿದ್ದು ಪ್ರಶಂಸನೀಯ.

ಕರ ವಸೂಲಿಯಲ್ಲಿ ಶೇ. 79.85 ಪ್ರಗತಿ ಸಾಧಿಸಲಾಗಿದೆ.

ವಿಜಾಪುರ ನಗರದಲ್ಲಿನ ಕೊಳಚೆ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಆಯ್ದುಕೊಂಡ ನಗರಗಳಲ್ಲಿ ವಿಜಾಪುರವು ಒಂದು ನಗರದ ಬಡವರಿಗಾಗಿ ಮೂಲ ಸೇವೆಗಳ ಯೋಜನೆ (ಯು.ಬಿ.ಎಸ್.ಪಿ.) ಯಡಿ ಐದು ಕೊಳಚೆ ಪ್ರದೇಶಗಳನ್ನು ಗುರ್ತಿಸಿ ರೂ. 1.50 ವೆಚ್ಚ ಮಾಡಲಾಗಿದೆ. ನೂರೈವತ್ತು ಮಹಿಳೆಯರನ್ನು ಸ್ವಯಂ ಸೇವಕಿಯರೆಂದು ಗುರುತಿಸಿ ಮಹಿಳೆಯರಿಂದಲೇ ಕಾರ್ಯಕ್ರಮದ ಅನುಷ್ಠಾನ ಕಾರ್ಯ ಪ್ರಗತಿ ಮುಂದುವರಿದಿದೆ.

ನೆಹರು ರೋಜ್‌ಗಾರ್ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಅರ್ಹ ಫಲಾನುಭವಿಗಳನ್ನು ಗುರುತಿಸಿ, ಅವರ ಅರ್ಜಿಗಳನ್ನು ಸಾಲ ಮಂಜೂರಾತಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಕಳುಹಿಸಿದೆ. ಶೆಲ್ಟರ್ ಅಪ್ ಗ್ರೇಡಶೆನ್ ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ರಿಪೇರಿ, ಛಾವಣಿ ಬದಲಾಯಿಸಲು ಶೌಚಾಲಯ ಸ್ನಾನ ಗೃಹ ನಿರ್ಮಾಣಕ್ಕೆ ರೂ. 3000.00 ಸಾಲ ರೂಪದಲ್ಲಿ ರೂ. 1000.00 ಸಹಾಯ ಧನ ರೂಪದಲ್ಲಿ 251 ಫಲಾನುಭವಿಗಳು ಲಾಭ ಪಡೆದಿರುತ್ತಾರೆ. ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ ನಡೆಸಲು 150 ವಿದ್ಯಾರ್ಥಿಗಳಿಗೆ ನಗರದ ವಿವಿಧ ತಾಂತ್ರಿಕ ಶಾಲೆಗಳಲ್ಲಿ ತಾಂತ್ರಿಕ ತರಬೇತಿ ನಗರಸಭೆಯ ವತಿಯಿಂದ ನೀಡಲಾಗಿದೆ.

ಸರ್ಕಾರದ ಅನೇಕ ಯೋಜನೆಗಳ ಅನುಷ್ಠಾನ ಕೈಗೊಂಡು ನಗರದ ಜನರ ಆಶೋತ್ತರಗಳಿಗೆ ಸ್ಪಂದಿಸುತ್ತ ಸಮಾಜವಾದದ ಸಮಾಜ ನಿರ್ಮಾಣದತ್ತ ನಗರ ಸಭೆಯು ದಾಪುಗಾಲು ಹಾಕುತ್ತಿದೆ.

ಎಲ್. ಸೊಣ್ಣೆಗೌಡ
ಪೌರಾಯುಕ್ತರು
ನಗರಸಭೆ ವಿಜಾಪೂರ

ಶಿವಾನಂದ ಪಾಟೀಲ
ಅಧ್ಯಕ್ಷರು
ನಗರಸಭೆ ವಿಜಾಪೂರ

ಎದುರಿಸುತ್ತಿದೆ.

ಈ ಸನ್ನಿವೇಶವನ್ನು ಎದುರಿಸುವುದು ಹೇಗೆ?


ಇದೇ ನಮ್ಮ ಮುಂದಿರುವ ಪ್ರಶ್ನೆಯ ಸಾರ: ಇದಕ್ಕೆ ಎಡಪಕ್ಷಗಳ ಉತ್ತರ –ಹೊಸ ಆರ್ಥಿಕ ನೀತಿಗಳನ್ನು ಸಾರಾಸಗಟು ಬದಲಿಸಬೇಕು. ವಿಶ್ವ ಬ್ಯಾಂಕ್, ಐ.ಎಂ.ಎಫ್., ಗ್ಯಾಟ್ ಇತ್ಯಾದಿಗಳ ಮೇಲೆ ಅವಲಂಬನೆಯೆಲ್ಲಾ ನಿಲ್ಲಬೇಕು. ಎಲ್ಲಾ ಉದ್ದಿಮೆಗಳ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಇವನ್ನೆಲ್ಲಾ ನಿಲ್ಲಿಸಬೇಕು. ದುಡಿಯುವ ಜನಗಳ ಸಾಮೂಹಿಕ ಸಂಘಟನೆಗಳು ಈ ಕಾರ್ಯಕ್ರಮವನ್ನು ಹಮ್ಮಿಕೊಂಡೇ ಜಂಟಿ ಕಾರ್ಯಾಚರಣೆಗಿಳಿದಿವೆ; ಕಾರ್ಮಿಕ ಸಂಘಗಳು, ಕಿಸಾನ್ ಸಭಾಗಳು, ಕೃಷಿಕೂಲಿಕಾರರ ಸಂಘಟನೆ, ವಿದ್ಯಾರ್ಥಿ, ಯುವಜನ, ಮಹಿಳೆಯರು, ಬುದ್ಧಿಜೀವಿಗಳು, ಇಷ್ಟೇ ಅಲ್ಲ, ದೇಶದ ಸಾರ್ವಭೌಮತೆಯನ್ನು, ಆರ್ಥಿಕ ಸ್ವಾವಲಂಬನೆಯನ್ನು, ಸಾಂಸ್ಕೃತಿಕ ಮುನ್ನಡೆಯನ್ನು ರಕ್ಷಿಸಿಕೊಳ್ಳ ಬಯಸುವವರೆಲ್ಲಾ ಈ ಜಂಟಿ ಕಾರ್ಯಾಚರಣೆಗಿಳಿದಿದ್ದಾರೆ.

ಎಡಪಕ್ಷಗಳು ಈ ರೀತಿ ದೇಶದ ನೀತಿ –ಧೋರಣೆಗಳಿಗೆ ಬೇರೆ ದಿಕ್ಕು ನೀಡಲು ದುಡಿಯುತ್ತಿವೆ. ಆದರೆ ಭಾರತದ ಜನಸಂಖ್ಯೆಯಲ್ಲಿ ಅವರಿನ್ನೂ ಸಣ್ಣ ಸಂಖ್ಯೆ. ಬಹುಪಾಲು ಜನಗಳು ಹೆಚ್ಚೆಚ್ಚು ಭ್ರಮನಿರಸನಗೊಳ್ಳುತ್ತಿದ್ದರೂ ಎಡಪಕ್ಷಗಳು ಪ್ರತಿಪಾದಿಸುವ ಕಾರ್ಯಕ್ರಮಕ್ಕಾಗಿ ಹೋರಾಡುವ ದಾರಿಯನ್ನು ಇನ್ನೂ ಕಂಡುಕೊಳ್ಳಬೇಕಷ್ಟೆ. ತಮ್ಮ ಕಾರ್ಯಕ್ರಮಕ್ಕೆ ಎಡಪಕ್ಷಗಳು ಅವರನ್ನು ಗೆದ್ದುಕೊಳ್ಳಬೇಕಾಗಿದೆ.


ಇತರ ಹಲವು ಪಕ್ಷಗಳು ಇನ್ನೂ ಚಂಚಲತೆಯನ್ನೇ ತೋರುತ್ತಿವೆ. ಬಿಜೆಪಿಗಳಂತಹ ಕೆಲವು ಪಕ್ಷಗಳಂತೂ ಎಡಪಕ್ಷಗಳು ಪ್ರತಿಪಾದಿಸುವ ಕಾರ್ಯಕ್ರಮವನ್ನು ನೇರವಾಗಿ ವಿರೋಧಿಸುವಂತಹವು. ನರಸಿಂಹರಾವ್ ನೇತೃತ್ವದ ಕೇಂದ್ರ ಸರಕಾರದ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಬದಲಿಸಲು ಜನಗಳಲ್ಲಿ ಒಗ್ಗಟ್ಟು ಮೂಡಿಸುವ ಬದಲು ಅವರು ಕೋಮು ಆಧಾರದ ಮೇಲೆ ಭಾರತೀಯ ಜನಗಳ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುತ್ತಿದ್ದಾರೆ. ಇದೇ ರೀತಿ ಕಾನ್ಶೀರಾಮ್‌ರವರ ಬಿ.ಎಸ್.ಪಿ. ಯಂತಹವು ಜಾತಿ ಆಧಾರದ ಮೇಲೆ ಜನಗಳ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುತ್ತಿವೆ. ಆದ್ದರಿಂದ ಜಾತಿ, ಕೋಮು ಶಕ್ತಿಗಳು ಒಡ್ಡಿರುವ ಅಪಾಯದ ಬಗ್ಗೆ ಜನರಿಗೆ ಎಡ, ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳು ತಿಳುವಳಿಕೆ ನೀಡಬೇಕಾಗಿದೆ.

ದೇಶವನ್ನು ತ್ವರಿತವಾಗಿ ಆವರಿಸುತ್ತಿರುವ ರಾಜಕೀಯ ಬಿಕ್ಕಟ್ಟನ್ನು ಮೇಲಿಂದ ಸಂಸದೀಯ ಕಸರತ್ತುಗಳ ಮೂಲಕ ಪರಿಹರಿಸಲು ಸಾಧ್ಯವಿಲ್ಲ. ಆದರೆ ಕೆಲವು ಪ್ರಜಾಪ್ರಭುತ್ವ ಶಕ್ತಿಗಳು ಆ ರೀತಿ ಯೋಚಿಸುತ್ತಿರುವಂತಿದೆ. ಈಗ ಬೇಕಾಗಿರುವುದು ಮೇಲಿನಿಂದ ಇಂತಹ ಕಸರತ್ತುಗಳಲ್ಲ, ಕೆಳಗಿನಿಂದ ಸಾಮೂಹಿಕ ಕಾರ್ಯಾಚರಣೆಗಳು– ಎಡಪಕ್ಷಗಳು ಮಾಡುತ್ತಿರುವಂತೆ. ಮೂರು ವಾರಗಳ ಕಾಯಿದೆ ಭಂಗ ಚಳುವಳಿ ಇದಕ್ಕೆ ನೆರವಾಗುವ ನಿರೀಕ್ಷೆಯಿದೆ. ಎಡಪಕ್ಷಗಳ ಈ ಕರೆಗೆ ಇತರ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳೂ ಸ್ಪಂದಿಸುತ್ತವೆ ಎಂಬ ಆಸೆ ನಮ್ಮದು.

ದೇಶವನ್ನು ತ್ವರಿತವಾಗಿ ಆವರಿಸುತ್ತಿರುವ ರಾಜಕೀಯ ಬಿಕ್ಕಟ್ಟನ್ನು ಮೇಲಿಂದ ಸಂಸದೀಯ ಕಸರತ್ತುಗಳ ಮೂಲಕ ಪರಿಹರಿಸಲು ಸಾಧ್ಯವಿಲ್ಲ. ಆದರೆ ಕೆಲವು ಪ್ರಜಾಪ್ರಭುತ್ವ ಶಕ್ತಿಗಳು ಆ ರೀತಿ ಯೋಚಿಸುತ್ತಿರುವಂತಿದೆ. ಈಗ ಬೇಕಾಗಿರುವುದು ಮೇಲಿನಿಂದ ಇಂತಹ ಕಸರತ್ತುಗಳಲ್ಲ, ಕೆಳಗಿನಿಂದ ಸಾಮೂಹಿಕ ಕಾರ್ಯಾಚರಣೆಗಳು– ಎಡಪಕ್ಷಗಳು ಮಾಡುತ್ತಿರುವಂತೆ



ಕಾಯಿದೆಭಂಗ ಚಳುವಳಿ ವಿಜಯವಾಡಾದಲ್ಲಿ ಒಂದು ದೃಶ್ಯ



ಯಾಕೆ ಈ ಹೊಸ ಆರ್ಥಿಕ ನೀತಿ?

ವಿದೇಶೀ ಬಂಡವಾಳಿಗರನ್ನು, ಸಾಮ್ರಾಜ್ಯಶಾಹಿಗಳನ್ನು ಅಂಬಾರಿಯಲ್ಲಿ ಕೂರಿಸಿ ರತ್ನಗಂಬಳಿ ಹಾಸಿ ಭೋಪರಾಕು ಹೇಳುವ ರಾವ್ ಸರಕಾರದ 'ಹೊಸ ಆರ್ಥಿಕ ನೀತಿ'ಗಳಲ್ಲಿ ಹೊಸತೇನಿದೆ? ಹಳೆಯ ಆರ್ಥಿಕ ನೀತಿಗಿಂತ ಇದು ಹೇಗೆ, ಏಕೆ ಭಿನ್ನವಾಗಿದೆ? ಜವಾಹರಲಾಲ್ ನೆಹರೂ ಕಾಲದಿಂದ ನರಸಿಂಹರಾವ್ ಕಾಲದ ವರೆಗೆ ನಮ್ಮ ದೇಶದ ಆಳುವ ವರ್ಗಗಳ ಸ್ವರೂಪ ಬದಲಾಗಿದೆಯೇ? ರಾವ್ ಸರಕಾರ ಈ ದಾರಿಯನ್ನು ಏಕೆ ಆರಿಸಿಕೊಂಡಿದೆ? 'ಹೊಸ ಆರ್ಥಿಕ ನೀತಿಗಳ'ನ್ನು ಎಡಪಂಥೀಯರು, ಪ್ರಗತಿಪರರು ಏಕೆ ವಿರೋಧಿಸುತ್ತಾರೆ?

ಜಿ.ಎಸ್. ಮಣಿ
ಶರತ್‌ಚಂದ್ರ

ಸಮಾಜವಾದಿ ತಳಹದಿಯ ಸಮಾಜದ ನಿರ್ಮಾಣದ ಉದ್ದೇಶದ ಬಗ್ಗೆ ನಮ್ಮ ಸಂವಿಧಾನವೇ ಒಡೆದು ಹೇಳುತ್ತದೆ. ಸ್ವತಂತ್ರ ಭಾರತದ ಆರ್ಥಿಕ ನೀತಿಯನ್ನು ರೂಪಿಸಿದ ಜವಾಹರಲಾಲ್ ನೆಹರೂ ಸಮಾಜವಾದದ ಬಗ್ಗೆ ಅರಿವುಳ್ಳ ವ್ಯಕ್ತಿಯಾಗಿದ್ದರು. ಸಮಾಜವಾದ ಮತ್ತು ಬಂಡವಾಳವಾದಗಳ ಅತ್ಯುತ್ತಮ ಗುಣಗಳನ್ನು ಬೆರೆಸಿ "ಮಿಶ್ರ ಆರ್ಥಿಕ ನೀತಿ" ಎಂದು ನೆಹರು ತಮ್ಮ ಆರ್ಥಿಕ ನೀತಿಯನ್ನು ಕರೆದರು: ನಿಜ, ಇದು ಸಮಾಜವಾದದತ್ತ ಒಲವಿರುವಂತಹ ದ್ದೆಂದು ಮಾರ್ಕ್ಸ್‌ವಾದಿಗಳು ಎಂದೂ ನಂಬಿರಲಿಲ್ಲ. ಆದರೂ ಪ್ರಭುತ್ವದ (ಸರಕಾರದ) ಹಿಡಿತದಲ್ಲಿರುವ ಸಾರ್ವಜನಿಕ ವಲಯ ಎಂಬ ಪ್ರಭುತ್ವ ಬಂಡವಾಳವಾದ ಇದರಲ್ಲಿ ಇತ್ತು. ಆದರೆ ಇದು ಪೂರ್ಣ ಮಾರುಕಟ್ಟೆ ಆರ್ಥಿಕ ನೀತಿಗಿಂತ ಒಳ್ಳೆಯ ನೀತಿ ಎಂದು ಎಡ ಪಂಥೀಯರೆಲ್ಲ ಒಪ್ಪಿದ್ದರು. ಸಾರ್ವಜನಿಕವಲಯ ನಮ್ಮ ದೇಶದಲ್ಲಿ ಬೃಹತ್ತಾಗಿ ಬೆಳೆದು ಬಂತು. ದೇಶದ ಆರ್ಥಿಕದಲ್ಲಿ ದೊಡ್ಡ ಪಾಲು ಮತ್ತು ಪಾತ್ರವನ್ನು ಇಂದದು ಹೊಂದಿದೆ.

ಈ 'ಪ್ರಭುತ್ವ ಬಂಡವಾಳವಾದ' ಖಂಡಿತ ವಾಗಿಯೂ ದೇಶದ ದೊಡ್ಡ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ನಮ್ಮ ದೇಶಿ ಬಂಡವಾಳಿಗರಿಗೆ ಅಂತರ್‌ರಚನೆ ಸೌಕರ್ಯಗಳ ಅಂದರೆ ಉದ್ದಿಮೆ ಸ್ಥಾಪಿಸಲು ಬೇಕಾದ ಮೂಲಭೂತ ಸೌಕರ್ಯಗಳ ಮೂಲಕ ಅವರ ಉದ್ದಿಮೆಗಳು ಸ್ಥಾಪಿತಗೊಳ್ಳಲು, ಉತ್ತಮವಾಗಿ ನಡೆಯಲು ಇದು ಸಹಾಯ ಮಾಡಿದೆ. ಅಂತರ್‌ರಚನಾ ಸೌಕರ್ಯಗಳಲ್ಲಿ ಹಣಹೂಡದೇ ಲಾಭ ಪಡೆಯುವ ಅವಕಾಶ ಅವರದಾಯಿತು. ಹಾಗೆಯೇ ಬ್ಯಾಂಕುಗಳ ರಾಷ್ಟ್ರೀಕರಣ ದೊಡ್ಡ ಪ್ರಮಾಣದಲ್ಲಿ ಸುಲಭವಾಗಿ ಹಣಕಾಸು ಬಂಡವಾಳ ಅವರಿಗೆ ದೊರೆಯಲು ಅನುಕೂಲ ಮಾಡಿಕೊಟ್ಟಿತ್ತು.

ಹೀಗಿರುವಾಗ ಈಗ ಒಮ್ಮೆಲೆ 'ಹೊಸ ಆರ್ಥಿಕ ನೀತಿ'ಯ ಹೆಸರಿನಲ್ಲಿ ಸಾರ್ವಜನಿಕ ವಲಯದ ಮಾರಾಟ, ಖಾಸಗೀಕರಣ, ಉದಾರೀಕರಣ ಇತ್ಯಾದಿಗಳೆಲ್ಲ ಯಾಕೆ ಬಂದಿವೆ? ಇದು ಗಾಢವಾದ ಪ್ರಶ್ನೆ. ಆಳುವ ವರ್ಗಕ್ಕೆ ಹಿಂದೆ ಅನುಕೂಲಕರವಾಗಿದ್ದ ಆರ್ಥಿಕ ನೀತಿ ಈಗ ಅವರಿಗೆ ಪ್ರತಿಕೂಲವಾಗಿ ಕಾಣುತ್ತಿರುವುದು ಏಕೆ? ನಮ್ಮ ದೇಶದ ಬಂಡವಾಳಶಾಹಿ ಒಮ್ಮೆಲೆ ತನ್ನ ಬೆನ್ನೆಲುಬನ್ನು ಕಳೆದುಕೊಂಡು ಸಾಮ್ರಾಜ್ಯಶಾಹಿಗಳ ತಾಳಕ್ಕೆ ತಕ್ಕಂತೆ ಕುಣಿವ ವರ್ಗವಾಗಿ ಬಿಟ್ಟದೆಯೆ? ಈ ಬದಲಾವಣೆಯ ಹಿಂದಿನ ಬೆಳವಣಿಗೆಗಳೇನು? ಇದರ ವರ್ಗ ಸ್ವರೂಪವೇನು? ಎಂಬುದನ್ನು ವಿಶ್ಲೇಷಿಸುವ ಪ್ರಯತ್ನ ಈ ಲೇಖನ.

ಸಮಾಜವಾದವಲ್ಲ –ಸರ್ಕಾರೀ ಬಂಡವಾಳವಾದ

ನಮ್ಮ ಸ್ವಾತಂತ್ರ್ಯದ ಅವಧಿ ಎರಡನೇ ಮಹಾಯುದ್ಧದ ನಂತರದ ಅವಧಿ. ಈ ಅವಧಿಯಲ್ಲಿ ಜಗತ್ತಿನಾದ್ಯಂತ ಹಲವು ದೇಶಗಳಲ್ಲಿ 'ಪ್ರಭುತ್ವ ಬಂಡವಾಳ'ದ ಬೆಳವಣಿಗೆ ದೊಡ್ಡ ಪಾತ್ರ ವಹಿಸಿತು. ಇದು ತೆರಿಗೆ ನೀತಿ ಮತ್ತು ವ್ಯಾಪಾರಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ದೊಡ್ಡ ಪ್ರಮಾಣದ ಹಣಹೂಡಿಕೆಯನ್ನು ಪ್ರಭುತ್ವ ಅಂದರೆ ಸರಕಾರ ಮಾಡಿತು. ಇದಕ್ಕೆ ಇದ್ದ ಸೈದ್ಧಾಂತಿಕ ಸ್ಫೂರ್ತಿ ಎರಡು ಸೆಲೆಗಳಿಂದ ಬಂದಂತವು– ಸೋವಿಯತ್ ಯೂನಿಯನ್ನಿನ ಅತ್ಯಂತ ಯಶಸ್ವಿ ಮಾದರಿಯಾಗಿ ಯೋಜನಾ ಪದ್ಧತಿ ಒಂದನೇಯದು; ಕೀನ್ಸನ ಆರ್ಥಿಕ ನೀತಿಯಾದ "ಬೇಡಿಕೆಯ ನಿರ್ವಹಣೆ" ಇನ್ನೊಂದು. ಬಂಡವಾಳಶಾಹಿಯ

ಜೀವಾಳವೆನ್ನಲಾದ 'ಮಾರುಕಟ್ಟೆ ಶಕ್ತಿ'ಗಳ ವೈಫಲ್ಯದಿಂದಾಗಿಯೇ ಈ ಹೊಸ ಹುಡುಕಾಟ ಎರಡನೇ ಮಹಾಯುದ್ಧದ ನಂತರ ನಡೆದಿತ್ತು.

ಆದರೆ ಈ 'ಆರ್ಥಿಕ ನೀತಿ' ಆಯಾ ದೇಶದ ವರ್ಗ ಶಕ್ತಿಯ ಸ್ವರೂಪಕ್ಕೆ ತಕ್ಕಂತೆ ಬೇರೆ ಬೇರೆಯಾಗಿದ್ದವು. ಉದಾಹರಣೆಗೆ ಪಾಕಿಸ್ತಾನ ಮತ್ತು ಮೊದಲ ಸ್ವಲ್ಪ ಅವಧಿಯವರೆಗೆ ಜಪಾನಿನಲ್ಲಿ ಪ್ರಭುತ್ವ ಹಣಕಾಸು ಹೂಡಿ ಬೆಳೆಸಿದ ಉದ್ದಿಮೆಗಳನ್ನು ಖಾಸಗೀಯವರಿಗೆ ವರ್ಗಾಯಿಸಲಾಯಿತು. ಆದರೆ ಭಾರತದಂತಹ ದೇಶದಲ್ಲಿ ದುಡಿವ ವರ್ಗ ಮತ್ತು ಪುಟ್ಟ ಬಂಡವಾಳಶಾಹಿ ಶಕ್ತಿಯುತವಾಗಿದ್ದುದರಿಂದ ಇಂತಹದ್ದು ಆಗದೆ ಸಾರ್ವಜನಿಕ ವಲಯ ಅಥವಾ ಪ್ರಭುತ್ವ ಬಂಡವಾಳಶಾಹಿ ವಲಯ ಬೆಳೆಯಿತು.

ಇಂದು ಆಳುವ ವರ್ಗದ ಮಾಧ್ಯಮಗಳು ಸ್ವಾತಂತ್ರ್ಯಾನಂತರದಲ್ಲಿ ಇದ್ದುದೆಲ್ಲ ಸಮಾಜವಾದ, ಅದರಿಂದ ಇಂದಿನ ಸ್ಥಿತಿ ಬಂದಿದೆ, 'ಲೈಸನ್ಸು ಪರ್ಮಿಟು ರಾಜ್ಯಭಾರ'ವಿದ್ದುದರಿಂದ ಆರ್ಥಿಕ ಬೆಳವಣಿಗೆ ಸಾಧ್ಯವಿರಲಿಲ್ಲ, ಈಗ ಇವೆಲ್ಲವನ್ನು ತೊಡೆದು ಹಾಕುವುದೇ ಉದಾರೀಕರಣದ ಉದ್ದೇಶ, ಇದರಿಂದಲೇ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂಬ ವಾದಗಳನ್ನು ಹೂಡುತ್ತಿವೆ. ಆದರೆ ನಾವು ಗಮನದಲ್ಲಿಟ್ಟುಕೊಳ್ಳಬೇಕಾದದ್ದು ನಮ್ಮಲ್ಲಿದ್ದುದು ಸಮಾಜವಾದವಲ್ಲ ಬದಲಾಗಿ ಬಂಡವಾಳವಾದವೇ. ಆದರೆ ಸಾಮ್ರಾಜ್ಯಶಾಹಿಗಳಿಗೆ ಎದುರಾಗಿ ನಿಂತು ಸ್ವಾವಲಂಬನೆ ಸಾಧಿಸುವ ಛಲದ ಬಂಡವಾಳವಾದ ಅದು. "ಲೈಸೆನ್ಸು ಪರ್ಮಿಟು ರಾಜ್ಯ"ವಾದರೂ ಆಳುವ ವರ್ಗ ತನ್ನೊಳಗಿನ ಗುಂಪು ಕಿತ್ತಾಟಕ್ಕೆ ಅನುಕೂಲವಾಗುವಂತೆ ರೂಪಿಸಿಕೊಂಡಿದ್ದು. ಇದರ ಜೊತೆಗೆ ಆಗಾಗ ದುಡಿವ ವರ್ಗದ ಹೋರಾಟಗಳಿಗೆ ಅನಿವಾರ್ಯವಾಗಿ ಮಣಿದು ಅವರ ಹಿತದ ಕೆಲವು ನಿರ್ಧಾರಗಳಾಗಿರಬಹುದು. ಅಷ್ಟೇ.

'ಉದಾರೀಕರಣ'ದ ಮಂತ್ರವೇಕೆ?

ಈಗ ಆರ್ಥಿಕ ಪುನರ್‌ರಚನೆಯ ಹೆಸರಿನಲ್ಲಿ ನಮ್ಮ ಮಾರುಕಟ್ಟೆ ಮತ್ತು ನಮ್ಮ ನೈಸರ್ಗಿಕ ಸಂಪತ್ತನ್ನು ಸಾಮ್ರಾಜ್ಯಶಾಹಿ ಬಂಡವಾಳಕ್ಕೆ ಯಾವುದೇ ಅಡೆತಡೆಯಿಲ್ಲದೆ ಲಭ್ಯವಾಗುವಂತೆ ಮಾಡಲಾಗುತ್ತಿದೆ. ದೇಶದ ಸಾರ್ವಭೌಮತ್ವವನ್ನೇ ಹಾಳುಗೆಡಹುವ ಈ ಕ್ರಮ ಏಕೆ? ತಕ್ಷಣದ ಕಾರಣವಾಗಿ 1991ರ 'ವ್ಯಾಪಾರ ಬಾಕಿ' ಮತ್ತು ವಿದೇಶೀ ವಿನಿಮಯ ಕೊರತೆ ಕಾಣಬಹುದಾದರೂ ಅಂತಹ ಪರಿಸ್ಥಿತಿಯನ್ನುಂಟುಮಾಡಿದ ನೀತಿಗಳನ್ನು ವಿಶ್ಲೇಷಿಸಿದರೆ ಮಾತ್ರ ಕಾರಣಗಳು ಸ್ಪಷ್ಟವಾಗುತ್ತವೆ. ತೆರಿಗೆಗಳ್ಳತನ, ಕಪ್ಪು ಹಣಗಳನ್ನು ಹೊರಗೆಳೆದು ಅಪರಾಧಿಗಳನ್ನು ಶಿಕ್ಷಿಸಿದರೆ ಈ ಸಮಸ್ಯೆಯ ಪರಿಹಾರ ಬಹುತೇಕ ಮಟ್ಟಿಗೆ ಸಾಧ್ಯವಾಗುತ್ತಿತ್ತು. ಆದರೆ ಇಂತಹ ಕ್ರಮ ಗುತ್ತೇದಾರಿ ಬಂಡವಾಳಿಗರ ಲಾಭದ ಪ್ರಮಾಣಕ್ಕೆ ಹೊಡೆತ ಕೊಡುತ್ತದೆ. ಆ ಮೇಲ್ವರ್ಗದವರ ಐಷಾರಾಮಿಗಳ ಭೋಗ ಜೀವನಕ್ಕೂ ಅದು ತೊಡಕಾಗುತ್ತದೆ. ಆದ್ದರಿಂದಲೇ ಈ ಉದಾರೀಕರಣ.

ಇಂದು ಆಳುವ ವರ್ಗದ ಮಾಧ್ಯಮಗಳು ಸ್ವಾತಂತ್ರ್ಯಾನಂತರದಲ್ಲಿ ಇದ್ದುದೆಲ್ಲ ಸಮಾಜವಾದ, ಅದರಿಂದ ಇಂದಿನ ಸ್ಥಿತಿ ಬಂದಿದೆ, 'ಲೈಸನ್ಸು ಪರ್ಮಿಟು ರಾಜ್ಯಭಾರ'ವಿದ್ದುದರಿಂದ ಆರ್ಥಿಕ ಬೆಳವಣಿಗೆ ಸಾಧ್ಯವಿರಲಿಲ್ಲ, ಈಗ ಇವೆಲ್ಲವನ್ನು ತೊಡೆದು ಹಾಕುವುದೇ ಉದಾರೀಕರಣದ ಉದ್ದೇಶ, ಇದರಿಂದಲೇ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂಬ ವಾದಗಳನ್ನು ಹೂಡುತ್ತಿವೆ. ಆದರೆ ನಾವು ಗಮನದಲ್ಲಿಟ್ಟುಕೊಳ್ಳಬೇಕಾದದ್ದು ನಮ್ಮಲ್ಲಿದ್ದುದು ಸಮಾಜವಾದವಲ್ಲ, ಬದಲಾಗಿ ಬಂಡವಾಳವಾದವೇ. ಆದರೆ ಸಾಮ್ರಾಜ್ಯಶಾಹಿಗಳಿಗೆ ಎದುರಾಗಿ ನಿಂತು ಸ್ವಾವಲಂಬನೆ ಸಾಧಿಸುವ ಛಲದ ಬಂಡವಾಳವಾದ ಅದು.

ಹಿಂದಿನ ಆರ್ಥಿಕ ನೀತಿ

ದೇಶದ ಆಳುವ ವರ್ಗದ ಸ್ವರೂಪವೇನಾದರೂ ಬದಲಾಗಿದೆಯೇ, ಅದರಿಂದಲೇ ಈ ಹೊಸ ಆರ್ಥಿಕ ನೀತಿಯೇ ಎಂಬ ಪ್ರಶ್ನೆಯೂ ಏಳುತ್ತದೆ. ನಮ್ಮ ಪಕ್ಷದ ಕಾರ್ಯಕ್ರಮ ಹೀಗೆ ಹೇಳಿದೆ. "*ಭಾರತದ ಕ್ರಾಂತಿಗೆ ಪಾಳೇಗಾರಿ ಮತ್ತು ಅರೇಪಾಳೇಗಾರಿ ಜಮೀನ್ದಾರಿಯನ್ನು ಪೂರ್ಣವಾಗಿ ತೊಡೆದು ಹಾಕಿ ಭೂಮಿಯನ್ನು ಬಡರೈತರು ಮತ್ತು ಕೃಷಿಕೂಲಿ ಕಾರರ ನಡುವೆ ಹಂಚುವುದು ಅವಶ್ಯ...... ಹಾಗೆಯೇ ಬ್ರಿಟಿಷ್ ಬಂಡವಾಳದ ರಾಷ್ಟ್ರೀಕರಣ ಮಾಡಿದ್ದರೆ ಅದು ದೊಡ್ಡ ಪ್ರಮಾಣದ ಉದ್ದಿಮೆ ಮತ್ತು ವಿದೇಶೀ ವ್ಯಾಪಾರವನ್ನು ಸರ್ಕಾರದ ಕೈಗೆ ನೀಡುತ್ತಿತ್ತು. ಇದರಿಂದ ಬರುವ ದೊಡ್ಡ ಪ್ರಮಾಣದ ಲಾಭ ಉದ್ದಿಮೆಯಲ್ಲಿ ಹೂಡಲು ಲಭ್ಯವಾಗುತ್ತಿತ್ತು*".

ಆದರೆ ಆಡಳಿತದ ಸೂತ್ರ ಹಿಡಿದ ಆಳುವ ವರ್ಗ ಏನು ಮಾಡಿತು?

"*ಸದ್ಯಕ್ಕೆ ನಮ್ಮ ಸರ್ಕಾರ ದೊಡ್ಡ ಬಂಡವಾಳಶಾಹಿಯ ನೇತೃತ್ವದಲ್ಲಿ ಆರ್ಥಿಕದ ಚುಕ್ಕಾಣಿ ಹಿಡಿದಿರುವ ಬಂಡವಾಳಶಾಹಿ ಮತ್ತು ಜಮೀನ್ದಾರರ ಸಾಧನವಾಗಿದೆ. ಇವರು ವಿದೇಶಿ ಹಣಕಾಸು ಬಂಡವಾಳದ ಜೊತೆಗೆ ಕೈ ಮಿಲಾಯಿಸಿ ಬಂಡವಾಳಶಾಹಿ ಅಭಿವೃದ್ಧಿ ಪಥ ಹಿಡಿದಿದ್ದಾರೆ. ಈ ವರ್ಗದ ಗುಣಗಳು ಪ್ರಭುತ್ವದ ಪಾತ್ರ ಮತ್ತು ಕರ್ತವ್ಯಗಳನ್ನು ನಿರ್ಧರಿಸುತ್ತವೆ!*"

ಹೀಗೆ ಬಂಡವಾಳಿಗರಿಗೆ ಜಮೀನ್ದಾರರೊಂದಿಗೆ ಸಖ್ಯ ಬೆಳೆಸಿ ಅಧಿಕಾರದಲ್ಲಿ ಮುಂದುವರಿಯಬೇಕಾಗಿತ್ತು. ಆದ್ದರಿಂದಲೇ ಅವರು ಭೂಸುಧಾರಣೆಯನ್ನು ನಿಜವಾದ ಅರ್ಥದಲ್ಲಿ ಮಾಡಲಿಲ್ಲ. ಈ ಬೂರ್ಜ್ವ ವರ್ಗಕ್ಕೆ ಇನ್ನೊಂದು ತರಹದ ಇಬ್ಬಂದಿತನವೂ ಇತ್ತು. ಒಂದು ಕಡೆಯಲ್ಲಿ ಈ ದಾರಿಯನ್ನು ಅಂದರೆ ಬಂಡವಾಳಶಾಹಿ ಬೆಳವಣಿಗೆಯನ್ನು ಅಂತರ್‌ರಾಷ್ಟ್ರೀಯ ಬಂಡವಾಳಶಾಹಿಯ ಬೆಳವಣಿಗೆಯ ಅವಧಿಯ ಕೊನೆಯಲ್ಲಿ ಅಳವಡಿಸಿಕೊಂಡಿದ್ದರಿಂದ ಸಾಮ್ರಾಜ್ಯಶಾಹಿಯ ಮೇಲೆ ತಂತ್ರಜ್ಞಾನಕ್ಕಾಗಿ ಅವಲಂಬಿಸುವ ಪರಿಸ್ಥಿತಿ. ಇನ್ನೊಂದು ಕಡೆಯಲ್ಲಿ ತನ್ನ ಸ್ವತಂತ್ರ ಬೆಳವಣಿಗೆಗೆ ಸೋವಿಯತ್ ಯೂನಿಯನ್ನಿನ ಮೇಲೆ ಅವಲಂಬನೆ.

ಪಾಳೇಗಾರಿ ವ್ಯವಸ್ಥೆಯ ಪಳಿಯುಳಿಕೆಗಳನ್ನು

ಹಾಗೇ ಬಿಟ್ಟದ್ದರಿಂದ ಬಹುತೇಕ ಜನತೆ ಬಡತನದಲ್ಲೇ ಉಳಿದರು. ಇದರಿಂದ ಮಾರುಕಟ್ಟೆ ಬೆಳೆಯಲಿಲ್ಲ. ಬಹಳ ಕಡಿಮೆ ಜನರಿಗೆ ಖರೀದಿ ಸಾಮರ್ಥ್ಯವಿದ್ದದ್ದು. ಆದ್ದರಿಂದಲೇ ಕೃಷಿಯಲ್ಲಿ ಬೆಳವಣಿಗೆ ವೇಗದಲ್ಲಿ ಆಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ

i) ಆಂತರಿಕ ಮಾರುಕಟ್ಟೆಯನ್ನು ಸಾಮ್ರಾಜ್ಯ ಶಾಹಿಗಳಿಂದ ರಕ್ಷಿಸಿತು.
ii) ಬಂಡವಾಳಶಾಹಿ ಅಭಿವೃದ್ಧಿಗೆ ಸಾರ್ವಜನಿಕ ವಲಯವನ್ನು ಉಪಯೋಗಿಸಿ ಮೂಲಭೂತ ಸೌಕರ್ಯಗಳನ್ನು ಅಂತರ್‌ರಚನೆಗಳನ್ನು ಸೃಷ್ಟಿಸಿತು.
iii) ಜನರಿಂದ ಉಳಿತಾಯಗಳ ಸಂಗ್ರಹಣೆ (ಸರ್ಕಾರೀ ಹಣಕಾಸು ಸಂಸ್ಥೆಗಳ ಮೂಲಕ)
iv) ಕೃಷಿಯಲ್ಲಿ ಬಂಡವಾಳಶಾಹಿಯನ್ನು ಕಾನೂನುಗಳ ಮೂಲಕ ಮತ್ತು ನೀರಾವರಿ ಯೋಜನೆ ಮತ್ತು ತಂತ್ರಜ್ಞಾನದ ಪ್ರಗತಿ ಮೂಲಕ ಹೇರಿದ್ದು.

ಈ ನಾಲ್ಕು ಅಂಶಗಳ ಸಾಧನೆಗಾಗಿಯೇ ಸರ್ಕಾರ ಅನುಗುಣವಾದ ಆರ್ಥಿಕ ನೀತಿಯನ್ನು ರೂಪಿಸಿಕೊಂಡು ಅನುಷ್ಠಾನಕ್ಕೆ ತಂದಿತು. ಪರೋಕ್ಷ ತೆರಿಗೆ ಪದ್ಧತಿಯಂತಹ ಪದ್ಧತಿ ಅನುಸರಿಸಿ ಹಾಗೂ ಇನ್ನಿತರ ಕ್ರಮಗಳಿಂದ ದೇಶದ ಬಡ ಜನತೆಯಿಂದ ಸಂಪನ್ಮೂಲ ಕ್ರೋಢೀಕರಣ ಮಾಡಲಾಯಿತೇ ವಿನಃ ಶ್ರೀಮಂತರಿಂದಲ್ಲ.

'ಮುಂಬೈ ಯೋಜನೆ' ಎಂಬ ಹೆಸರಿನಲ್ಲಿ ಪ್ರಸಿದ್ಧಿಗೆ ಬಂದ ಬಂಡವಾಳಶಾಹಿಗಳಾದ ಟಾಟಾ, ಬಿರ್ಲಾ ಮತ್ತು ಪುರುಷೋತ್ತಮ ಠಾಕೂರ್‌ದಾಸ್ ಮತ್ತು ಇತರರು ರೂಪಿಸಿದ ಯೋಜನೆಯೂ ಇದನ್ನೇ ಹೇಳಿತ್ತು. ಈ ಯೋಜನೆಯ ಶೇ. 40 ಹೆಚ್ಚು ಹಣಕಾಸು ಜನತೆಯ ಉಳಿತಾಯದಿಂದ ಬರುತ್ತದೆಂದು, ಶೇ. 34 ರಷ್ಟು 'ಹಣಕಾಸು ಪೋತಾ'ದಿಂದ ಶೇ. 13 ರಷ್ಟು ಸರ್ಕಾರದಿಂದ, ಶೇ. 7 ರಷ್ಟು ವಿದೇಶೀ ಸಾಲಗಳಿಂದ ಮತ್ತು ಶೇ. 6 ರಷ್ಟು ವ್ಯಾಪಾರ ಮಿಗುತಾಯದಿಂದ ಬರುವುದೆಂದು ಲೆಕ್ಕಾಚಾರ ಹಾಕಲಾಗಿತ್ತು.

ಇವೆಲ್ಲ ಮಿತಿಗಳಿದ್ದರೂ ಭಾರತದ ಯೋಜನೆಗಳಿಗೆ ಸಕಾರಾತ್ಮಕ ಅಂಶಗಳಿದ್ದವು. ಸಾರ್ವಜನಿಕ ವಲಯ ನಮ್ಮ ದೇಶದಂತಹ ಅಭಿವೃದ್ಧಿಶೀಲ ದೇಶದಲ್ಲಿ ಪ್ರಗತಿಪರ ಪಾತ್ರ ವಹಿಸುತ್ತದೆಂಬ ಆಶಯವನ್ನು ಪಕ್ಷದ ಕಾರ್ಯಕ್ರಮವೇ ಹೇಳಿದೆ. ಬೇರೆಯವರ ಮೇಲೆ ಆರ್ಥಿಕ ಅವಲಂಬನೆಯನ್ನು ಕಡಿಮೆ ಮಾಡಿ ಔದ್ಯಮಿಕರಣದ ಬಂಡವಾಳ ತಳಹದಿಯನ್ನು ವ್ಯಾಪಕಗೊಳಿಸುತ್ತದೆ ಎಂದೂ ಪಕ್ಷದ ಕಾರ್ಯಕ್ರಮ ಹೇಳಿದೆ. ಹೀಗೆ ಸಾರ್ವಜನಿಕ ವಲಯಕ್ಕೆ ಬಹುಮುಖ್ಯ ಪಾತ್ರ ದೇಶದ ಅಭಿವೃದಿಯಲ್ಲಿ ಇದೆ. ವಿದೇಶೀ ಬಂಡವಾಳವನ್ನು ದೂರವಿರಿಸಿ ದೇಶೀ ಗುತ್ತೇದಾರಿಗಳನ್ನೂ ಹತೋಟಿಯಲ್ಲಿಡಬಲ್ಲ ಶಕ್ತಿಯೂ ಈ ವಲಯಕ್ಕಿದೆ. ಒಟ್ಟಾರೆಯಾಗಿ ಹೇಳುವುದಾದರೆ ಕಾಂಗ್ರೆಸ್ಸಿಗರು ಸಮಾಜವಾದವನ್ನೇ ಅನುಸರಿಸುತ್ತಿದ್ದೇವೆಂದು ಹೇಳುತ್ತ ಬಂದಿದ್ದರೂ ನಿಜದಲ್ಲಿ ಭಾರತ 'ಪ್ರಭುತ್ವ ಬಂಡವಾಳ'ವಾದವನ್ನು ಅಳವಡಿಸಿಕೊಂಡಿತು.

> *'ಸಾಕಷ್ಟು ಲಾಭವಿದ್ದರೆ ಬಂಡವಾಳ ದಿಟ್ಟವಾಗಿರುತ್ತದೆ. ಶೇ. ೧೦ ರಷ್ಟಿದ್ದರೆ ಎಲ್ಲಾದರೂ ಹೂಡಿಕೆಗೆ ತಯಾರು. ಶೇ. 20 ರಷ್ಟಿದ್ದರೆ ಹುಮ್ಮಸ್ಸಿನಿಂದಿರುತ್ತದೆ. ಶೇ. 50 ರಷ್ಟಿದ್ದರೆ ಅಹಂಕಾರದ. ಶೇ. 100 ರಷ್ಟಿದ್ದರೆ ಎಲ್ಲಾ ಮಾನವ ಕಾನೂನುಗಳನ್ನೇ ತುಳಿವ ಸೊಕ್ಕು. ಶೇ. 300 ರಷ್ಟಿದ್ದರೆ ನೇಣುಗಂಬಕ್ಕೇರುವ ಅಪಾಯವಿದ್ದರೂ ಯಾವುದೇ ತರಹದ ಅಪರಾಧ ಮಾಡಲು ಬಂಡವಾಳ ತಯಾರು. ಎಂದಿದ್ದರು. ಕಾರ್ಲ್ ಮಾರ್ಕ್ಸ್ ತಮ್ಮ 'ದಾಸ್ ಕ್ಯಾಪಿಟಲ್' ಗ್ರಂಥದಲ್ಲಿ.*
>
> *ಭಾರತದಲ್ಲಿ ಆದದ್ದು ಇದೇ. ಸಾಮ್ರಾಜ್ಯಶಾಹಿಗಳನ್ನು ಅವರ ಬಂಡವಾಳವನ್ನು ದೇಶದಿಂದ ದೂರವೇ ಇಟ್ಟದ್ದ ಆಳುವ ವರ್ಗ ಈಗ ದೇಶದ ಸ್ವಾವಲಂಬನೆ ಸಾರ್ವಭೌಮತ್ವ ಇವನ್ನೆಲ್ಲ ಬಿಟ್ಟುಕೊಡಲೂ ತಯಾರು.*

ಕೃಷಿವಲಯದಲ್ಲಿ ವಿಫಲತೆ

ನಮ್ಮ ಭೂಸುಧಾರಣಾ ಕಾರ್ಯಕ್ರಮಗಳಲ್ಲಿ ಹಲವು ನ್ಯೂನತೆಗಳಿದ್ದವು. ಈ ನ್ಯೂನತೆಗಳಿಂದಾಗಿ ದೊಡ್ಡ ದೊಡ್ಡ ಜಮೀನ್ದಾರಿಗಳು ಹಾಗೇ ಉಳಿದರು. ಇದಲ್ಲದೆ ಹಲವು ಗೇಣಿದಾರರನ್ನೂ ಜಮೀನಿನಿಂದ ಹೊರ ಹಾಕಲಾಯಿತು. ಪ್ಲಾಂಟೇಷನ್ ಮತ್ತು ತೋಟದ ಬೆಳೆಗಳ ನೆಪದಲ್ಲೂ ಜಮೀನ್ದಾರಿಗಳ ಜಮೀನು ಅವರ ಕೈಯಲ್ಲೇ ಉಳಿಯಿತು. ಪಾಳೇಗಾರಿ ಪದ್ಧತಿಯನ್ನು ಬಹಿಷ್ಕರಿಸಲಾಯಿತೆಂದರೆ ಜಮೀನಿನ ಕೇಂದ್ರೀಕರಣ ತೊಡೆದು ಹಾಕಿ ವಿಕೇಂದ್ರೀಕರಣ ಮಾಡಿದಂತೇನಲ್ಲ. ಖುದ್ದು ಬೇಸಾಯದ ಹೆಸರಿನಲ್ಲಿ ಪಾಳೆಯಗಾರರೆಲ್ಲ ತಮ್ಮ ಜಮೀನುಗಳನ್ನು ಉಳಿಸಿಕೊಂಡರು. ಈ ಖುದ್ದು ಬೇಸಾಯ ಎಂಬ ಹೆಸರಿಗೆ ನಿಜದಲ್ಲಿ ಬೇರೆಯೇ ಅರ್ಥ. ಯಾಕೆಂದರೆ ನಿಜದಲ್ಲಿ ಈ ಖುದ್ದು ಬೇಸಾಯ ಆಳುಗಳಿಂದಲೇ ನಡೆಯುತ್ತಿದ್ದದ್ದು. ಇಲ್ಲ, ಇದೂ ಇರಲಿಲ್ಲ. ಆಳುಗಳ ಹೆಸರಿನಲ್ಲಿ ಪಾಲು ಬೆಳೆಗಾರರೇ ಬೆಳೆ ಬೆಳೆಯುತ್ತಿದ್ದುದು. ಈ ಕಾನೂನಿನಿಂದ ಲಕ್ಷಾಂತರ ಜನ ಗೇಣಿದಾರರನ್ನು ಜಮೀನಿನಿಂದ ಹೊರದೂಡಲಾಯಿತು.

ಇನ್ನು ಜಮೀನು ಮಿತಿ ಕಾನೂನು. ಇಲ್ಲಿಯೂ ತೋಟದ ಬೆಳೆ, ಮೀನುಗಾರಿಕೆ, ಇತ್ಯಾದಿ ಹೆಸರಿನಲ್ಲಿ ದೊಡ್ಡ ದೊಡ್ಡ ಭೂಹಿಡುವಳಿಯನ್ನು ಜಮೀನುದಾರರ ಕಬ್ಜದಲ್ಲೇ ಬಿಡಲಾಯಿತು. ಅರವತ್ತರ ದಶಕದಲ್ಲಿ ಮಹಲ್ನೊಬಿಸ್ ಸಮಿತಿ 600 ಲಕ್ಷ ಎಕರೆಗೂ ಹೆಚ್ಚು ಮಿಗುತಾಯ ಭೂಮಿ ಇದೆ ಎಂದಿತು. ಆದರೆ 1978-79 ರಲ್ಲಿ ಜನತಾ ಸರ್ಕಾರ 215 ಲಕ್ಷ ಎಕರೆ ಮಿಗುತಾಯ ಭೂಮಿ ಇದೆ ಎಂದಿತು. ಈ ಪ್ರಮಾಣ ಇಳಿಯುತ್ತಲೇ ಇದೆ. ಈಗ ಸರ್ಕಾರದ ಪುನರ್ವಿಮರ್ಶಿತ ಅಂದಾಜಿನ ಪ್ರಕಾರ 72.51 ಲಕ್ಷ ಎಕರೆ ಮಿಗುತಾಯ ಭೂಮಿ ಲಭ್ಯವಿದೆ. ಇದು ಒಟ್ಟು ಸಾಗುವಳಿ ಭೂಮಿಯ ಶೇ. 2 ರಷ್ಟು ಮಾತ್ರ. ಇದರಲ್ಲೂ 61.45 ಲಕ್ಷ ಎಕರೆಗಳನ್ನು ಮಾತ್ರ ಸ್ವಾಧೀನಪಡಿಸಿಕೊಂಡು 45.67 ಲಕ್ಷ ಎಕರೆಗಳನ್ನು ಮಾತ್ರ ಹಂಚಲಾಗಿದೆ. ಇದು ಅರವತ್ತರ ದಶಕದ ಅಂದಾಜಿನ ಶೇ. 7 ರಷ್ಟು ಮಾತ್ರ. ಇದರಲ್ಲೂ (45.67 ಲಕ್ಷ ಎಕರೆಗಳಲ್ಲಿ) ಶೇ. 20 ರಷ್ಟು ಹಂಚುವಿಕೆಯನ್ನು ಎಡರಂಗ ಆಡಳಿತಕ್ಕೆ ಬಂದ ಮೇಲೆ ಕೇವಲ

ಲೈಸೆನ್ಸ್-ಪರ್ಮಿಟ್ ರಾಜ್ಯಭಾರ

ಉದಾರೀಕರಣವಾದಿಗಳಾದ ಬಂಡವಾಳಿಗರು ಹಿಂದಿನ 'ಲೈಸನ್ಸ್-ಪರ್ಮಿಟ್ ರಾಜ್' ಹೋಗಬೇಕು, ಆಗಲೇ ಆರ್ಥಿಕ ಅಭಿವೃದ್ಧಿ ಆಗುವುದು ಎನ್ನುತ್ತ ತಾವು ಹೊಸದೇನನ್ನೋ ಹೇಳುತ್ತಿದ್ದೇವೆ ಎಂಬಂತೆ ಆಡುತ್ತಿದ್ದಾರೆ. ಲೈಸೆನ್ಸ್ ಪರ್ಮಿಟ್ ರಾಜ್ ಅನ್ನು ವಂತದ್ದೂ ಇದೇ ಬಂಡವಾಳಿಗರ ಆಳುವ ವರ್ಗವೇ ಆಗ ಆ ವರ್ಗದೊಳಗೇ ಇದ್ದ ಇತರ ಗುಂಪುಗಳಿಗೆ ಅವಕಾಶಗಳನ್ನು ಕಡಿಮೆ ಮಾಡುವ ಸಲುವಾಗಿ ಅವರೇ ತಂದದ್ದು.

ಈ ಲೈಸೆನ್ಸ್ ಪರ್ಮಿಟ್ ರಾಜ್ ಅನ್ನು ತೆಗೆದುಹಾಕಬೇಕೆಂದು ನಾವು ಹಿಂದಿನಿಂದಲೂ ಹೇಳುತ್ತ ಬಂದಿದ್ದೇವೆ. ಆದರೆ ಇದರ ಅರ್ಥ ಇಡೀ ಜನ ಸಮುದಾಯಕ್ಕೆ ಒಳ್ಳೆಯದನ್ನು ಮಾಡುವಂತಹ ನಿಬಂಧನೆಗಳನ್ನು ತೆಗೆದು ಹಾಕಬೇಕೆಂದೇನಲ್ಲ.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಅಲ್ಲಿ ಕೈಗಾರಿಕಾ ಅಭಿವೃದ್ಧಿ ಆಗದಂತೆ ಮಾಡಲು ಈ "ಲೈಸನ್ಸ್ ಪರ್ಮಿಟ್ ರಾಜ್" ಅನ್ನು ಬಳಸಲಾಯಿತು ಎಂಬುದನ್ನೂ ನಾವು ಮರೆಯುವಂತಿಲ್ಲ.

ಪಶ್ಚಿಮ ಬಂಗಾಳದಲ್ಲೇ ಮಾಡಲಾಗಿದೆ. ಅಂದರೆ ಪಶ್ಚಿಮ ಬಂಗಾಳದಲ್ಲಿ ಮಾತ್ರ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭೂ ಸುಧಾರಣಾ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವ ಪ್ರಯತ್ನವನ್ನು ಮಾಡಲಾಯಿತು.

ಹೀಗೆ ಭೂಸುಧಾರಣೆ ವಿಫಲಗೊಂಡಿದ್ದರಿಂದ ಜನರ ಶೋಷಣೆ ಇನ್ನೂ ಹೆಚ್ಚಿತು. ಇದರಿಂದಾಗಿ ಜನರ ನಿಜ ಆದಾಯ ಕಡಿಮೆಯಾಗುತ್ತದೆಯೇ ಹೊರತು ಖರೀದಿ ಸಾಮರ್ಥ್ಯ ಬರುವುದಿಲ್ಲ. ಹೆಚ್ಚೆಚ್ಚು ಜನರಿಗೆ ಖರೀದಿ ಸಾಮರ್ಥ್ಯ ನೀಡಿದಾಗ ಮಾತ್ರ ಮಾರುಕಟ್ಟೆ ಬೆಳೆಯುತ್ತದೆ. ಆದರೆ ಬಡತನ ಹೆಚ್ಚಿದ್ದರಿಂದ ಮಾರುಕಟ್ಟೆ ಬೆಳೆವ ಸಾಧ್ಯತೆಯೇ ಉಂಟಾಗಲಿಲ್ಲ.

ಎರಡನೇಯದಾಗಿ - ಪಾಳೇಗಾರ(ಜಮೀನುದಾರ) ಸಾಲಕೊಡುವವನೂ ಹೌದು. ವಿಪರೀತ ದರದ ಬಡ್ಡಿ ವಸೂಲಿ ಮಾಡುವುದರಿಂದ ಜನತೆ ಇನ್ನಷ್ಟು ಹಿಂಡಲ್ಪಟ್ಟರು.

ಇನ್ನು ಹಸಿರು ಕ್ರಾಂತಿಯಂತಹದ್ದು ಆಗಿದ್ದು ನೀರಾವರಿಯಿಂದಾಗಿ. ನೀರಾವರಿಯ ಬೆಳವಣಿಗೆ ನಿಂತಕೂಡಲೇ ಹಸಿರು ಕ್ರಾಂತಿ ನಿಂತು ಹೋಯಿತು.

ಗುತ್ತೇದಾರಿ ಬಂಡವಾಳಿಗರ ಲಾಭ ಪಿಪಾಸೆ

ಹೀಗೆ ಬಂಡವಾಳವಾದ ವನ್ನು ಕೃಷಿಯ ಮೇಲೆ ಹೇರುವ ಗುತ್ತೇದಾರೀ ಬೂರ್ಜ್ವಗಳ ಪ್ರಯತ್ನ ವಿಫಲಗೊಂಡಿತು. ಆದರೂ ಈ ವರ್ಗ ತನ್ನ ಲಾಭ ಪಿಪಾಸೆಯಿಂದಾಗಿ ಅತ್ಯಧೀಕ ಲಾಭ ಹೀರಿ ಜನರನ್ನು ಹಿಂಡುತ್ತಲೇ ಇತ್ತು.

ಇಂತಹ ಬೆಳವಣಿಗೆಗಳಿಂದಾಗಿ 80ರ ದಶಕದ ಹೊತ್ತಿಗೆ ಗುತ್ತೇದಾರಿ ಬಂಡವಾಳಿಗರು ಅಪಾರ ಆಸ್ತಿ ಪಾಸ್ತಿ ಹೊಂದಿದ್ದರು. ಈಗ ಈ ಆಸ್ತಿ(ಬಂಡವಾಳ)ಯನ್ನು ಎಲ್ಲಿ ಹೂಡಬೇಕೆಂಬುದೇ ಸಮಸ್ಯೆಯಾಯಿತು. ಯಾಕೆಂದರೆ ದೇಶೀ ಮಾರುಕಟ್ಟೆಯ ಬೆಳವಣಿಗೆ ನಿಂತಿತ್ತು. ಆದ್ದರಿಂದ ದೇಶದೊಳಗೆ ಹಣ ಹೂಡುವುದು ಲಾಭದಾಯಕವಾಗಿರಲಿಲ್ಲ.

ಬಂಡವಾಳದ ಬಗ್ಗೆ ಮಾರ್ಕ್ಸ್ ಹೇಳಿರುವ ಈ ಮಾತನ್ನು ನೋಡಿ–

'ಸಾಕಷ್ಟು ಲಾಭವಿದ್ದರೆ ಬಂಡವಾಳ ದಿಟ್ಟವಾಗಿರುತ್ತದೆ. ಶೇ. 10ರಷ್ಟಿದ್ದರೆ ಎಲ್ಲಾದರೂ ಹೂಡಿಕೆಗೆ ತಯಾರು. ಶೇ.20 ರಷ್ಟಿದ್ದರೆ ಹಣಹೂಡಿಕೆಗೆ ಆತುರ. ಶೇ. 50ರಷ್ಟಿದ್ದರೆ ಅಹಂಕಾರ. ಶೇ. 100ರಷ್ಟಿದ್ದರೆ ಎಲ್ಲ ಮಾನವ ಕಾನೂನುಗಳನ್ನೇ ತುಳಿವ ಸೊಕ್ಕು. ಶೇ.300ರಷ್ಟಿದ್ದರೆ ನೇಣುಗಂಬಕ್ಕೇರುವ ಅಪಾಯವಿದ್ದರೂ ಯಾವುದೇ ತರಹದ ಅಪರಾಧ ಮಾಡಲು ಬಂಡವಾಳ ತಯಾರು. (ದಾಸ್ ಕ್ಯಾಪಿಟಲ್, ಸಂಪುಟ೧)

ಭಾರತದಲ್ಲಿ ಆದದ್ದು ಇದೇ. ಸಾಮ್ರಾಜ್ಯಶಾಹಿಗಳನ್ನು ಅವರ ಬಂಡವಾಳವನ್ನು ದೇಶದಿಂದ ದೂರವೇ ಇಟ್ಟಿದ್ದ ಆಳುವ ವರ್ಗ ಈಗ ದೇಶದ ಸ್ವಾವಲಂಬನೆ, ಸಾರ್ವಭೌಮತ್ವ ಇವನ್ನೆಲ್ಲ ಬಿಟ್ಟು ಕೊಡಲು ತಯಾರು. ಗುತ್ತೇದಾರಿ ಮತ್ತು ವ್ಯಾಪಾರದಲ್ಲಿನ ನಿಬಂಧನೆಗಳಲ್ಲಿ ರಿಯಾಯಿತಿಯ (M.R.T.P.-Monopolies & Restrictive Trade Practices) ಬೇಡಿಕೆ ಬಂದದ್ದು ಈ ಸನ್ನಿವೇಶದಲ್ಲೇ. ಗುತ್ತೇದಾರಿ ಬಂಡವಾಳಶಾಹಿ ತಾನು ಗಟ್ಟಿಯಾಗಿರುವುದರಿಂದ ಅದು ಸಾರ್ವಜನಿಕ ವಲಯವನ್ನೇ ಉರುಳಿಸುವ ಬೇಡಿಕೆಯನ್ನಿಡುತ್ತಿದೆ.

ಆಳುವ ವರ್ಗದೊಳಗೆ ಆಂತರಿಕ ವೈರುಧ್ಯವೊಂದು ಮೊದಲಿನಿಂದಲೂ ಇದೆ. ಜಾಗತಿಕ ರಂಗದಲ್ಲಿ ತಡವಾಗಿ (ಅಂದರೆ ಸ್ವಾತಂತ್ರ್ಯದ ನಂತರದಲ್ಲಿ) ಕಾಣಿಸಿಕೊಂಡ ಭಾರತದ ಬಂಡವಾಳಿಗರಿಗೆ ಬಂಡವಾಳಶಾಹಿ ದಾರಿ ಹಿಡಿದಿರುವುದರಿಂದ ಸಾಮ್ರಾಜ್ಯಶಾಹಿಗಳಿಂದ ತಂತ್ರಜ್ಞಾನ ಬೇಕು. ಆದರೆ ಅದರ ಜೊತೆಗೇ ತನ್ನ ರಕ್ಷಣೆಯೂ ಆಗಬೇಕು. ಸಾಮ್ರಾಜ್ಯಶಾಹಿಗಳು ಬಂದು ಅದರ ಮಾರುಕಟ್ಟೆಯನ್ನು ಕಬಳಿಸಿಬಿಡಬಾರದು. ಇದಕ್ಕಾಗಿ ಅದು ಆಗಿನ ಸೋವಿಯತ್ ಯೂನಿಯನ್ನಿನ ನೆರವು ಪಡೆಯಿತು.ಈ ವೈರುಧ್ಯದಿಂದಾಗಿಯೇ ಇಂದು ಅದು ಉದಾರೀಕರಣಕ್ಕೆ ತೊಡಗಿದ್ದು. ಆಂತರಿಕ ಮಾರುಕಟ್ಟೆ ಬೆಳೆಯಲಿಲ್ಲ. ಭೂಸುಧಾರಣೆ ಸರಿಯಾದ ಅರ್ಥದಲ್ಲಿ ಆಗದೆ ಅದು ಬೆಳೆಯುವುದೂ ಇಲ್ಲ. ಆದ್ದರಿಂದ ಸಾಮ್ರಾಜ್ಯಶಾಹಿಗಳೊಂದಿಗೆ ಜಗತ್ತಿನ ಬೇರೆ ಬೇರೆ ಮಾರುಕಟ್ಟೆ ಆಕ್ರಮಿಸಲು ಪಾಲುದಾರರಾಗೋಣವೆಂಬ ಅದರ ಹಂಬಲ.

ಸ್ವಾತಂತ್ರ್ಯಾನಂತರ ನಲವತ್ತು ವರ್ಷಗಳಲ್ಲಿ ಬೆಳೆದ ಗುತ್ತೇದಾರಿ ಬಂಡವಾಳಿಗರ ಆಸ್ತಿ ಪ್ರಮಾಣ

(ಕೋಟಿ ರೂಪಾಯಿಗಳಲ್ಲಿ)

ಬಂಡವಾಳಿಗರು	1951	1965	1975	1980	1989-90
ಟಾಟಾ	151.60	417.72	924.41	1538.99	8530.97
ಬಿರ್ಲಾ	65.25	292.72	905.03	1431.99	8473.35
ರಿಲೈಯನ್ಸ್	-	-	-	166.33	3600.27
ಥಾಪರ್	8.63	71.90	197.90	348.06	2177.15
ಜೆ.ಕೆ. ಸಿಂಘಾನಿಯಾ	10.14	59.20	209.56	412.72	2139.00
ಲಾರ್ಸನ್ ಮತ್ತು ಟೌಬ್ರೊ	-	-	137.69	216.03	1681.52
ಮೋದಿ	-	11.28	114.50	198.82	1399.37
ಬಜಾಜ್	-	21.14	103.63	179.26	1391.06
ಮಫತ್ ಲಾಲ್	16.77	45.91	244.23	427.54	1343.55
ಎಂ.ಎಂ. ಚಿದಂಬರಮ್	-	-	28.05	43.81	1273.35

'ಖೋಟಾ ಹಣಕಾಸಿ'ನ ತಂತ್ರ

ಈ ಆಳುವ ವರ್ಗ ತನ್ನ ದೌರ್ಬಲ್ಯಗಳ ನಡುವೆಯೂ ಇನ್ನೊಂದು ಪ್ರಯತ್ನ ಮಾಡಿತು. ಅದೆಂದರೆ ಖೋತಾ ಹಣಕಾಸು. ಹಣಕಾಸು ಖೋತಾದಿಂದಾಗಿ ಹಣದುಬ್ಬರ ಹೆಚ್ಚಾಗುತ್ತದೆ. ಹೀಗೆ ಹಣದುಬ್ಬರ ಹೆಚ್ಚುವುದೆಂದರೆ ಬೆಲೆಗಳು ಏರುತ್ತವೆ. ಇಂತಹ ಸನ್ನಿವೇಶದಲ್ಲಿ ಬಡವರು ಹೆಚ್ಚೆಚ್ಚು ಹಣ ಕಳೆದುಕೊಳ್ಳುತ್ತಾರೆ. ಶ್ರೀಮಂತರು ಹೆಚ್ಚೆಚ್ಚು ಹಣ ಪಡೆಯುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಬಡವರು ಹೆಚ್ಚೆಚ್ಚು ಬಡವರಾಗುತ್ತಾರೆ. ಶ್ರೀಮಂತರು ಹೆಚ್ಚೆಚ್ಚು ಶ್ರೀಮಂತರಾಗುತ್ತಾರೆ. ಆದ್ದರಿಂದಲೇ ಈ ಹಣಕಾಸು ಖೋತಾ ಮೊದಲು ಸ್ವಲ್ಪ ಬೇಡಿಕೆ ಹೆಚ್ಚಿಸಿದರೂ ನಂತರದಲ್ಲಿ ಬೇಡಿಕೆಯನ್ನು ಕಡಿಮೆ ಮಾಡುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಆರ್ಥಿಕ ಹಿಂಜರಿತ ಉಂಟಾಗುತ್ತದೆ. ಹಣಹೂಡಲು ಅವಕಾಶಗಳು ಕಡಿಮೆಯಾಗುತ್ತವೆ. ಆಗ ಬಂಡವಾಳಿಗರು ಶೇರು ಮಾರುಕಟ್ಟೆಯಲ್ಲಿ ಹೆಚ್ಚು ಹಣ ಹೂಡುತ್ತಾರೆ. ಆದ್ದರಿಂದಲೇ 1980ರ ದಶಕದಲ್ಲಿ ಕೃಷಿ ಮತ್ತು ಉತ್ಪಾದನಾ ವಲಯಗಳಿಗೆ ಬದಲು 'ಮೂರನೇ ವಲಯ'ದಲ್ಲಿ ಹೆಚ್ಚಿನ ಬೆಳವಣಿಗೆ ಕಂಡು ಬಂದಿರುವುದು. ಈ ತೃತೀಯ ವಲಯವೆಂದರೆ ಹಣಕಾಸು, ಆಡಳಿತ, ಚಲನೆ, ರಕ್ಷಣೆ ಮತ್ತು ಸೇವೆಗಳನ್ನು ಒಳಗೊಂಡಿರುವಂತಹದ್ದು. ಉತ್ಪಾದನೆ ಮತ್ತು ಕೃಷಿ ಈ ಎರಡು ವಲಯಗಳಲ್ಲಿ ಮಿಗುತಾಯವಿದ್ದರೆ ಅದು ತೃತೀಯ ವಲಯಕ್ಕೆ ಲಭ್ಯವಾಗುತ್ತದೆ.

ಹಣಕಾಸು ಖೋತಾದಿಂದಾಗಿ ಹಣದುಬ್ಬರ ಹೆಚ್ಚಾಗುತ್ತದೆ. ಹೀಗೆ ಹಣದುಬ್ಬರ ಹೆಚ್ಚುವುದೆಂದರೆ ಬೆಲೆಗಳು ಏರುತ್ತವೆ. ಇಂತಹ ಸನ್ನಿವೇಶದಲ್ಲಿ ಬಡವರು ಹೆಚ್ಚೆಚ್ಚು ಹಣ ಕಳೆದುಕೊಳ್ಳುತ್ತಾರೆ. ಶ್ರೀಮಂತರು ಹೆಚ್ಚೆಚ್ಚು ಹಣ ಪಡೆಯುತ್ತಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಬಡವರು ಹೆಚ್ಚೆಚ್ಚು ಬಡವರಾಗುತ್ತಾರೆ. ಶ್ರೀಮಂತರು ಹೆಚ್ಚೆಚ್ಚು ಶ್ರೀಮಂತರಾಗುತ್ತಾರೆ.

ಆರೋಗ್ಯಕರ ಆರ್ಥಿಕದಲ್ಲಿ ಇರಬೇಕಾದ ರೀತಿಯದು. ಮೊದಲ ಎರಡು ವಲಯಗಳಲ್ಲಿ ಮಿಗುತಾಯ ಇಲ್ಲದೇ ಮೂರನೇ ವಲಯ ಬೆಳೆಯುವುದೆಂದರೆ ಬಡವರನ್ನು ಇನ್ನೂ ಹಿಂಡುವುದೆಂದೇ ಅರ್ಥ. 'ಮೂರನೇ ವಲಯ' ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಿಲ್ಲ.


ಇಂತಹ ಬೆಳವಣಿಗೆಯ ಪರಿಣಾಮವಾಗಿ ದೇಶದ ಒಂದು ವಿಭಾಗದ ಆದಾಯ ಹೆಚ್ಚಿದ್ದು ಅವರ ಬಳಕೆ ವಸ್ತುಗಳ ಬೇಡಿಕೆ ಹೆಚ್ಚಿತ್ತು. ಇವರು ಪಾಶ್ಚಿಮಾತ್ಯ ದೇಶಗಳ ಶ್ರೀಮಂತರು ಬಳಸುವ ವಸ್ತುಗಳನ್ನೇ ಬಯಸತೊಡಗಿದರು. ಈ ಜನವಿಭಾಗ ಆಳುವ ವರ್ಗದ ಬೆಂಬಲಿಗರಾದ್ದರಿಂದ ಇವರ ಅವಶ್ಯಕತೆಗಳನ್ನು ಪೂರೈಸಲು ಆಮದು ಉದಾರೀಕರಣ ಮಾಡಲಾಯಿತು.

ಆಮದು ಉದಾರೀಕರಣದಿಂದ ಉದ್ಭವಿಸಿದ ಬಿಕ್ಕಟ್ಟು

ಇದೆಲ್ಲಕ್ಕಿಂತ ಹೆಚ್ಚಾಗಿ ದೇಶದೊಳಗೆ ಲಾಭದಾಯಕ ಹಣ ಹೂಡಿಕೆಯ ಅವಕಾಶಗಳು ಕಡಿಮೆಯಾದ್ದರಿಂದ ಹಣಕಾಸನ್ನು ರಫ್ತು ಮಾಡಲು ಅವಕಾಶಬೇಕೆಂಬ ಬೇಡಿಕೆ ಬಂತು.

ಪುಟ 40 ನೋಡಿ





ತಮಿಳುನಾಡಿನಲ್ಲಿ ಪೋಲೀಸ್
ಲಾಠಿಯೆದುರಿಸುತ್ತಿರುವ ಸತ್ಯಾಗ್ರಹಿ

ಮಧ್ಯಪ್ರದೇಶದ ಭೂಪಾಲದಲ್ಲಿ ಕಾ
ಚಳುವಳಿಯ ಮೊದ

ಪಂಜಾಬಿನಲ್ಲಿ







ಹಿಳೆಯರೂ ಹಿಂದೆ ಬೀಳಲಿಲ್ಲ
ರಳದಲ್ಲಿ ಬಂಧನಕ್ಕೆ ಸಿದ್ಧವಾಗಿರುವ ಮಹಿಳೆಯರು

ಪಶ್ಚಿಮ ಬಂಗಾಳದಲ್ಲಿ ಮಳೆ
ಸುರಿಯುತ್ತಿದ್ದರೂ ದೂರದರ್ಶನದೆದುರು
ಒಂದು ಲಕ್ಷ ಜನರ ಧರಣಿ

ತ್ತರಪ್ರದೇಶದ
ಗಲ್ಪುರದಲ್ಲಿ







ಡ್ಡಬಳ್ಳಾಪುರದಲ್ಲಿ

ಹಗರಿಬೊಮ್ಮನಹಳ್ಳಿಯಲ್ಲಿ →



ಕಾಯಿದೆಭಂಗ ಚಳುವಳಿ

ೇಶದ ಹಲವೆಡೆ ಹಾಗೂ ಕರ್ನಾಟಕದಲ್ಲಿ
ಿದ ಕಾಯಿದೆಭಂಗ ಚಳುವಳಿಯ ಕೆಲವು
ದೃಶ್ಯಗಳು



ಮುರ್ಡೇಶ್ವರದ ಅಂಚೆ ಕಛೇರಿಯ ಎದುರು ಪಿಕೆಟಿಂಗ್



ವಿಜಾಪುರದ ಬಸವನಬಾಗೇವಾಡಿಯಲ್ಲಿ




ಉ.ಕ.ದ ಭಟ್ಕಳದಲ್ಲಿ



ಂಗಳೂರಿನಲ್ಲಿ ಬಹುರಾಷ್ಟ್ರೀಯ ಬ್ಯಾಂಕ್ ಗ್ರಿಂಡ್ಲೇಸ್ ಬ್ಯಾಂಕ್ ಎದುರು ಪಿಕೆಟಿಂಗ್



ಸಿಂಧನೂರಿನಲ್ಲಿ



ಕೋಮುವಾದದ ಬೇರುಗಳು: ಅಂದು-ಇಂದು

ಭಾರತದ ಐಕ್ಯತೆಗೆ, ಆ ಮೂಲಕ ಸ್ವಾತಂತ್ರ್ಯಕ್ಕೆ ಗಂಭೀರ ಅಪಾಯ ಒಡ್ಡಿರುವ ಇನ್ನೊಂದು ಸಂಗತಿಯೆಂದರೆ ಕೋಮುವಾದ. ಕಾಂಗ್ರೆಸ್ಸಿನ [illegible] ಆಳ್ವಿಕೆಯಿಂದ ಬೇಸತ್ತ ಜನರ ಅಸಂತೃಪ್ತಿಯನ್ನು, ಒಂದೆಡೆ ಕಾಂಗ್ರೆಸ್ಸಿನ ಜನ-ವಿರೋಧಿ ಆರ್ಥಿಕ ನೀತಿಗಳನ್ನು ಟೀಕಿಸುತ್ತಲೇ ಇನ್ನೊಂದೆಡೆ ವಿಚ್ಛಿದ್ರಕಾರಿ ತಂತ್ರ ಅನುಸರಿಸಿ ಜನಗಳ ಭಾವನೆಗಳನ್ನು ಬಡಿದೆಬ್ಬಿಸಿ ಅಧಿಕಾರ ಗಿಟ್ಟಿಸಲು ಹೊಂಚುಹಾಕಿದ್ದಾರೆ. ಕೋಮುವಾದಿಗಳು. ಬಾಬ್ರಿ ಮಸೀದಿ ಧ್ವಂಸ ಇವರ ಈ ಪ್ರಯತ್ನದಲ್ಲೊಂದು ಮೈಲಿಗಲ್ಲು. ಈ ಕೋಮುವಾದವೆಂಬುದು ಹೇಗೆ ಉದ್ಭವಿಸಿತು, ಸ್ವಾತಂತ್ರ್ಯದ ಮೊದಲು ಮತ್ತು ಅದು ವಹಿಸಿದ ವಿಧ್ವಂಸಕ ಪಾತ್ರವೇನು. ಅದಕ್ಕೆ ಪ್ರೋತ್ಸಾಹ ನೀಡುತ್ತಿರುವ ಅಂಶಗಳೇನು? ಭಾರತದ ಐಕ್ಯತೆಗಾಗಿ, ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡುವ ದುಡಿಯುವ ಜನ ಇದರ ವಿಶ್ಲೇಷಣೆ ಮಾಡಬೇಕು.

ಸಿ.ಆರ್. ಭಟ್

ಬ್ರಿಟಿಷರಿಗಿಂತ ಮೊದಲು ಭಾರತಕ್ಕೆ ಆಕ್ರಮಣಕಾರರಾಗಿ ಬಂದ ಆರ್ಯರು, ಹೂಣರು, ಪಾರಸಿಗಳು, ಗ್ರೀಕರು, ಮೊಗಲರು ಕಾಲ ಕ್ರಮೇಣ ಭಾರತದಲ್ಲಿಯೇ ನೆಲೆಸಿದರು. ಇಲ್ಲಿಯ ಜಾತಿ, ವರ್ಣಾಶ್ರಮ ಧರ್ಮ, ಕೆಳಮಟ್ಟದ ಗ್ರಾಮಸ್ವಾವಲಂಬನೆಯ ಆಧಾರದ ಪಾಳೆಯಗಾರಿ ಪದ್ಧತಿಯನ್ನು ಬಲಗೊಳಿಸಿದರು. ತಮ್ಮ ಸಾಮ್ರಾಜ್ಯಗಳನ್ನು ಸ್ಥಾಪಿಸಿ, ಒಂದು ಹಂತದವರೆಗೆ ಗಮನಾರ್ಹವಾದ ಸಾಧನೆಗಳಿಸಿದರು. ಕ್ರಮೇಣ ಆ ಸಾಮ್ರಾಜ್ಯಗಳು ಅವನತಿಯ ಹಾದಿ ಹಿಡಿದಾಗ, ಬ್ರಿಟಿಷರು ಭಾರತಕ್ಕೆ ಬಂದರು. ಹಿಂದು-ಮುಸ್ಲಿಂ ರಾಜಮಹಾರಾಜರ ಪಾಳೆಯಗಾರರ ಅಂತಃಕಲಹಗಳ ಪ್ರಯೋಜನ ಪಡೆದು ತಮ್ಮ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಗೊಳಿಸುತ್ತಾ ಬಂದರು. ಜೊತೆಗೇ ದುರ್ಬಲ ಆರ್ಥಿಕ ವ್ಯವಸ್ಥೆಯನ್ನು ನಾಶಗೊಳಿಸುತ್ತಾ ಬಂದರು. ಭಾರತವನ್ನು ತಮ್ಮ ಸಾಮ್ರಾಜ್ಯದ ವಸಾಹತುವನ್ನಾಗಿ ಮಾರ್ಪಡಿಸಿದರು. ತಮ್ಮ ಪ್ರತಿಸ್ಪರ್ಧಿಗಳಾದ ಫ್ರೆಂಚ್, ಡಚ್, ಪೋರ್ಚುಗೀಸ್‌ರನ್ನು ಹಿಮ್ಮೆಟ್ಟಿಸಿದರು. 1757 ರಲ್ಲಿ ಪ್ಲಾಸಿಕದನದಿಂದ 1857ರ ಸಿಪಾಯಿ ದಂಗೆಯವರೆಗೆ ಕಂಪನಿಯ ಮೂಲಕ ತಮ್ಮ ಸಾಮ್ರಾಜ್ಯವನ್ನು ವಿಸ್ತಾರಗೊಳಿಸುತ್ತಾ ಬಂದರು. ಹಿಂದಿನ ಆಕ್ರಮಣಗಾರರಂತೆ ಸ್ವದೇಶಿಗಳಾಗದೆ, ವಿದೇಶಿಗಳಾಗಿ ಪರಕೀಯರಾದರು.

ರಾಜ್ಯ ಕಳೆದುಕೊಳ್ಳುತ್ತಿದ್ದ ಹಿಂದು-ಮುಸ್ಲಿಂ ರಾಜಮಹಾರಾಜರು, ಭೂಮಿ ಉದ್ಯೋಗ ಕಳೆದುಕೊಳ್ಳುತ್ತಿದ್ದ ರೈತಾಪಿ ಜನರು, ಸ್ವಾಭಿಮಾನ ಕಳೆದುಕೊಳ್ಳುತ್ತಿದ್ದ ಬದಿಗೊತ್ತಿ ಬ್ರಿಟಿಷರ ಗುಲಾಮರಾಗಿದ್ದ ಸಿಪಾಯಿಗಳು ಭೇದ ಭಾವಗಳನ್ನು ಬದಿಗೊತ್ತಿ ಬ್ರಿಟಿಷರ ವಿರುದ್ಧ 1857ರಲ್ಲಿ ಬಂಡೆದ್ದರು. ಅದುವೇ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆನ್ನಬಹುದು. ಆದರ ನೇತೃತ್ವವನ್ನು ಅವನತಿಯ ಹಂತದಲ್ಲಿದ್ದ ಹಿಂದು-ಮುಸ್ಲಿಂ ರಾಜ-ಮಹಾರಾಜರು, ಪಾಳೆಯಗಾರರು ವಹಿಸಿದ್ದರು. ಆದರೆ ಎರಡು ವರ್ಷಗಳ ಕಾಲದ ಆ ಬಂಡಾಯವನ್ನು ಬ್ರಿಟಿಷರು ತಮ್ಮ ಅತ್ಯಾಧುನಿಕ ಆಡಳಿತ ತಂತ್ರದಿಂದ ಮತ್ತು ಶಸ್ತ್ರಾಸ್ತ್ರಗಳಿಂದ ಹತ್ತಿಕ್ಕಿದರು. ನಂತರ, ಕಂಪೆನಿಯ ಆಡಳಿತ ಕೊನೆಗೊಳಿಸಿ ಭಾರತವನ್ನು ಬ್ರಿಟಿಷರ ಪ್ರಭುತ್ವಕ್ಕೆ ಒಳಪಡಿಸಲಾಯಿತು. ಹಿಂದು-ಮುಸ್ಲಿಂ ರಾಜಮಹಾರಾಜರು ತಮ್ಮ ಕಳೆದುಹೋದ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಲು ವಿಫಲರಾಗಿ, ಬ್ರಿಟಿಷ್ ಸಾಮ್ರಾಜ್ಯದ ಗೌರವಾನ್ವಿತ ಸಾಮಂತರಾದರು. ಪರಿಣಾಮವಾಗಿ, ಭಾರತದ ಪಾಳೆಯಗಾರಿ ಪದ್ಧತಿಯ ವಿರುದ್ಧ ಬ್ರಿಟಿಷ್ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ಪದ್ಧತಿಯು ಜಯಗಳಿಸಿದಂತಾಯಿತು. ಆದರೆ ಬ್ರಿಟಿಷ್ ಹಾಗೂ ಇತರ ಐರೋಪ್ಯ ದೇಶಗಳಲ್ಲಿ ಕೈಗಾರಿಕಾ ಕ್ರಾಂತಿಯ ಮೂಲಕ ಪಾಳೆಯಗಾರಿ ಆರ್ಥಿಕ ಸಾಮಾಜಿಕ ವ್ಯವಸ್ಥೆಯು ಸಂಪೂರ್ಣ ನಾಶವಾದಂತೆ, ಭಾರತದಲ್ಲಿ ನಾಶವಾಗಲಿಲ್ಲ. ಭಾರತದ ದುರ್ಬಲ ಆರ್ಥಿಕ ಸಾಮಾಜಿಕ ವ್ಯವಸ್ಥೆಯನ್ನು ನಾಶಮಾಡಿ, ಇಡೀ ದೇಶದ ಆರ್ಥಿಕತೆಯನ್ನು ಬ್ರಿಟಿಷ್ ಸಾಮ್ರಾಜ್ಯದ

ವಸಾಹತುವನ್ನಾಗಿ ಮಾರ್ಪಡಿಸಲಾಯಿತಷ್ಟೇ. ಭಾರತದಲ್ಲಿ ಬಂಡವಾಳಶಾಹಿ ಪದ್ಧತಿಯು ಪೂರ್ಣ ಪ್ರಮಾಣದಲ್ಲಿ ಬೆಳೆದು ಬರಲಿಲ್ಲ. ಭಾರತದ ಸಾಮಾಜಿಕ ಕ್ರಾಂತಿಯ ಈ ನ್ಯೂನತೆಯಿಂದಾಗಿ ಸ್ವಾತಂತ್ರ್ಯ ಸಂಗ್ರಾಮದ ಮುಂದಿನ ಮಜಲುಗಳಲ್ಲಿ ಕೋಮುವಾದ ಹುಟ್ಟಿ ಬೆಳೆಯಲು ಸಾಧ್ಯವಾಯಿತು ಎಂದು ಗಮನಿಸಬಹುದು.

ಹಿಂದೂ-ಮುಸ್ಲಿಂ ತಿಕ್ಕಾಟ ಬ್ರಿಟಿಷರ ಆರಂಭದ ಪ್ರಯತ್ನ

ಬ್ರಿಟಿಷರು ಸಿಪಾಯಿ ದಂಗೆ ಅಡಗಿಸಲು ಇನ್ನು ಮುಂದೆ ಅಂತಹ ದಂಗೆ ಆಗದಂತೆ ಮಾಡಲು, ದೇಶಾದ್ಯಂತ ವಿದ್ಯುತ್ ತಂತಿ ಜಾಲ ಹರಡಿದರು. ರೈಲ್ವೇ ನಿರ್ಮಿಸಿದರು. ಕಲ್ಲಿದ್ದಲು, ಉಕ್ಕು, ಇಂಜನಿಯರಿಂಗ್ ಮುಂತಾದ ಕೈಗಾರಿಕೆಗಳನ್ನು ಸ್ಥಾಪಿಸಿದರು. ಆಡಳಿತ ಮತ್ತು ಸೈನ್ಯ ಅಭಿವೃದ್ಧಿಗಾಗಿ ಆಧುನಿಕ ಶಿಕ್ಷಣವನ್ನು ಪ್ರಾರಂಭಿಸಿದರು. ಭಾರತದ ಮೇಲ್ಜಾತಿಯ ಹಾಗೂ ಮೇಲ್ವರ್ಗದ ಜನರು ಮೊತ್ತ ಮೊದಲು ಬಂಗಾಳದ ಕಲ್ಕತ್ತದಲ್ಲಿ ಬ್ರಿಟಿಷ್ ಸರಕಾರಕ್ಕೆ ಅಗತ್ಯವಾದ ಐರೋಪ್ಯ ಸಾಹಿತ್ಯ ಮತ್ತು ವಿಜ್ಞಾನಗಳ ಅಧ್ಯಯನ ನಡೆಸಲಾರಂಭಿಸಿದರು. ಈ ಆಧುನಿಕ ಜನವರ್ಗ 1857ರ ಸಿಪಾಯಿ ದಂಗೆ-ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ. ಕಾರಣ ಅದರ ಮುಂಚೂಣಿಯಲ್ಲಿದ್ದ ಪಾಳೆಯಗಾರರು ತಮ್ಮ ತಮ್ಮ ಗತವೈಭವದ ಪ್ರಭುತ್ವಗಳನ್ನು ಪುನರ್ ಸ್ಥಾಪಿಸಲು ಉದ್ದೇಶಿಸಿದ್ದರು. ಆದರೆ, ಆಧುನಿಕ ವರ್ಗದ ಜನರು ಎರಡೂವರೆ ದಶಕಗಳ ಹಿಂದಿನಿಂದಲೇ ಭಾರತದ ಬಂಡವಾಳಶಾಹಿ-ಪೂರ್ವದ ಸಾಮಾಜಿಕ, ಆರ್ಥಿಕ ಪದ್ಧತಿಯನ್ನು ವಿರೋಧಿಸುತ್ತಾ ವ್ಯಾಪಕವಾದ ಸಮಾಜ ಸುಧಾರಣಾ ಕಾರ್ಯಕ್ರಮಗಳಲ್ಲಿ ತೊಡಗಿದ್ದರು. ಆ ಪ್ರಕ್ರಿಯೆಯಲ್ಲಿ ಹಿಂದುಗಳೇ ಮುಂದೆ ಇದ್ದರು ಎಂದು ನೆನಪಿಸಬೇಕು.

ಬಾಲ್ಯ ವಿವಾಹ ಮತ್ತು ಸತಿ ಪದ್ಧತಿಗಳ ರದ್ಧತಿ, ವಿಧವಾ ವಿವಾಹ ಹಾಗೂ ಸ್ತ್ರೀ ಶಿಕ್ಷಣ ಪ್ರಚಾರ, ವರ್ಣಾಶ್ರಮ ಮತ್ತು ಜಾತಿ ಪದ್ಧತಿಗಳ ವಿರುದ್ಧ ಚಳುವಳಿಗಳನ್ನು ಈಶ್ವರ್ ಚಂದ್ರ ವಿದ್ಯಾಸಾಗರ್, ರಾಜಾರಾಮ್ ಮೋಹನ್ ರಾಯ್ ಮತ್ತಿತರರು ಬಂಗಾಳದಲ್ಲಿ, ದೇಶದ ಇತರ ಪ್ರದೇಶಗಳಿಗಿಂತ ಅರ್ಧಶತಮಾನದಷ್ಟು ಕಾಲ ಮೊದಲೇ ಪ್ರಾರಂಭಿಸಿದ್ದರು. ಈ ಆಧುನಿಕ ವರ್ಗದ ಜನರು ಬ್ರಿಟನ್‌ನಲ್ಲಿದ್ದ ಬಂಡವಾಳಶಾಹಿ ವ್ಯವಸ್ಥೆಯ ಪೂರ್ಣಪ್ರಮಾಣದ ಸಂಸತ್ ಮಾದರಿ ಪ್ರಜಾಪ್ರಭುತ್ವವನ್ನು ಭಾರತದಲ್ಲಿಯೂ ಸ್ಥಾಪಿಸಲು ಧೃಢ ನಿರ್ಧಾರ ಮಾಡಿದ್ದರು. ಭಾರತದ ಉದನೋನ್ಮುಖ ಬಂಡವಾಳಶಾಹಿಗಳನ್ನು ಪ್ರತಿನಿಧಿಸುವ ಒಂದು ರಾಜಕೀಯ ಪಕ್ಷವು 1885ರಲ್ಲಿ ಬ್ರಿಟಿಷರ ಸಹಾಯದಿಂದಲೇ 'ರಾಷ್ಟ್ರೀಯ ಕಾಂಗ್ರೆಸ್' ಆಗಿ ಉದಯವಾಯಿತು. ಬ್ರಿಟಿಷರು ಈ ವರ್ಗದ ಜನರನ್ನು ಮುಸ್ಲಿಂ ಪಾಳೆಯಗಾರರು ಮತ್ತೆ ದಂಗೆ ಏಳದಂತೆ ಎಚ್ಚರಿಕೆಯಿಂದ ಬಳಸಲಾರಂಭಿಸಿದರು. ತಾವು ಮುಸ್ಲಿಂರ ದುರಾಡಳಿತದಿಂದ ಭಾರತವನ್ನು-ಹಿಂದುಗಳನ್ನು ಮುಕ್ತಗೊಳಿಸಲು ಬಂದ ದೇವದೂತರೆಂದು ಹತ್ತು ಹಲವು ರೀತಿಗಳಲ್ಲಿ ಪ್ರಯತ್ನಿಸುತ್ತಾ ಬಂದರು. ಭಾರತದ ಚರಿತ್ರೆಯನ್ನು, ಚಾರಿತ್ರಿಕ ದಾಖಲೆಗಳನ್ನು ಈ ದೃಷ್ಟಿಕೋಣದಿಂದ ವಿಕೃತಗೊಳಿಸಿದರು. ಈ ಕಾಲಘಟ್ಟದಲ್ಲಿ ಮೊದಲ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೆ ಇದ್ದ ಬ್ರಿಟಿಷರ ಪರವಾಗಿದ್ದ ಈ ಆಧುನಿಕ ಹಿಂದೂ ಜನವರ್ಗವನ್ನು ಮೇಲ್ವರ್ಗದ ಮುಸ್ಲಿಮರು ಸಹಜವಾಗಿಯೇ ಸಂಶಯದಿಂದ ತಾತ್ಸಾರದಿಂದ ನೋಡುತ್ತಿದ್ದರು. ಬ್ರಿಟಿಷ್ ವಿರೋಧಿ ಮನೋಭಾವದಿಂದಾಗಿ ಆಧುನಿಕ ಶಿಕ್ಷಣ, ಸಾಮಾಜಿಕ ಸುಧಾರಣೆಯಿಂದ ಅವರು ಬಹಳ ಕಾಲ ದೂರವಿದ್ದರು.

ಎರಡನೇ ಸ್ವಾತಂತ್ರ್ಯ ಸಂಗ್ರಾಮ ಬ್ರಿಟಿಷರ ಒಡೆದು ಆಳುವ ನೀತಿ

ಆದರೆ ಅನತಿಕಾಲದಲ್ಲಿಯೇ, ಬ್ರಿಟಿಷರಿಗೆ ಎದುರಾಗಿ, ದೇಶೀಯ ಬಂಡವಾಳಶಾಹಿಗಳು ತಮ್ಮ ವ್ಯಾಪಾರ, ವಾಣಿಜ್ಯ, ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಾರಂಭಿಸಿದರು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸತೊಡಗಿದರು. ಆಧುನಿಕ, ವೈಜ್ಞಾನಿಕ, ಜಾತ್ಯಾತೀತ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಪ್ರತಿಪಾದಿಸುತ್ತಾ ಬಂದರು. ಬ್ರಿಟಿಷರ ಆಶೀರ್ವಾದದಿಂದ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಕಾಂಗ್ರೆಸ್ ಕ್ರಮೇಣ ಬ್ರಿಟಿಷರ ಆಳ್ವಿಕೆ, ರೀತಿ ನೀತಿಗಳಿಗೆ ಸವಾಲು ಒಡ್ಡಲು ಸಿದ್ಧವಾಯಿತು. ಬೆಳೆದು ಬರುತ್ತಿದ್ದ ದೇಶೀಯ ಬಂಡವಾಳಶಾಹಿ ಶಕ್ತಿಗಳನ್ನುಮೊಳಕೆಯಲ್ಲಿಯೇ ಮುರಿದು ಹಾಕಲು ಬ್ರಿಟಿಷ್ ಆಳರಸರು 1905ರಲ್ಲಿ ನಡೆಸಿದ ಬಂಗಾಳ ವಿಭಜನೆಯಿಂದಾಗಿ ದೇಶದಾದ್ಯಂತ ಬ್ರಿಟಿಷ್ ವಿರೋಧಿ ಪ್ರತಿಪ್ರಭಟನೆಗಳು ಭುಗಿಲೆದ್ದವು. ಈ ಚಳುವಳಿ 'ಪೂರ್ಣ ಸ್ವರಾಜ್ಯ' ಪಡೆಯುವ ಎರಡನೇಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಯಾಯಿತು. ಇದರ ನಾಯಕತ್ವವನ್ನು ರಾಷ್ಟ್ರೀಯ ಕಾಂಗ್ರೆಸ್ ವಹಿಸಿಕೊಂಡಿತ್ತು. ರಾಷ್ಟ್ರೀಯ ವಿಮೋಚನಾ ಆಂದೋಲನದಿಂದ ಮುಸ್ಲಿಮರನ್ನು ದೂರವಿಡಲು ಮುಸ್ಲಿಂ ಬಹುಸಂಖ್ಯಾತರಿರುವ ಬಂಗಾಳದ ಪೂರ್ವ ಭಾಗವನ್ನು ಪ್ರತ್ಯೇಕ ರಾಜ್ಯವಾಗಿ ಬ್ರಿಟಿಷರು ಘೋಷಿಸಿ, ಬಂಗಾಳ ವಿಭಜನೆ ನಡೆಸಿದರು. ಅಲ್ಲದೇ, 1906ರಲ್ಲಿ 'ಅಖಿಲ ಭಾರತ ಮುಸ್ಲಿಂ ಲೀಗ್' ಎಂಬ ಪಕ್ಷವನ್ನು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರತಿಸ್ಪರ್ಧಿಯಾಗಿ ಸ್ಥಾಪಿಸಲು ಬ್ರಿಟಿಷರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾದರು. ಹಾಗೆಯೇ, 1907ರಲ್ಲಿ ಹಿಂದೂ ಸನಾತನ ಧರ್ಮ, ವರ್ಣಾಶ್ರಮ ಪದ್ಧತಿ, ಪಾಳೆಯಗಾರಿ ಮೌಲ್ಯ, ಎತ್ತಿ ಹಿಡಿಯುವ ಸಮಾಜ ಸುಧಾರಣಾ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸಿ 'ಹಿಂದೂ ಮಹಾ ಸಭಾ' ಪಕ್ಷವನ್ನು ಹುಟ್ಟು ಹಾಕಲು ಬ್ರಿಟಿಷರೇ ಸಾಕಷ್ಟು ಕಾರಣರಾದರು. ಮುಂದೆ 1920ರ ದಶಕದಲ್ಲಿ 'ಹಿಂದುತ್ವ' ಆಧಾರದಲ್ಲಿ ಭಾರತವನ್ನು ಪುನರ್ ರಚಿಸಲು 'ರಾಷ್ಟ್ರೀಯ ಸ್ವಯಂಸೇವಕ ಸಂಘ'ವೂ ಹುಟ್ಟಿಕೊಂಡಿತು.

> ವ್ಯಾಪಕವಾದ ರಾಷ್ಟ್ರೀಯ ಹೋರಾಟದಿಂದ **1905**ರ ಬಂಗಾಳ ವಿಭಜನೆಯನ್ನು **1911**ರಲ್ಲಿ ಬ್ರಿಟಿಷರು ಹಿಂತೆಗೆದುಕೊಂಡು ಯಥಾಸ್ಥಿತಿಗೆ ಬರುವಂತೆ ಮಾಡಲು ಅದು ಸಾಧ್ಯವಾಯಿತು. ಆದರೆ, ಈ ಕಾಲಘಟ್ಟದಲ್ಲಿ ಬ್ರಿಟಿಷರು ಪ್ರಾರಂಭಿಸಿದ ಹಿಂದು-ಮುಸ್ಲಿಮರನ್ನು ಒಡೆದು ಆಳುವ ನೀತಿಯು **1947**ರಲ್ಲಿ ಸ್ವಾತಂತ್ರ್ಯ ದೊರಕುವವರೆಗೂ ಮುಂದುವರಿಯಿತು. ಇದರಿಂದ ಸ್ವಾತಂತ್ರ್ಯ ಹೋರಾಟಕ್ಕೆ ತೀವ್ರ ಆಘಾತಗಳು ಉಂಟಾಗಿದ್ದವು.

'ಹಿಂದೂ ಮಹಾಸಭಾ' ರಾಜಕೀಯ ಪಕ್ಷಕ್ಕೆ ಆರ್‌ಎಸ್‌ಎಸ್ ಸೈದ್ಧಾಂತಿಕ ಹಾಗೂ ಸಂಘಟನಾ ತಳಪಾಯ ನೀಡಿತು.

ವ್ಯಾಪಕವಾದ ರಾಷ್ಟ್ರೀಯ ಹೋರಾಟದಿಂದ 1905ರ ಬಂಗಾಳ ವಿಭಜನೆಯನ್ನು 1911ರಲ್ಲಿ ಬ್ರಿಟಿಷರು ಹಿಂತೆಗೆದುಕೊಂಡು ಯಥಾಸ್ಥಿತಿಗೆ ಬರುವಂತೆ ಮಾಡಲು ಸಾಧ್ಯವಾಯಿತು. ಆದರೆ, ಈ ಕಾಲಘಟ್ಟದಲ್ಲಿ ಬ್ರಿಟಿಷರು ಪ್ರಾರಂಭಿಸಿದ ಹಿಂದು-ಮುಸ್ಲಿಮರನ್ನು ಒಡೆದು ಆಳುವ ನೀತಿಯು 1947ರಲ್ಲಿ ಸ್ವಾತಂತ್ರ್ಯ ದೊರಕುವವರೆಗೂ ಮುಂದುವರಿಯಿತು. ಇದರಿಂದ ಸ್ವಾತಂತ್ರ್ಯ ಹೋರಾಟಕ್ಕೆ ತೀವ್ರ ಅಡೆತಡೆಗಳು ಬಂದೊದಗಿದವು. ಪ್ರಾರಂಭದಲ್ಲಿ ಹಿಂದೂ,ಮುಸ್ಲಿಂ ಕೋಮುವಾದಿಗಳನ್ನು ಎತ್ತಿ ಹಿಡಿಯುತ್ತಿದ್ದ ಬ್ರಿಟಿಷರು, ತಮ್ಮ ಒಡೆದು ಆಳುವ ನೀತಿಯನ್ನು ಮುಂದುವರಿ ಸಿಕೊಂಡು ಸಿಖ್, ದಲಿತರನ್ನು ತುಷ್ಟೀಕರಿಸಲು ಪ್ರಯತ್ನಿಸಿದರು. ಆ ಜನವರ್ಗದವರೂ ಸ್ವಾತಂತ್ರ್ಯ ಹೋರಾಟದಿಂದ ದೂರ ಉಳಿಯುವಂತೆ ಪ್ರಚೋದಿಸಿದರು. ವಿವಿಧ ಕೋಮುಗಳ ಆಧಾರದಲ್ಲಿ ಭಾರತವನ್ನು ಪುನರ್‌ರಚಿಸುವುದಕ್ಕೆ ಪರೋಕ್ಷವಾಗಿ ಬೆಂಬಲಿಸುತ್ತಾ ಬಂದರು. ಮುಖ್ಯವಾಗಿ ಹಿಂದು-ಮುಸ್ಲಿಂ ಎರಡು ಕೋಮುಗಳನ್ನು ಪ್ರತಿನಿಧಿಸುತ್ತಿದ್ದ 'ಮುಸ್ಲಿಂ ಲೀಗ್' ಮತ್ತು 'ಹಿಂದೂ ಮಹಾ ಸಭಾ' ಪಕ್ಷಗಳು ಪ್ರಾಚೀನ ಪಾಳೆಯಗಾರಿ ಮೌಲ್ಯಗಳನ್ನು ಎತ್ತಿ ಹಿಡಿಯುವ, ಗತಕಾಲದ ಸಮಾಜ, ಸಂಸ್ಕೃತಿಯನ್ನು ವೈಭವೀಕರಿಸುವುದರಲ್ಲಿಯೇ ನಿರತವಾಗುತ್ತಿದ್ದವು. 'ಮುಸ್ಲಿಂಲೀಗ್'ಮುಸ್ಲಿಂ ಕೋಮುವಾದವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತಿದ್ದರೆ, 'ಹಿಂದೂ ಮಹಾಸಭಾ' ಹಿಂದೂ ಕೋಮುವಾದವನ್ನು 'ರಾಷ್ಟ್ರೀಯತೆ'ಯ ಮುಸುಕಿನಲ್ಲಿ ಪ್ರತಿಪಾದಿಸುತ್ತಿತ್ತು. ಪ್ರಾರಂಭದಲ್ಲಿ 'ಮುಸ್ಲಿಂ ಲೀಗ್' ಉರ್ದು ರಾಜ್ಯ ಇರುವ ಪ್ರಾಂತ್ಯಗಳಲ್ಲಿ ಹಿಂದಿಯನ್ನು ರಾಜ್ಯ ಭಾಷೆಯಾಗಿ ಮಾಡುವುದಕ್ಕೆ ವಿರೋಧಿಸುತ್ತಿತ್ತು. ನಂತರದ ಕಾಲದಲ್ಲಿ 'ಹಿಂದೂಮಹಾಸಭೆ' 'ಉರ್ದು ಭಾಷೆ ರಾಜ್ಯ ಭಾಷೆಯಾಗುವುದನ್ನು ವಿರೋಧಿಸುತ್ತಿತ್ತು. ಎರಡೂ ಕೋಮುವಾದಿಗಳು ಸಮಾಜ ಸುಧಾರಣೆಗಳನ್ನು ಸ್ತ್ರೀ ಶಿಕ್ಷಣ ಮತ್ತು ಸಮಾನತೆ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಅನೇಕ ಕಾನೂನುಗಳ ಬದಲಾವಣೆಗಳನ್ನು ವಿರೋಧಿಸುತ್ತಿದ್ದವು.

ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕೆ ಬೃಹತ್ ಪ್ರಮಾಣದಲ್ಲಿ ಜನರನ್ನು ಒಗ್ಗೂಡಿಸಲು ತಿಲಕರ ಗಣೇಶ ಪೂಜೆ, ಬಂಗಾಳದ ದುರ್ಗಾ ಪೂಜೆ, ಮಹಾತ್ಮ ಗಾಂಧಿಯ ರಾಮರಾಜ್ಯ ಕಲ್ಪನೆ ಇವೆಲ್ಲವುಗಳೂ ಸಾಕಷ್ಟು ಫಲಕಾರಿಯಾಗಿದ್ದರೂ, ಕಾಲಕ್ರಮೇಣ ಇದರಿಂದ ಭಾರತದ ಅನೇಕ ರಾಷ್ಟ್ರೀಯ ನಾಯಕರು ಸನಾತನ ಧರ್ಮದ ಪ್ರತಿಪಾದಕರಾದರು. ಪ್ರತಿಯಾಗಿ ಮುಸ್ಲಿಮರೂ ಮುಂದೆ ಸಿಖ್‌ರೂ ಅದೇ ಜಾಡನ್ನು ಹಿಡಿದರು. 'ಹಿಂದುತ್ವ'ವನ್ನು ವೈಭವೀಕರಿಸಿದಂತೆ, ದಲಿತರು ಅದರ ವಿರುದ್ಧ ಬಂಡೆದ್ದರು. ಹಿಂದೂ ಸಾಮಾಜಿಕ ಪದ್ಧತಿಯ ಅಸಮಾನತೆ, ಶೋಷಣೆಗಳನ್ನು ತಡೆಯಲುಒತ್ತಡ ತಂದರು. ಸಮಾಜ ಸುಧಾರಣೆ ಆಂದೋಳನದಲ್ಲಿ ಹಿಂದುಗಳಿಗಿಂತ ಮುಸ್ಲಿಮರು ಬಹಳ ಹಿಂದೆ ಉಳಿದಿದ್ದರು. ಐವತ್ತು ವರ್ಷಗಳ ನಂತರವಷ್ಟೇ ಅಲಿಘಡ್ ಆಂದೋಳನದ ಪ್ರವರ್ತಕರಾದ ಸರ್ ಸಯ್ಯದ್ ಅಹ್ಮದ್ ಖಾನ್ ಮುಸ್ಲಿಮರಲ್ಲಿ ಸಮಾಜ ಸುಧಾರಣಾ ಕೆಲಸ ಪ್ರಾರಂಭಿಸಿದರು. ಆದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಬೆಂಬಲಿಸುವುದರಲ್ಲಿ ಮುಸ್ಲಿಮರ ಹಿತಾಸಕ್ತಿಗಳಿವೆ ಎಂದು ಅವರು ವಿಶ್ವಾಸವಿಟ್ಟುಕೊಂಡಿದ್ದರು.

ಹಿಂದು-ಮುಸ್ಲಿಂ ಎರಡು ಕೋಮುಗಳನ್ನು ಪ್ರತಿನಿಧಿಸುತ್ತಿದ್ದ 'ಮುಸ್ಲಿಂ ಲೀಗ್' ಮತ್ತು 'ಹಿಂದೂ ಮಹಾಸಭಾ' ಪಕ್ಷಗಳು ಪ್ರಾಚೀನ ಪಾಳೆಯಗಾರಿ ಮೌಲ್ಯಗಳನ್ನು ಎತ್ತಿ ಹಿಡಿಯುವ, ಗತಕಾಲದ ಸಮಾಜ, ಸಂಸ್ಕೃತಿಯನ್ನು ವೈಭವೀಕರಿಸುವುದರಲ್ಲಿಯೇ ನಿರತವಾಗುತ್ತಿದ್ದವು. 'ಮುಸ್ಲಿಂ ಲೀಗ್' ಮುಸ್ಲಿಂ ಕೋಮುವಾದವನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತಿದ್ದರೆ, 'ಹಿಂದೂ ಮಹಾಸಭಾ' ಹಿಂದೂ ಕೋಮುವಾದವನ್ನು 'ರಾಷ್ಟ್ರೀಯತೆ'ಯ ಮುಸುಕಿನಲ್ಲಿ ಪ್ರತಿಪಾದಿಸುತ್ತಿತ್ತು.

ಸ್ವಾತಂತ್ರ್ಯ ಸಮರ ಬೆಸೆದ ಐಕ್ಯತೆ

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಜಲಿಯಾನ್ ವಾಲಾಬಾಗ್, ಖಿಲಾಫತ್, ಅಸಹಕಾರ ಚಳುವಳಿಗಳಲ್ಲಿ, ಉಪ್ಪು ಸತ್ಯಾಗ್ರಹ, ದಂಡಿಯಾತ್ರೆ, ಕ್ವಿಟ್ ಇಂಡಿಯಾ ಆಂದೋಳನಗಳಲ್ಲಿ ಹಿಂದು-ಮುಸ್ಲಿಂ-ಸಿಖ್‌ರ ಐಕ್ಯತೆಯು ಉದಾತ್ತ ಉದಾಹರಣೆಗಳು ಇತಿಹಾಸದ ಪುಟಗಳಲ್ಲಿ ಧಾರಾಳವಾಗಿ ಸಿಗುತ್ತವೆ. ರಾಷ್ಟ್ರೀಯ ಕಾಂಗ್ರೆಸ್, ಅದರೊಂದಿಗೆ ಸಹಕರಿಸುತ್ತಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷ, ಕಮ್ಯುನಿಸ್ಟ್ ಪಕ್ಷ ಮತ್ತು ಅವುಗಳ ಮಾರ್ಗದರ್ಶನದಲ್ಲಿ ಸಂಘಟನೆಗೊಂಡ ಬೃಹತ್ ಪ್ರಮಾಣದ ಕಾರ್ಮಿಕ, ರೈತ, ವಿದ್ಯಾರ್ಥಿ-ಯುವಜನ, ಮಹಿಳಾ, ಬುದ್ಧಿಜೀವಿಗಳ ಸಂಘಟನೆಗಳು ಎಲ್ಲಾ ಧರ್ಮದ, ಕೋಮಿನ, ಜಾತಿಯ, ಭಾಷೆಯ, ಪ್ರದೇಶದ ಸಾಮಾನ್ಯ ಜನರಲ್ಲಿ ರಾಷ್ಟ್ರೀಯ ಏಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ ಸಮಾಜವಾದ ಮೌಲ್ಯಗಳನ್ನು ಮೈಗೂಡಿಸುತ್ತಿದ್ದವು. ಫ್ರೆಂಚ್ ಕ್ರಾಂತಿ, ಸೋವಿಯತ್ ಕ್ರಾಂತಿ, ಎಲ್ಲಾ ವಸಾಹತುಗಳಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ವಿಮೋಚನಾ ಆಂದೋಳನಗಳು ಇತ್ಯಾದಿಗಳು ನಮ್ಮ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸ್ಫೂರ್ತಿ, ಆತ್ಮವಿಶ್ವಾಸ ತುಂಬಿಸುತ್ತಿದ್ದವು.

ಆದರೆ, ಬ್ರಿಟಿಷರ ಒಡೆದು ಆಳುವ ನೀತಿ ಮತ್ತು ಕಾಂಗ್ರೆಸ್ಸಿನ ರಾಜನೀತಿ ಹಾಗೂ ರಿಯಾಯಿತಿಗಳನ್ನು, ಸವಲತ್ತುಗಳನ್ನು, ಕ್ರಮೇಣ ಅಧಿಕಾರ ಹಸ್ತಾಂತರಗೊಳಿಸಲು ಮಾತ್ರ ಸ್ವಾತಂತ್ರ್ಯ ಹೋರಾಟ ನಡೆಸುವ ತಂತ್ರಗಳಿಂದಾಗಿ ಭಾರತದಲ್ಲಿ ಕೋಮುವಾದಕ್ಕೆ ಮೂಲ ಆಧಾರವಾದ ಪಾಳೆಯ ಗಾರಿ, ಭೂಮಾಲಕ ಪದ್ಧತಿ ಬುಡಸಮೇತ ಕಿತ್ತು ಹಾಕುವ ಯಶಸ್ವಿ ಕ್ರಾಂತಿಕಾರಿ ಆಂದೋಳನವಾಗಲಿಲ್ಲ. ಪರಿಣಾಮವಾಗಿ, ಹಿಂದು-ಮುಸ್ಲಿಂ ಕೋಮುವಾದಿಗಳ ಒತ್ತಡಕ್ಕೆ ಬಲಿಯಾಗಿ ದೇಶವಿಭಜನೆಯ ಮೂಲಕ ಪರಸ್ಪರ ದ್ವೇಷ, ಅಸೂಯೆ, ಅಪನಂಬಿಕೆಯುಳ್ಳ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ದೇಶಗಳ ರಚನೆಯ ಮೂಲಕ ಸ್ವಾತಂತ್ರ್ಯ ಪಡೆಯುವಂತಾಯಿತು. ಎರಡು ಕೋಮುಗಳೊಳಗೆ ಸಿಡಿದೆದ್ದ

ಗಲಭೆಗಳನ್ನು ಶಾಂತ ಗೊಳಿಸಲು ಸತತವಾಗಿ ಪ್ರಯತ್ನಿಸಿದ ಮಹಾತ್ಮಗಾಂಧಿ ಹಿಂದೂ-ಕೋಮುವಾದಿಗಳ ಆರ್.ಎಸ್.ಎಸ್., ಹಿಂದೂ ಮಹಾಸಭೆಯ ಕಾರ್ಯಕರ್ತರಿಂದ ಅಮಾನುಷವಾಗಿ ಕೊಲೆಗೀಡಾಗುವಂತಾಯಿತು.

ಎರಡನೇ ಸ್ವಾತಂತ್ರ್ಯ ಹೋರಾಟದ ಅಂತಿಮ ಘಟ್ಟದಲ್ಲಿ ಭುಗಿಲೆದ್ದ ಕಾರ್ಮಿಕ ಮುಷ್ಕರ, ರೈತ ಹೋರಾಟ ಸೈನಿಕ ಬಂಡಾಯ ಗಳನ್ನು ಒಂದೆಡೆ ಅಧಿಕಾರ ಹಸ್ತಾಂತರಿಸುವುದು ಅನಿವಾರ್ಯ ಎಂದು ಮನಗಂಡ ಬ್ರಿಟಿಷರು ಮತ್ತು ಅಧಿಕಾರ ಸ್ವೀಕರಿಸಲು ಆತುರರಾಗಿದ್ದವ ಕಾಂಗ್ರೆಸ್ ಮತ್ತು ಇನ್ನೊಂದೆಡೆ ಮುಸ್ಲಿಂ ಲೀಗ್ ಬಲಪ್ರಯೋಗಿಸಿ ಹತ್ತಿಕ್ಕಿದ್ದವು. ಎರಡನೇ ಜಾಗತಿಕ ಯುದ್ಧಾನಂತರದ ಅಂತರ್‍ರಾಷ್ಟ್ರೀಯ ಪರಿಸ್ಥಿತಿ, ಉಕ್ಕಿ ಬರುತ್ತಿದ್ದ ರಾಷ್ಟ್ರೀಯ ವಿಮೋಚನಾ ಆಂದೋಳನಗಳು, ಚೀನಾ, ವಿಯೆಟ್ನಾಂ, ಉತ್ತರ ಕೊರಿಯಾ ಗಳಲ್ಲಿ ರೈತ-ಕಾರ್ಮಿಕರನ್ನು ಪ್ರತಿನಿಧಿಸಿದ ಕಮ್ಯುನಿಸ್ಟ್ ಪಕ್ಷಗಳು ಇಂತಹ ಆಂದೋಳನಗಳಲ್ಲಿ ಪಡೆದಿದ್ದ ಮುಂದಾಳುತ್ವದ ಹಿನ್ನೆಲೆಯಲ್ಲಿ ಬ್ರಿಟಿಷರು, ಕಾಂಗ್ರೆಸ್, ಮುಸ್ಲಿಂ ಲೀಗ್ ದೇಶಾದ್ಯಂತ ಭುಗಿಲೆದ್ದ ಬಂಡಾಯ ಗಳನ್ನು ಗಮನಿಸಿ, ರಾಷ್ಟ್ರೀಯ ಬಂಡವಾಳಶಾಹಿಗಳೇ ಬ್ರಿಟಿಷರಿಂದ ತರಾತುರಿಯಲ್ಲಿ ಅಧಿಕಾರ ಪಡೆದವು. ಪ್ರತಿಯಾಗಿ ಬ್ರಿಟಿಷರಿಗೆ ಉಭಯ ದೇಶಗಳಲ್ಲಿ ತಮ್ಮ ವ್ಯಾಪಾರ, ಕೈಗಾರಿಕೆಗಳಿಗೆ ಮೊದಲಿನಂತೆಯೇ ಗರಿಷ್ಠ ಅವಕಾಶಗಳನ್ನು ನೀಡಿದವು. ಭಾರತದ ಎರಡನೇ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್-ರಾಷ್ಟ್ರೀಯ ಬಂಡವಾಳ ಶಾಹಿಗಳು ದೇಶದ ಪಾಳೆಯಗಾರರೊಂ ದಿಗೆ, ಭೂಮಾಲಕರೊಂದಿಗೆ ರಾಜಿ ಮಾಡಿಕೊಂಡು ಪೂರ್ಣ ಪ್ರಮಾಣದ ಆಧುನಿಕ ಬಂಡವಾಳ ಶಾಹಿ ಪದ್ಧತಿಯಾಗಲೀ ಸಮಾಜವಾದ ಪದ್ಧತಿಯಾಗಲೀ ದೇಶದಲ್ಲಿ ಬೆಳೆದು ಬರಲು ಅನುವಾಗುವಂತೆ ಕೋಮುವಾದದ ಬೇರನ್ನು ಬುಡಸಮೇತ ಕಿತ್ತು ಹಾಕಲು ವಿಫಲವಾಯಿತು.

> ಬ್ರಿಟಿಷರ ಒಡೆದು ಆಳುವ ನೀತಿ ಮತ್ತು ಕಾಂಗ್ರೆಸ್ಸಿನ ರಾಜಿ ನೀತಿ ಹಾಗೂ ರಿಯಾಯಿತಿಗಳನ್ನು, ಸವಲತ್ತುಗಳನ್ನು, ಕ್ರಮೇಣ ಅಧಿಕಾರ ಹಸ್ತಾಂತರಗೊಳಿಸಲು ಮಾತ್ರ ಸ್ವಾತಂತ್ರ್ಯ ಹೋರಾಟ ನಡೆಸುವ ತಂತ್ರಗಳಿಂದಾಗಿ ಭಾರತದಲ್ಲಿ ಕೋಮುವಾದಕ್ಕೆ ಮೂಲ ಆಧಾರವಾದ ಪಾಳೆಯಗಾರಿ, ಭೂಮಾಲಿಕ ಪದ್ಧತಿ ಬುಡಸಮೇತ ಕಿತ್ತು ಹಾಕುವ ಯಶಸ್ವಿ ಕ್ರಾಂತಿಕಾರಿ ಆಂದೋಳನವಾಗಲಿಲ್ಲ.

ಸ್ವತಂತ್ರ ಭಾರತದಲ್ಲಿ ಕೋಮುವಾದ

ಮೂರನೇ ಸ್ವಾತಂತ್ರ್ಯ ಹೋರಾಟ: ಕೋಮುವಾದವು ನಮ್ಮ ದೇಶದ ರಾಜಕೀಯ ದಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ನಂತರದ ಕಾಲದ ಉದ್ದಕ್ಕೂಅತ್ಯಂತ ಪ್ರತಿಗಾಮಿ ಹಾಗೂ ವಿಧ್ವಂಸಕಪಾತ್ರ ವಹಿಸುತ್ತಾ ಬಂದಿದೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಅಡೆತಡೆ ಒಡ್ಡಿದ್ದರೆ ಇಂದು ಕೋಮುವಾದವು ನಮ್ಮ ರಾಷ್ಟ್ರೀಯ ಜೀವನದ ಮೂಲಾಧಾರ ಗಳಾದ ಜಾತ್ಯಾತೀತತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ತತ್ವಗಳಿಗೆ ಸವಾಲು ಒಡ್ಡುತ್ತದೆ. ಕೋಮುವಾದವು ಎಲ್ಲಾ ಕ್ಷೇತ್ರಗಳಲ್ಲಿ ಯಥಾ ಸ್ಥಿತಿಯು ಮುಂದುವರಿಯುವಂತೆ ಸತತವಾಗಿ ಪ್ರಯತ್ನಿಸಿದೆ. ಜನರಲ್ಲಿ ಅಭದ್ರತೆಯ ಅಪನಂಬಿಕೆಯ, ದ್ವೇಷದ ಭಾವನೆಗಳನ್ನು ಕೆರಳಿಸಿ ಪರಸ್ಪರರನ್ನು ಹೊಯ್ದಾಟಕ್ಕೆ ಎಳೆದೊಯ್ಯುತ್ತದೆ. ಎಲ್ಲಾ ಜನರ ಸಮಾನ ವೈರಿಯನ್ನು ಗುರುತಿಸಿ ಅದರ ವಿರುದ್ಧ ಸಂಘಟಿತ ಹೋರಾಟ ನಡೆಸಿದಂತೆ ಜನರನ್ನು ವಿಮುಖಗೊಳಿಸುತ್ತದೆ. ಸಹಜವಾಗಿಯೇ, ಕೋಮುವಾದವನ್ನು ಭಾರತದ ಮಾದರಿಯ ಫ್ಯಾಸಿಸ್ಟ್ ಎಂದು ಗುರುತಿಸಿ, ಅದು ಆಂತರಿಕ ವೈರಿ ಯಾಗಿದ್ದು, ವಿದೇಶಿ ಆಕ್ರಮಣಕ್ಕಿಂತಲೂ ಹೆಚ್ಚು ಅಪಾಯಕಾರಿ ಎಂದು ಭಾರತದ ಪ್ರಧಾನಿ ಜವಾಹರಲಾಲ್ ನೆಹರು ಉಚ್ಚರಿಸಿದ್ದಾರೆ.

ಕೋಮುವಾದಕ್ಕೆ ಪ್ರೋತ್ಸಾಹ, ಆಶ್ರಯ, ಧನ ಸಹಾಯ ಮಾಡುತ್ತಿರುವುದು ಹೆಚ್ಚಾಗಿ ಹಿಂದಿನ ರಾಜಮಹಾರಾಜರು, ಪಾಳೆಯಗಾರರು, ಭೂಮಾಲಕರು, ಪುರೋಹಿತಶಾಹಿಗಳು, ಮಠಾಧೀಶರು, ಶ್ರೀಮಂತ ವ್ಯಾಪಾರಿಗಳು, ಉನ್ನತ ಅಧಿಕಾರಿಗಳು, ಬಂಡವಾಳಶಾಹಿಗಳು. ಕಾರಣ, ಪ್ರಜಾಪ್ರಭುತ್ವ ಗಟ್ಟಿಯಾಗಿ ಬೇರೂರಿದಂತೆ, ಆರ್ಥಿಕ ಪ್ರಗತಿ ಆಗುತ್ತಿದ್ದಂತೆ, ಈ ಸ್ಥಾಪಿತ ಹಿತಾಸಕ್ತಿಗಳು ಸಮಾಜದಲ್ಲಿ ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಾ ಬರುತ್ತವೆ. ತಮ್ಮಗಳ ಸ್ಥಾನ-ಮಾನಗಳನ್ನು ಪುನಃ ಪಡೆಯಲು ಪ್ರಯತ್ನಿಸುತ್ತವೆ. ಜನರ ದಿನನಿತ್ಯದ ಸಮಸ್ಯೆಗಳಾದ ವಸತಿ, ನೀರು, ಉದ್ಯೋಗ, ಹೆಣ್ಣು-ಗಂಡು ಸಂಬಂಧ, ಗ್ರಾಹಕ-ವ್ಯಾಪಾರಿ ಸಂಬಂಧ, ಕೂಲಿ-ಮಾಲಕರ ಸಂಬಂಧ, ರೈತ-ಭೂಮಾಲಿಕ ಸಂಬಂಧ, ಸಾಲ ಪಡೆದವರ-ಸಾಲಕೊಟ್ಟವರ ಸಂಬಂಧ......ಇತ್ಯಾದಿಗಳಿಗೆ ನಡೆಯುತ್ತಿರುವ ಹೋರಾಟಗಳನ್ನು ಕೋಮುಗಲಭೆಗಳನ್ನಾಗಿ ಪರಿವರ್ತಿಸಿ ರಾಜಕೀಯ ಲಾಭ ಗಿಟ್ಟಿಸುವುದೇ ಕೋಮುವಾದ. ಕೋಮುವಾದಿಗಳು ಹೆಚ್ಚಾಗಿ ತಮ್ಮ ಕೋಮಿನ ಮೇಲ್ವರ್ಗದ ಜನರ ಹಿತಾಸಕ್ತಿಗಳನ್ನು ಮುಂದೊಡ್ಡುವುವು. ಬ್ರಿಟಿಷ್ ಆಳ್ವಿಕೆಯಲ್ಲಿ ಕೇಂದ್ರದಲ್ಲಿ, ಪ್ರಾದೇಶಿಕ ಸರಕಾರದಲ್ಲಿ ಹೆಚ್ಚು ಸ್ಥಾನ-ಮಾನಗಳು, ಸರಕಾರಿ ಹುದ್ದೆಯಲ್ಲಿ ಹೆಚ್ಚು ಅವಕಾಶಗಳು, ತಮ್ಮ ತಮ್ಮ ಕೋಮಿನ ಜನಸಂಖ್ಯೆ ಹೆಚ್ಚು ಇರುವಲ್ಲಿ ಅವರವರ ಕೋಮುಗಳ ಪ್ರಾದೇಶಿಕ ಸರಕಾರಗಳ ರಚನೆ, ಇತ್ಯಾದಿಗಳಿಗೆ ಬ್ರಿಟಿಷ್ ಸರಕಾರವನ್ನು ಅವರು ಒತ್ತಾಯಿಸುತ್ತಿದ್ದರು. ಬ್ರಿಟಿಷರ ಮನ ಒಲಿಸಲು ಏನು ಮಾಡಲೂ ಸಿದ್ಧವಾಗಿದ್ದ ಕೋಮುಶಕ್ತಿಗಳು ಸ್ವಾತಂತ್ರ್ಯ ಹೋರಾಟದ ಪ್ರತಿ ಒಂದು ಹಂತದಲ್ಲಿ ಬ್ರಿಟಿಷರ ಪರವಾಗಿಯೇ ನಿಂತಿದ್ದವು. ಸಂಪೂರ್ಣ ಸ್ವರಾಜ್ಯದ ಬೇಡಿಕೆಯನ್ನು, ಹೋರಾಟವನ್ನು ಲೇವಡಿ ಮಾಡುತ್ತಿದ್ದರು. ವಿರೋಧಿಸುತ್ತಿದ್ದರು. ಸಾಮಾಜಿಕ, ಆರ್ಥಿಕ, ರಾಜಕೀಯ ಸುಧಾರಣೆಗಳನ್ನು ವಿರೋಧಿಸುತ್ತಿದ್ದ ಈ ಕೋಮುವಾದಿ ಸಂಘಟನೆಗಳ ಬೇಡಿಕೆಗಳಲ್ಲಿ ಜನಸಾಮಾನ್ಯರಿಗೆ ಸಂಬಂಧಿಸಿದ್ದ ಕೂಲಿ, ಭೂಮಿ, ಉದ್ಯೋಗ, ಶಿಕ್ಷಣ, ಸಮಾನತೆ ಮುಂತಾದ ಯಾವುದೇ ಇಲ್ಲದಿರುವುದನ್ನು ಗಮನಿಸಬೇಕು. ಕೋಮುವಾದಿಗಳು ಅತ್ಯಂತ ಪರಿಣಿತ ಸಂದರ್ಭ ಸಾಧಕರು. ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿಯೂ ಕೋಮುವಾದಿಗಳ ಗುರಿ ಧೋಣೆಗಳು ಇದೇ ರೀತಿ ಮುಂದುವರೆಯುತ್ತಿವೆ. ಆಗ ಬ್ರಿಟಿಷರ

ಆಳ್ವಿಕೆಯ ಮೇಲೆ ಒತ್ತಡವನ್ನು ತರುತ್ತಿದ್ದರೆ ಈಗ ಒತ್ತಡವನ್ನು ತರುತ್ತಿದ್ದರೆ, ಈಗ ಕಾಂಗ್ರೆಸ್ ಆಳ್ವಿಕೆಯ ಮೇಲೆ ತಮ್ಮ ಒತ್ತಡ ಹೇರುತ್ತಿವೆ.

ಸ್ವಾತಂತ್ರ್ಯಾನಂತರದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯ ಒತ್ತಡಗಳಿಂದಾಗಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್, ಸ್ವಾತಂತ್ರ್ಯ ಹೋರಾಟದ ಆಶೋತ್ತರಗಳನ್ನು ಸ್ವಲ್ಪ ಮಟ್ಟಿಗೆ ಗಮನದಲ್ಲಿರಿಸಿಕೊಂಡು, ಆರ್ಥಿಕ ಪ್ರಗತಿಗಾಗಿ, ಸ್ವಾವಲಂಬನೆಗಾಗಿ ಕೆಲವು ಮಹತ್ವದ ಬದಲಾವಣೆಗಳನ್ನು ತಂದಿತು. ಜಾತ್ಯಾತೀತತೆ, ಪ್ರಜಾಪ್ರಭುತ್ವ ಆಧಾರದಲ್ಲಿ ಒಕ್ಕೂಟ ಪದ್ಧತಿಯ ಸಂಸತ್ ಮಾದರಿ ಸಂವಿಧಾನ, ಪಂಚವಾರ್ಷಿಕ ಯೋಜನೆ, ರಾಜಧನ ರದ್ಧತಿ, ವಿಮೆ, ಬ್ಯಾಂಕ್, ಘನ ಕೈಗಾರಿಕೆಗಳ ರಾಷ್ಟ್ರೀಕರಣ, ಸಾರ್ವಜನಿಕ ಕ್ಷೇತ್ರದ ಮೇಲುಗೈ, ಸಾಮಾಜಿಕ ನ್ಯಾಯಾ ಇತ್ಯಾದಿಗಳನ್ನು ಪ್ರತಿಪಾದಿಸುತ್ತಾ ಜ್ಯಾರಿಗೊಳಿಸಲು ಪ್ರಯತ್ನಿಸಿತು. ಸಾಮ್ರಾಜ್ಯಶಾಹಿಗಳ ಆಕ್ರಮಣವನ್ನು ತಡೆಯಲು ಸಮಾಜವಾದಿ ದೇಶಗಳೊಂದಿಗೆ ನಿಕಟ ಸಂಬಂಧ ಮತ್ತು ಮೂರನೇ ಜಗತ್ತಿನ ರಾಷ್ಟ್ರಗಳ ಜೊತೆಗೂಡಿ ಅಲಿಪ್ತ ನೀತಿ ಹಾಗೂ ವಿಶ್ವಶಾಂತಿ ಗುರಿಯುಳ್ಳ ವಿದೇಶಾಂಗ ನೀತಿ ಇತ್ಯಾದಿಗಳಿಗಾಗಿ ಶ್ರಮಿಸುವ ಗುರಿ ಇಟ್ಟುಕೊಂಡಿತ್ತು. ಇವೆಲ್ಲವುಗಳನ್ನು ಸ್ವಾತಂತ್ರ್ಯಾನಂತರ ಅಸ್ತಿತ್ವಕ್ಕೆ ಬಂದ ಆರ್.ಎಸ್.ಎಸ್. ಮತ್ತು ಹಿಂದೂ ಮಹಾಸಭೆಯಂತಹ ಕೋಮುವಾದಿ ಸಂಘಟನೆಗಳ ರಾಜಕೀಯ ಮುಖವಾಡ ಹೊತ್ತ ಭಾರತೀಯ ಜನ ಸಂಘ ಕಟುವಾಗಿ ವಿರೋಧಿಸುತ್ತಿತ್ತು. ಆದರೆ, ಕಾಂಗ್ರೆಸ್ ಆಳ್ವಿಕೆಯು ಬಂಡವಾಳಶಾಹಿ–ಭೂಮಾಲಕ ಪ್ರಭುತ್ವವಾಗಿದ್ದರೂ ಅದರ ಕೆಲವು ಪ್ರಗತಿಪರ ಹಾಗೂ ಜನಪರ ಧೋರಣೆಗಳನ್ನು ಅವಿಭಜಿತ ಭಾರತ ಕಮ್ಯುನಿಸ್ ಪಕ್ಷ, ನಂತರದ ಭಾರತ ಮಾರ್ಕ್ಸ್‌ವಾದಿ ಪಕ್ಷ ಹಾಗೂ ಇತರ ಎಡಪಕ್ಷಗಳು ಬೆಂಬಲಿಸುತ್ತಿದ್ದವು. ಅವುಗಳ ಪ್ರಾಮಾಣಿಕ ಯಶಸ್ವೀ ಅನುಷ್ಠಾನಕ್ಕೆ ಒತ್ತಾಯಿಸಿ ಸಂಸತ್ತಿನ ಒಳಗೂ ಹೊರಗೂ ಹೋರಾಟಗಳನ್ನು ಸಂಘಟಿಸುತ್ತಿದ್ದವು. ಮಹಾತ್ಮಾಗಾಂಧಿಯ ಕೊಲೆಯ ನಂತರ ಆರ್.ಎಸ್.ಎಸ್.ನ್ನು ಸ್ವಲ್ಪ ಕಾಲ ಕಾನೂನು ಬಾಹಿರಗೊಳಿಸಿ, ನಂತರ ಅದು ರಾಜಕೀಯದಲ್ಲಿ ಭಾಗವಹಿಸುವುದಿಲ್ಲ ಎಂದು ಅದರ ಮುಖ್ಯ ಸಂಚಾಲಕರಾದ ಗೋಲ್ವಾಲ್ಕರ್ ಆಶ್ವಾಸನೆಯ ಆಧಾರದಲ್ಲಿ ನಿಷೇಧಾಜ್ಞೆಯನ್ನು ಹಿಂದೆತೆಗೆದುಕೊಳ್ಳಲಾಯಿತು. ಪ್ರಾರಂಭದಲ್ಲಿ ಪುರೋಗಾಮಿ ಧೋರಣೆಗಳು ಕಾರ್ಯಗತವಾಗುತ್ತಿದ್ದಾಗ ಪ್ರತಿಗಾಮಿ ಶಕ್ತಿಗಳು ಕೋಮುವಾದಿಗಳು ಸ್ವಲ್ಪ ಮಂದವಾಗಿದ್ದವು.

> ಬ್ರಿಟಿಷರ ಮನೆಒಲಿಸಲು ಏನು ಮಾಡಲೂ ಸಿದ್ಧವಾಗಿದ್ದ ಕೋಮುಶಕ್ತಿಗಳು ಸ್ವಾತಂತ್ರ್ಯ ಹೋರಾಟದ ಪ್ರತಿ ಒಂದು ಹಂತದಲ್ಲಿ ಬ್ರಿಟಿಷರ ಪರವಾಗಿಯೇ ನಿಂತಿದ್ದವು. ಸಂಪೂರ್ಣ ಸ್ವರಾಜ್ಯದ ಬೇಡಿಕೆಯನ್ನು, ಹೋರಾಟವನ್ನು ಲೇವಡಿ ಮಾಡುತ್ತಿದ್ದರು. ವಿರೋಧಿಸುತ್ತಿದ್ದರು. ಸಾಮಾಜಿಕ, ಆರ್ಥಿಕ, ರಾಜಕೀಯ ಸುಧಾರಣೆಗಳನ್ನು ವಿರೋಧಿಸುತ್ತಿದ್ದ ಈ ಕೋಮುವಾದಿ ಸಂಘಟನೆಗಳ ಬೇಡಿಕೆಗಳಲ್ಲಿ ಜನಸಾಮಾನ್ಯರಿಗೆ ಸಂಬಂಧಿಸಿದ್ದ ಕೂಲಿ, ಭೂಮಿ, ಉದ್ಯೋಗ, ಶಿಕ್ಷಣ, ಸಮಾನತೆ ಮುಂತಾದ ಯಾವುದೇ ಇಲ್ಲದಿರುವುದನ್ನು ಗಮನಿಸಬೇಕು. ಕೋಮುವಾದಿಗಳು ಅತ್ಯಂತ ಪರಿಚಿತ ಸಂದರ್ಭ ಸಾಧಕರು. ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿಯೂ ಕೋಮುವಾದಿಗಳ ಗುರಿ ಧೋರಣೆಗಳು ಇದೇ ರೀತಿ ಮುಂದುವರೆಯುತ್ತಿವೆ. ಆಗ ಬ್ರಿಟಿಷರ ಆಳ್ವಿಕೆಯ ಮೇಲೆ ಒತ್ತಡವನ್ನು ತರುತ್ತಿದ್ದರೆ ಈಗ ಒತ್ತಡವನ್ನು ತರುತ್ತಿದ್ದರೆ, ಈಗ ಕಾಂಗ್ರೆಸ್ ಆಳ್ವಿಕೆಯ ಮೇಲೆ ತಮ್ಮ ಒತ್ತಡ ಹೇರುತ್ತಿವೆ.

ಕೋಮುವಾದಿಗಳೊಂದಿಗೆ ಕಾಂಗ್ರೆ ಸ್ಪರ್ಧೆ!

ಆದರೆ, ಸಾಮಾಜಿಕ, ಆರ್ಥಿಕ, ರಾಜಕೀಯ ಬದಲಾವಣೆಗಳಲ್ಲಿ ಜನರ ಮತ್ತು ಸ್ಥಾಪಿತ ಹಿತಾಸಕ್ತಿಗಳ ನಡುವಿನ ಸಂಪರ್ಕವು ಹರಿತಗೊಂಡಂತೆ, ಕಾಂಗ್ರೆಸ್ ತನ್ನ ಪ್ರಗತಿ ಪಥವನ್ನು ನಿಧಾನಿಸಿತು. ಗುತ್ತೇದಾರಿ ಬಂಡವಾಳಶಾಹಿಗಳಿಗೆ ಕುಮ್ಮಕ್ಕು ಕೊಟ್ಟಿತು. ವಿದೇಶೀ ಬಂಡಾಳಕ್ಕೆ ಬಾಗಿಲು ತೆರೆಯಿತು. ಭೂ ಸುಧಾರಣೆಯನ್ನು ಹಿಂದಕ್ಕೆ ಉಳಿಸಿತು. ಪರಿಣಾಮವಾಗಿ, ನಿರುದ್ಯೋಗ, ಬಡತನ, ಬೆಲೆಯೇರಿಕೆ, ಅಸಮಾನತೆ, ಶೋಷಣೆ, ಸಾಲದ ಹೊರೆ, ತೆರಿಗೆ ಭಾರ, ಪೋಲೀಸ್ ದೌರ್ಜನ್ಯ, ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ಧಾಳಿ ಹೆಚ್ಚಾಗ ತೊಡಗಿದವು. ಭೂಮಾಲಿಕ, ಬಂಡವಾಳಶಾಹಿ, ವಿದೇಶಿ ಬಂಡವಾಳಶಾಹಿ ಶಕ್ತಿಗಳೊಡನೆ ರಾಜ ಬೆಳೆಯಲಾರಂಭವಾಯಿತು. ಸಾಮಾಜಿಕ ಅಶಾಂತಿ, ಭ್ರಷ್ಟಾಚಾರ, ಉಲ್ಬಣಗೊಂಡಿತು. ಕಾಂಗ್ರೆಸ್ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳತೊಡಗಿತು. ಇಂತಹ ಪ್ರಕ್ಷುಬ್ಧ ಸಂದರ್ಭಕ್ಕೆ ಹೊಂಚು ಹಾಕಿಕೊಂಡು ಕಾಯುತ್ತಿದ್ದ ಪ್ರತಿಗಾಮಿ ಶಕ್ತಿಗಳು, ಕೋಮುವಾದಿ ಶಕ್ತಿಗಳು ಕಾಂಗ್ರೆಸ್ ಸ್ಥಾನ ಆಕ್ರಮಿಸಲು ಪ್ರಯತ್ನಿಸಲಾರಂಭಿಸಿದವು. ಕೆಲವು ವರ್ಷಗಳಲ್ಲಿ ಮಂದಿರ ಮಸೀದಿ ವಿವಾದದಲ್ಲಿ ಜನರ ಭಾವನೆಗಳನ್ನು ಕೆರಳಿಸಿ, ರಾಜಕೀಯ ಲಾಭಗಿಟ್ಟಿಸಿಕೊಂಡು ಇಡೀ ದೇಶದ ಮೂಲಭೂತ ವೌಲ್ಯಗಳಿಗೇ ಸವಾಲು ಒಡ್ಡಲಾರಂಭಿಸಿದವು. ಹಾಗೆಯೇ ಹಲವು ದಶಕಗಳ ಹಿಂದೆ ಭಾರತವನ್ನು ಬಿಟ್ಟು ಹೋಗಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿ ತಮ್ಮ ಇತರ ಹಿರಿಯ ಪಾಲುದಾರರಾದ ಅಮೇರಿಕ, ಐರೋಪ್ಯ, ಜಪಾನ್, ಸಾಮ್ರಾಜ್ಯಶಾಹಿಗಳೊಂದಿಗೆ ಐಎಂಎಫ್ – ಜಾಗತಿಕ ಬ್ಯಾಂಕ್ ಮತ್ತು ಡಂಕೆಲ್ ಪ್ರಸ್ತಾವನೆಗಳ ಮೂಲಕ ನಮ್ಮ ದೇಶದ ಆರ್ಥಿಕ ಸ್ವಾವಲಂಬನೆಗೆ ಮತ್ತು ರಾಜಕೀಯ ಸಾರ್ವಭೌಮತೆಗೆ ಸವಾಲು ಒಡ್ಡಲಾರಂಭಿಸಿದವು.

ಕಾಂಗ್ರೆಸ್ ಇತ್ತೀಚಿಗಿನ ವರ್ಷಗಳಲ್ಲಿ ಹಿಂದು, ಮುಸ್ಲಿಂ, ಸಿಖ್ ಕೋಮುವಾದಿಗಳೊಡನೆ ಮೂಲಭೂತವಾದಿಗಳೊಡನೆ ಒಂದಲ್ಲ ಒಂದು ವಿಷಯದಲ್ಲಿ ರಾಜಿ ಮಾಡಿಕೊಳ್ಳುತ್ತಿದೆ. ಪರಿಣಾಮವಾಗಿ ಹಿಂದು ಕೋಮುವಾದಿಗಳು ಬಾಬ್ರಿಮಸೀದಿ

ಕೆಡವಿದರೂ ನಿಸ್ಸಹಾಯಕವಾಗಿ ಉಳಿದಿದೆ. ಮುಸ್ಲಿಂ ಮೂಲಭೂತವಾದಿಗಳು ತಮ್ಮ ಮಹಿಳೆಯರಿಗೆ ನಾಗರಿಕ ಸಮಾನ ಹಕ್ಕುಗಳನ್ನು ನಿರಾಕರಿಸುತ್ತಿರುವಾಗ ನಿರುತ್ತರವಾಗಿದೆ. ಸಾಮ್ರಾಜ್ಯಶಾಹಿಗಳ ಎಲ್ಲಾ ಶರತ್ತುಗಳಿಗೆ ಶರಣಾಗತವಾಗಿದೆ. ಕಾಂಗ್ರೆಸ್ ಪರ್ಯಾಯ ಧೋರಣೆಗಳಿಲ್ಲದೆ, ಹಳೆಯ ಜನಸಂಘದ ಮತ್ತು ಹೊಸ ಭಾರತೀಯ ಜನತಾ ಪಕ್ಷದ ಪ್ರತಿಗಾಮಿ ಧೋರಣೆಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅನುಸರಿಸುತ್ತಿದ್ದು, ಈ ದುಷ್ಟ ಶಕ್ತಿಗಳೊಂದಿಗೇ ಸ್ಪರ್ಧಿಸುತ್ತಿದೆ.

'ಹಿಂದುತ್ವ'ದ ಆಧಾರದಲ್ಲಿ ಭಾರತದ ಸಮಾಜದ ಪುನರ್ ರಚನೆಯಲ್ಲಿ ತೊಡಗಿರುವ ಬಿಜೆಪಿ ಮತ್ತು ಸಂಘ ಪರಿವಾರದ ಸವಾಲನ್ನು ಕಾಂಗ್ರೆಸ್ ಎದುರಿಸಲು ಅಶಕ್ತವಾಗಿದೆ. ಎರಡು ಕೋಮುಗಳಿಗೆ ಶರಣಾಗುವ ಅಪಾಯ ಬರಲಿದ್ದು, ಭಾರತ ಪುನಃ ನುಚ್ಚುನೂರಾಗಿ ಬ್ರಿಟಿಷ್ ಆಳ್ವಿಕೆಯ ಮೊದಲಿನ ಸ್ಥಿತಿ ಮರುಕಳಿಸೀತು ಎಂದು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನೆಹರು ಎಚ್ಚರಿಸಿದ್ದರು. ಆದರೆ, ಕೋಮು ಆಧಾರದಲ್ಲಿ ಪಾಕಿಸ್ತಾನ ಅಸ್ಥಿತ್ವಕ್ಕೆ ಬಂದಿದ್ದರೂ ಭಾರತದಲ್ಲಿ ಜಾತ್ಯತೀತತೆಯನ್ನು ಪ್ರಾರಂಭದಲ್ಲಿ ಎತ್ತಿಹಿಡಿಯಲಾಗಿತ್ತು. ಇಲ್ಲಿಯೂ ಧರ್ಮದ ಆಧಾರದಲ್ಲಿ ಸಮಾಜದ ಪುನರ್ ರಚನೆಯವಾದದಿಂದ ದೇಶದ ಐಕ್ಯತೆಗೆ ಮತ್ತು ಕೋಮು ಸೌಹಾರ್ದತೆಗೆ ತೀವ್ರ ಅಪಾಯ ಬಂದೊದಗಿದೆ. ಆರ್ಥಿಕ ಅಭಿವೃದ್ಧಿಯೂ ಸ್ಥಗಿತಗೊಂಡಿದ್ದು ತೀವ್ರ ದುಸ್ಥಿತಿಯನ್ನು ಎದುರಿಸುತ್ತಿದೆ.

ಕಾರ್ಮಿಕ ವರ್ಗದ ಕರ್ತವ್ಯ

ಆದುದರಿಂದ, ಅಪೂರ್ಣವಾದ ಭಾರತದ ಸ್ವಾತಂತ್ರ್ಯ ಹೋರಾಟದ ಮೂರನೇ ಮಜಲಿನ ಹೊಣೆಗಾರಿಕೆಯನ್ನು ಬೆಳೆದು ಬರುತ್ತಿರುವ ಭಾರತದ ಆಧುನಿಕ ಕಾರ್ಮಿಕ ವರ್ಗವೇ ಅನಿವಾರ್ಯವಾಗಿ ವಹಿಸಿಕೊಳ್ಳಬೇಕಾಗಿದೆ. ಇದುವರೆಗೆ ಬಂಡವಾಳಶಾಹಿಗಳು ರಾಜಿ ಮಾಡಿಕೊಂಡು ಬಂದಿರುವ ಪಾಳೆಯಗಾರಿ, ಭೂಮಾಲಕ ಪದ್ಧತಿಯ ವಿರುದ್ಧ, ಅವುಗಳ ವಿಚಾರಧಾರೆಯ ವಿರುದ್ಧ ಜಾತಿ ಪದ್ಧತಿ, ವರ್ಣಾಶ್ರಮ ಪದ್ಧತಿ ಹಾಗೂ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ. ದೇಶದ ಗಡಿಯಾಚೆ ನಮ್ಮ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪುನರ್ ಆಕ್ರಮಣ ಮಾಡುತ್ತಿರುವ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡ ಬೇಕಾಗಿದೆ. ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗ ಮತ್ತು ಅವುಗಳ ರಾಜಕೀಯ ಪಕ್ಷವಾದ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಪ್ರಜಾಪ್ರಭುತ್ವ ಆಂದೋಳನದ ಮಿತ್ರ ಪಕ್ಷಗಳು ಒಗ್ಗೂಡಿಕೊಂಡು ವಿಶಾಲ ತಳಹದಿಯಲ್ಲಿ ಜನತಾಪ್ರಭುತ್ವ ರಂಗದ ನೇತೃತ್ವದಲ್ಲಿ ಹೋರಾಟಗಳನ್ನು ಮುಂದುವರಿಸಿಕೊಂಡು ನಿರ್ಣಾಯಕ ಘಟ್ಟಕ್ಕೆ ಮುಟ್ಟಿಸಬೇಕಾಗಿದೆ. ಹಲವು ದಶಕಗಳ ಕಾಲದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪರಂಪರಾಗತವಾಗಿ ಜನಕೋಟಿಯಲ್ಲಿ, ದುಡಿಯುವ ಜನರಲ್ಲಿ ಮೂಡಿ ಬಂದಿರುವ ಕೋಮು ಸೌಹಾರ್ದತೆ ಮತ್ತು ರಾಷ್ಟ್ರೀಯ ಏಕತೆಯನ್ನು ನಮ್ಮ ಸ್ವಾತಂತ್ರ್ಯ ಹೋರಾಟದ ಮೂರನೇ ಮಜಲಿನಲ್ಲಿ ಕಾರ್ಮಿಕ ವರ್ಗ ಕಾಪಾಡಿಕೊಂಡು ಮುಂದುವರಿಯಬೇಕಾಗಿದೆ. ಅದಕ್ಕಾಗಿ ಎಡ ಮತ್ತು ಪ್ರಜಾ ಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯತೆ ಮುಂದಿನ ದಿನಗಳಲ್ಲಿ ಅಗತ್ಯವಾಗಿದೆ.


ಗ್ರಂಥ ಆಧಾರ:

1) ಇಂ.ಎಂ.ಎಸ್. ನಂಬೂದರಿಪಾಡ್ ಅವರ 'ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ,' ಸೋಶಿಯಲ್ ಸೈಯಿನ್ಸ್ ಪ್ರೆಸ್, 1986

2) ಕೋಮುವಾದದ ಕುರಿತು ಜವಾಹರ ಲಾಲ್ ನೆಹರು–ಸಂಪಾದಕ ಎನ್. ಎಲ್. ಗುಪ್ತ. ಪ್ರಕಾಶನ:ಸಂಪ್ರದಾಯ ವಿರೋಧಿ ಸಮಿತಿ, ನವದೆಹಲಿ, 1964

3) ಕೋಮುವಾದ, ಧರ್ಮ ಮತ್ತು ಮಾರ್ಕ್ಸ್‌ವಾದ: ಸೀತಾರಾಂ ಯೆಚೂರಿ. ಮಾರ್ಕ್ಸಿಸ್ಟ್ ತ್ರೈಮಾಸಿಕ, ನವದೆಹಲಿ ಅಕ್ಟೋಬರ್–ಮಾರ್ಚ್, 1993.

ಕೋಮುಸೌಹಾರ್ದತೆಗಾಗಿ ಮಾನವ ಸರಪಳಿ



ಹಲವು ದಶಕಗಳ ಕಾಲದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪರಂಪರಾಗತವಾಗಿ ಜನಕೋಟಿಯಲ್ಲಿ ದುಡಿಯುವ ಜನರಲ್ಲಿ ಮೂಡಿ ಬಂದಿರುವ ಕೋಮು ಸೌಹಾರ್ದತೆ ಮತ್ತು ರಾಷ್ಟ್ರೀಯ ಏಕತೆಯನ್ನು ನಮ್ಮ ಸ್ವಾತಂತ್ರ್ಯ ಹೋರಾಟದ ಮೂರನೇ ಮಜಲಿನಲ್ಲಿ ಕಾರ್ಮಿಕ ವರ್ಗ ಕಾಪಾಡಿಕೊಂಡು ಮುಂದುವರಿಯಬೇಕಾಗಿದೆ

ಕರ್ನಾಟಕದಲ್ಲಿ



ಸ್ವಾತಂತ್ರ್ಯ ಚಳುವಳಿಯ ಕೆಲವು ನೆನಪುಗಳು

ಸ್ವಾತಂತ್ರ್ಯ ಚಳುವಳಿಯ ದಿನಗಳಲ್ಲಿ ರೂಪುಗೊಂಡ ಶಿಸ್ತು, ಸ್ಫೂರ್ತಿ ಹಾಗೆಯೇ ಮುಂದುವರಿಯುತ್ತಿದ್ದರೆ, ಕಾಂಗ್ರೆಸ್ ಮುಖಂಡರು ಒಡಕು ನೀತಿಯನ್ನು ಅನುಸರಿಸದಿದ್ದರೆ ಇಂದಿನ ಕರ್ನಾಟಕದ ರಾಜಕೀಯ ರೂಪ ರೇಷೆಯೇ ಬದಲಾಗಿರುತ್ತಿತ್ತು ಎನ್ನುತ್ತಾರೆ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ನೆನಪಿಸಿಕೊಳ್ಳುತ್ತಾ ಕಾಂ.ಎನ್.ಕೆ. ಯವರು. ಕೆಲವೇ ಕಮ್ಯುನಿಸ್ಟ್ ಮುಖಂಡರಿದ್ದರೂ ಕೂಡಾ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ ಯಲ್ಲಿ ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳೂ ಸಕ್ರಿಯವಾಗಿ, ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡಿದರು. ಅವರಲ್ಲಿ ರಾಜಕೀಯ ಜಾಗೃತಿ ಉಂಟುಮಾಡಿದರು. ಸ್ವಾತಂತ್ರ್ಯ ನಂತರವೂ ಹೋರಾಟ ಮುಂದುವರೆಸುವಲ್ಲಿ ಪ್ರೇರಣೆ ನೀಡಿದರು. ಈಗ ಸ್ವಾತಂತ್ರ್ಯ ರಕ್ಷಣೆಯ ಹೋರಾಟದಲ್ಲಿ ಆ ಪರಂಪರೆ ಮುಂದುವರೆದಿದೆ.

ಎನ್.ಕೆ ಉಪಾಧ್ಯಾಯ

1920ರಿಂದಲೂ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ನಡೆಸಿದ ಧೀಮಂತ ಹೋರಾಟದಲ್ಲಿ ಏಕೀಕರಣಕ್ಕೆ ಮುಂಚಿನ ವಿಭಜಿತ ಕರ್ನಾಟಕದ ಜನತೆಯ, ಸಂಸ್ಥಾನಗಳ ಪ್ರಜೆಗಳ, ರೈತರ, ಕಾರ್ಮಿಕರ,ವಿದ್ಯಾರ್ಥಿಗಳ ಪಾತ್ರ ಚರಿತ್ರಾರ್ಹವಾಗಿತ್ತು. ಕರ್ನಾಟಕದ ಜನತೆ ಕೂಡಾ ಸ್ವಾತಂತ್ರಕಾಗಿ ದುಬಾರಿ ಬೆಲೆತೆತ್ತಿದ್ದಾರೆ. ಕನ್ನಡಿಗರ–ಕಾರ್ಮಿಕರ ಪಾತ್ರ ಹೆಮ್ಮೆ ಪಡುವಂಥಾದ್ದಾಗಿತ್ತು. ಮಹಾತ್ಮಾಗಾಂಧಿಯವರ ಅಹಿಂಸಾ ತತ್ವವನ್ನು ನೆನಸುತ್ತಾ ಬ್ರಿಟಿಷ್ ಗುಲಾಮಗಿರಿಯನ್ನು ನಾಶಗೊಳಿಸುವ ಸಲುವಾಗಿ ಕರ್ನಾಟಕದ ರೈತರೂ, ಕಾರ್ಮಿಕರೂ ಹಿಂಸಾತ್ಮಕ ದಾರಿಯನ್ನೂ ಹಿಡಿಯಬೇಕಾಯಿತು. ಮುಷ್ಕರ,ಹರತಾಳಗಳಿಂದಲೇ ಸಂತೃಪ್ತರಾಗದೆ ರೈಲ್ವೆ ಫಿಷ್‌ಪ್ಲೇಟ್ ತೆಗೆಯುವ, ತಂತಿ ಕತ್ತರಿಸುವ, ರೈಲ್ವೆ ಸ್ಟೇಷನ್‌ಗಳಿಗೆ ದಾಳಿ ಮಾಡುವ, ಕಂದಾಯ ಕಛೇರಿಗಳನ್ನು ಆಕ್ರಮಿಸುವ, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವ ಮಟ್ಟಕ್ಕೂ ಹೋಗಿದ್ದರೆಂಬುದನ್ನು ನೆನಪಿಸಿಕೊಂಡರೆ ಛಿದ್ರ ವಿಛಿದ್ರವಾಗಿದ್ದ ಕನ್ನಡಿಗರಲ್ಲಿ ರಾಜ ಮಹಾರಾಜರ, ಪಾಳೆಯಗಾರರ, ದೇಸಾಯಿ, ಜಹಗೀರದಾರ, ಜಮೀನ್ದಾರರ ಹಿಡಿತದಲ್ಲಿದ್ದ ಜನ ತಮ್ಮ ದೇಶಪ್ರೇಮವನ್ನು ತೋರ್ಪಡಿಸಿದ ರೀತಿ ವ್ಯಕ್ತಮಾಡಿದ ಧೈರ್ಯ ನೆನಪಿಸಿ ಕೊಂಡರೆ ಇಂದಿಗೂ ಧಮನಿಗಳಲ್ಲಿ ಬಿಸಿರಕ್ತ ಚಿಮ್ಮುತ್ತದೆ.

ಯಾವುದೇ ದೇಶದ ಸ್ವಾತಂತ್ರ್ಯ–ಸ್ವಾತಂತ್ರ್ಯ ಹೋರಾಟ ಬಹು ದುಬಾರಿ. ವಿದ್ಯಾರ್ಥಿಗಳು ಶಾಲೆ–ಕಾಲೇಜು ಬಿಟ್ಟು ಹೊರನಡೆದರು. ಕಾರ್ಮಿಕರು ಕಾರ್ಖಾನೆ ತ್ಯಜಿಸಿದರು. ರೈತ ಭೂಮಿಯ ಚಿಂತೆ ದೂರಮಾಡಿದ. ಸಾರ್ವಜನಿಕರು ದೇಶವೇ ಸಂಪತ್ತು ಎಂದು ಹೇಳಿ ಪೋಲಿಸರ–ಮಿಲಿಟರಿಯ ಲಾಠಿಯೇಟು ಗುಂಡೇಟುಗಳನ್ನೆಲ್ಲ ಎದುರಿಸಿದರು. ರಕ್ತ ಸುರಿಸಿದರು, ಸೆರೆಮನೆ ಸೇರಿದರು, ಹೆಣವಾಗಿಬಿದ್ದರು. ನೌಕರಿ ಹೋಯಿತು, ಹೊಲ ಇಲ್ಲದಂತಾಯಿತು, ಮನೆಮಠಗಳೆಲ್ಲ ಕೈದಕ್ಕದಾದವು. ಆದರೂ ಕರ್ನಾಟಕದ ಜನತೆ ಅಂಜಲಿಲ್ಲ. ಹಿಂಜರಿಯಲಿಲ್ಲ. ಅವರ ಗುರಿ ಒಂದೇ ಆಗಿತ್ತು–ಬ್ರಿಟಿಷರನ್ನು ದೇಶಬಿಟ್ಟು ತೊಲಗಿಸುವುದು. ಸ್ವಾತಂತ್ರ್ಯ ಗಳಿಸುವುದು. ದೇಶದ ಸ್ವಾತಂತ್ರ್ಯವೇ ನಮ್ಮ ಹೊಲ ಉಳಿಸೀತು, ಹೊಲ ಹಂಚಿಕೊಟ್ಟೀತು, ನಮ್ಮ ಕಾರ್ಖಾನೆ ನೌಕರಿ ರಕ್ಷಿಸೀತು, ಹೊಸ ನೌಕರಿ ಸೃಷ್ಟಿಸೀತು, ಮಕ್ಕಳ ಬೌದ್ಧಿಕ ವಿಕಾಸಕ್ಕೆ ಅವಕಾಶ ಮಾಡಿಕೊಟ್ಟೀತು, ದೇಶೀ ಕೈಗಾರಿಕೆಗಳ ಬೆಳವಣಿಗೆ ಮಾಡೀತು, ನಾಗರೀಕ ಹಕ್ಕು ದೊರಕೀತು, ಜನರ ಸುಲಿಗೆ ನಿಲ್ಲಿಸೀತು, ದೇಶದ ಅಭಿವೃದ್ಧಿಯಾದೀತು, ಕರ್ನಾಟಕವನ್ನೊಳಗೊಂಡ ಭಾರತ ಜಗತ್ತಿನ ಅಭಿವೃದ್ಧಿ ಶೀಲ ರಾಷ್ಟ್ರಗಳ ಸಾಲಿನಲ್ಲಿ ಹೆಮ್ಮರವಾಗಿ ಮೆರೆದೀತು ಎಂಬುದಾಗಿತ್ತು. ಆಗಸ್ಟ್ 15, 1947ರಂದು ಆಂಗ್ಲ ಬಾವುಟ ಇಳಿಸಿ ರಾಷ್ಟ್ರೀಯ ಧ್ವಜ ಹಾರಿಸಿದ್ದೆವು. ಆದರೆ 47 ವರ್ಷಗಳಲ್ಲಿ ನಮ್ಮೆಲ್ಲರ ಕನಸು ಪೂರ್ಣವಾಗಿ ನನಸಾಗಲಿಲ್ಲ.

ಮಾತ್ರವಲ್ಲ ಈಗಿರುವ ಕಾಂಗ್ರೆಸ್ ಸರಕಾರದ ಪ್ರಧಾನ ಮಂತ್ರಿ, ನರಸಿಂಹರಾಯರು 47 ವರ್ಷಗಳ ಮುಂಚೆ ಗಳಿಸಿದ್ದ ಸ್ವಾತಂತ್ರ್ಯಕ್ಕೇನೆ ಅಪಾಯ ತಂದೊಡ್ಡಿದ್ದಾರೆ. ಅಂದು ಬ್ರಿಟಿಷ್ ಗುಲಾಮರಾಗಿ ಅವರ ವಿರುದ್ಧ ಸಮರ ಹೂಡಲಾಯಿತು. ಇಂದು ಅಮೇರಿಕನ್ ಸಾಮ್ರಾಜ್ಯಶಾಹಿಯ ಐಎಂಎಫ್–ವಿಶ್ವಬ್ಯಾಂಕಿನ ಗುಲಾಮಗಿರಿ ಅವುಗಳ ವಿರುದ್ಧ ಸಮರ–ಎಡಪಕ್ಷಗಳು, ಸಂಘಟಿತ ಕಾರ್ಮಿಕ ವರ್ಗ,ರೈತ ವಿದ್ಯಾರ್ಥಿ, ಯುವಜನತೆ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ, ಅಮೇರಿಕನ ಸಾಮ್ರಾಜ್ಯಶಾಹಿಗೆ ಶರಣಾಗುವುದರ ವಿರುದ್ಧ ಸಮರ ಸಾರಿದ್ದಾರೆ, ಹೋರಾಟ ನಡೆಸಿದ್ದಾರೆ. ಕಾಯಿದೆ ಭಂಗ ಚಳುವಳಿ ನಡೆಸಿದ್ದಾರೆ. ಅಗತ್ಯ ಬಿದ್ದರೆ ಬ್ರಿಟಿಷರ ವಿರುದ್ಧ ಹಿಡಿದ ಹೋರಾಟದ ದಾರಿ ಹಿಡಿಯಲು ಸಿದ್ಧರಾಗುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಕನ್ನಡಿಗರು ಬ್ರಿಟಿಷರ ವಿರುದ್ಧ ನಡೆಸಿದ್ದ ಹೋರಾಟಗಳ ಕೆಲವಂಶಗಳನ್ನು ನೆನಪಿಸೋಣ. ಅವುಗಳಿಂದ ಸ್ಫೂರ್ತಿ ಪಡೆಯೋಣ.

1920 ರಿಂದ ಆರಂಭ

1942ರ ಕರ್ನಾಟಕವನ್ನು ವೀಕ್ಷಿಸಿದರೆ ಇಂದಿನ 20 ಜಿಲ್ಲೆಗಳ ಪೈಕಿ 7 ಜಿಲ್ಲೆಗಳು ಮತ್ತು ಬೆಂಗಳೂರು ಕಂಟೋನ್‌ಮೆಂಟ್, ಬ್ರಿಟಿಷರ ಆಡಳಿತದಲ್ಲಿದ್ದವು. ಧಾರವಾಡ, ಬೆಳಗಾವ, ಕಾರವಾರ, ಬಿಜಾಪುರ, ಮುಂಬಯಿ ಪ್ರಾಂತದಲ್ಲೂ, ಮಂಗಳೂರು, ಬಳ್ಳಾರಿ ಮದ್ರಾಸ್ ಪ್ರಾಂತದಲ್ಲೂ, ಗುಲ್ಬರ್ಗ, ಬೀದರ, ರಾಯಚೂರು, ಹೈದರಾಬಾದ ಸಂಸ್ಥಾನದಲ್ಲೂ ಸೇರಿಕೊಂಡಿದ್ದವು. ಕೊಡಗು ಪ್ರತ್ಯೇಕವಾಗಿಯೆ ಇತ್ತು.ಇವುಗಳಲ್ಲದೆ ಜಮಖಂಡಿ, ಮುಧೋಳ, ರಾಮದುರ್ಗ, ಸಂಡೂರು, ವಡಗಾವ (ಕುರುಂದವಾಡ), ಸವಣೂರು, ಸಾಂಗ್ಲಿ, ಮಿರಜ, ಕೋಲಾಪುರ, ಅವುಂದ ಮೊದಲಾದ ಸಂಸ್ಥಾನಗಳಿದ್ದವು. ಕೊನೆಯ 5 ಸಂಸ್ಥಾನಗಳು ಮಹಾರಾಷ್ಟ್ರದಲ್ಲಿದ್ದರೂ ಅವುಗಳ ಪ್ರದೇಶಗಳು ಮುಂಬಯಿ ಕರ್ನಾಟಕದಲ್ಲಿದ್ದವು. ಈ ಎಲ್ಲಾ ಪ್ರದೇಶಗಳಲ್ಲಿಯ ಸ್ವತಂತ್ರ ಹೋರಾಟ ಒಂದೇ ತೆರನಾಗಿರದಿದ್ದರೂ ಕೂಡ ರಾಷ್ಟ್ರೀಯತೆಯ ಭಾವನೆ ಮಾತ್ರ ದೇಶದ ಇತರ ಪ್ರದೇಶಗಳಿಗೆ ಸರಿಸಮಾನವಾಗಿತ್ತು.

1885ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸ್‌ನ ಪ್ರಥಮ ಸಮ್ಮೇಳನ ಮುಂಬಯಿಯಲ್ಲಿ ನಡೆದಾಗಿನಿಂದಲೂ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಸಂಪರ್ಕ ಉಂಟಾಗಿತ್ತು. ಬಂಗಾಳದ ವಿಭಜನೆಯಾದಾಗ "ವಂಗ ಭಂಗ"ದ ವಿರುದ್ಧ ಮುಂಬಯಿ ಕರ್ನಾಟಕದ ಹಲವೆಡೆ ಪ್ರತಿಭಟನಾ ಸಭೆಗಳು ನಡೆದವು. 1920-21ರಲ್ಲಿ ಸ್ವಾತಂತ್ರ್ಯ ಚಳುವಳಿ ವಿಶಾಲವಾಗಿ ಹಬ್ಬಿತು. ಕೋರ್ಟುಗಳಿಗೆ ಬಹಿಷ್ಕಾರ ಹಾಕಬೇಕೆಂಬ ಕರೆಗೆ ಹೆಚ್ಚಿನ ಬೆಂಬಲ ಸಿಕ್ಕಿತು. ಜೊತೆಯಲ್ಲಿಯೇ ಸಭೆ, ಮೆರವಣಿಗೆ, ವಿದೇಶಿ ವಸ್ತುಗಳ ದಹನ, ಶೇಂದಿ ಅಂಗಡಿಗಳ ಪಿಕೆಟಿಂಗ್ ನಡೆಯಿತು. ಧಾರವಾಡ ಮೊದಲಾದ ಕಡೆ ಪೋಲಿಸರ ಗೋಲಿಬಾರ್‌ನಿಂದಾಗಿ ಹಲವಾರು ಜನ ಅಸುನೀಗಿದರು. ಪ್ರಿನ್ಸ್ ಆಫ್ ವೇಲ್ಸನ ಸಂದರ್ಶನವನ್ನು ಪ್ರತಿಭಟಿಸಿದಾಗ ಗೋಲಿಬಾರಿನಿಂದ ಬೆಂಗಳೂರು ಕಂಟೋನ್ಮೆಂಟನಲ್ಲಿ ಇಬ್ಬರು ಖಿಲಾಫತ್ ಸ್ವಯಂ ಸೇವಕರು ಕೊಲ್ಲಲ್ಪಟ್ಟರು (ನವಂಬರ್ 18, 1928) ರಾಜ್ಯಾದ್ಯಂತ ಹಲವಾರು ಮುಖಂಡರ ಬಂಧನವಾಯಿತು. ಕಾರವಾರ ಜಿಲ್ಲೆಯಲ್ಲಿ ಹೆಡ್‌ಮಾಸ್ತರುಗಳನ್ನೊಳಗೊಂಡು ಹಲವಾರು ಶಿಕ್ಷಕರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟು ವಿದ್ಯಾರ್ಥಿಗಳ ಜೊತೆಯಲ್ಲಿ ಚಳುವಳಿಯಲ್ಲಿ ಧುಮುಕಿದರು. ಬಳ್ಳಾರಿಯೂ ಕಾರವಾರದ ದಾರಿ ಹಿಡಿಯಿತು. 1920-22ರ ಪ್ರಾರಂಭದ ಚಳುವಳಿಗೆ ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ಉತ್ಸಾಹಪೂರಿತ ಬೆಂಬಲ ಲಭ್ಯವಾಯಿತು.

1930 ರಿಂದ ಕರ್ನಾಟಕದಲ್ಲಿ ಚಳುವಳಿಗೆ ಹೊಸರೂಪ ಬಂತು. ಕಾರವಾರ ಜಿಲ್ಲೆಯ ಅಂಕೋಲದಲ್ಲಿ ಏಪ್ರಿಲ್ 4, 1930ರಂದು 30,000 ಜನ ಉಪ್ಪು ಸತ್ಯಾಗ್ರಹ ಪ್ರಾರಂಭಿಸಿದರು. ಅದು 45 ದಿವಸ ನಡೆಯಿತು. ಅದು ಮಂಗಳೂರು, ಧಾರವಾಡ, ಬಿಜಾಪುರ, ಕಾರವಾರ ಜಿಲ್ಲೆಗಳಿಗೆ ಹಬ್ಬಿತು. ಸತ್ಯಾಗ್ರಹಿಗಳು ಗೋವದಿಂದ ಉಪ್ಪು ತರಿಸಿ ಮಾರಾಟಮಾಡಿ ಎಕ್ಸೈಸ್ ಕಾನೂನನ್ನು ಮುರಿದರು

ಚಳುವಳಿಗೆ ಹೊಸ ರೂಪ

1923ರಿಂದ 1930ರವರಗೆ ದೇಶದ ಇತರ ಭಾಗಗಳಲ್ಲಿ ಮುಖ್ಯವಾಗಿ ಪಂಜಾಬ್, ಉತ್ತರ ಪ್ರದೇಶ, ಬಂಗಾಲ, ಮದ್ರಾಸ್, ಮುಂಬೈ ಮೊದಲಾದೆಡೆ ಕಮ್ಯುನಿಸ್ಟ್ ಪಕ್ಷದ, ಇತರ ಉಗ್ರವಾದಿ ಗುಂಪುಗಳ ಕ್ರಾಂತಿಕಾರಿ ಚಟುವಟಿಕೆಗಳು ಮುಂದುವರಿದವು. 1930 ರಿಂದ ಕರ್ನಾಟಕದಲ್ಲಿ ಚಳುವಳಿಗೆ ಹೊಸರೂಪ ಬಂತು. ಕಾರವಾರ ಜಿಲ್ಲೆಯ ಅಂಕೋಲದಲ್ಲಿ ಏಪ್ರಿಲ್ 4, 1930ರಂದು 30,000 ಜನ ಉಪ್ಪು ಸತ್ಯಾಗ್ರಹ ಪ್ರಾರಂಭಿಸಿದರು. ಅದು 45 ದಿವಸ ನಡೆಯಿತು. ಅದು ಮಂಗಳೂರು, ಧಾರವಾಡ, ಬಿಜಾಪುರ, ಕಾರವಾರ ಜಿಲ್ಲೆಗಳಿಗೆ ಹಬ್ಬಿತು. ಸತ್ಯಾಗ್ರಹಿಗಳು ಗೋವದಿಂದ ಉಪ್ಪು ತರಿಸಿ ಮಾರಾಟಮಾಡಿ ಎಕ್ಸೈಸ್ ಕಾನೂನನ್ನು ಮುರಿದರು, ಅನಂತರ ಫಾರೆಸ್ಟ್ ಸತ್ಯಾಗ್ರಹ, ಕರ ನಿರಾಕರಣೆ ಚಳುವಳಿ, ದಾರುಬಂದಿ ಚಳುವಳಿ ನಡೆದು ಸಾವಿರಾರು ಜನ ಸೆರೆಮನೆ ಸೇರಿದರು. ಸಿರ್ಸಿ, ಸಿದ್ದಾಪುರ, ಅಂಕೋಲದಲ್ಲಿ 1934ರಲ್ಲಿ 800ಕ್ಕಿಂತಲೂ ಹೆಚ್ಚು ಕುಟುಂಬಗಳ ಭೂಮಿ, ಮನೆ ಮಠಗಳನ್ನೆಲ್ಲ ಸರ್ಕಾರ ವಶಪಡಿಸಿಕೊಂಡು ಅವರನ್ನೆಲ್ಲ ನಿರ್ಗತಿಕರನ್ನಾಗಿ ಮಾಡಿತು. 1930-34 ರವರೆಗಿನ ಚಳುವಳಿ ಕಾರವಾರ ಜಿಲ್ಲೆಯಲ್ಲಿ ಅತಿಹೆಚ್ಚು ಪ್ರಭಾವಿತವಾಗಿತ್ತು. ಮುಂದೆ 1939-40ರಲ್ಲಿ ಪ್ರಾರಂಭವಾದ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದ ರೈತ ಚಳುವಳಿಗೆ ನಾಂದಿಹಾಕಿತು.

1920-1934 ರವರೆಗೆ ನಡೆದ ಚಳುವಳಿಗೆ ಪ್ರೋತ್ಸಾಹ ಧೈರ್ಯ ತುಂಬಿದ ಪತ್ರಿಕೆಗಳೆಂದರೆ ಬಾಲಗಂಗಾಧರ ತಿಲಕ್ ಅವರ ಮರಾಠಿ ದಿನ ಪತ್ರಿಕೆ "ಕೇಸರಿ" ಮತ್ತು "ಮರಾಠ', ಹಾಗೆಯೇ ಕನ್ನಡ ಪತ್ರಿಕೆಗಳಾದ ಮಂಗಳೂರಿನ "ಸ್ವದೇಶಾಭಿಮಾನಿ" (1907) ಅಗಡಿಯ "ಸುಭೋಧ ಚಂದ್ರಿ" (1907) ಧಾರವಾಡದ "ಕರ್ನಾಟಕ ವೃತ್ತಾ" (1895) ರಾಜ ಹಂಸ (1881), ಹುಬ್ಬಳ್ಳಿಯ "ಕನ್ನಡ ಕೇಸರಿ" (1906)ಮೈಸೂರಿನ "ವೃತ್ತಾಂತ ಚಿಂತಾಮಣಿ''(1885). ಅನಂತರ ಹುಬ್ಬಳ್ಳಿಯ "ಸಂಯಕ್ತ ಕರ್ನಾಟಕ".

ಮಹಿಳಾ ಕಲ್ಯಾಣ ಕಾರ್ಯಕ್ರಮ

ಕರ್ನಾಟಕದ ಸಾಧನೆ

- ಸ್ತ್ರೀಯರಿಗೆ–ಸಮಾನ ಹಕ್ಕು ಒದಗಿಸುವಲ್ಲಿ ಕರ್ನಾಟಕ ದೇಶದಲ್ಲಿ ಮುಂದಿದೆ.
- ರಾಜ್ಯದಲ್ಲಿ ಈಗಾಗಲೇ ಗ್ರಾಮ ಪಂಚಾಯಿತಿಗಳಲ್ಲಿ ಸ್ತ್ರೀಯರು ಶೇ. 43.6 ರಷ್ಟು ಸ್ಥಾನಗಳನ್ನು ಗೆದ್ದಿರುವರು. ಅಲ್ಲದೆ ಎಲ್ಲ ಕ್ಷೇತ್ರದಲ್ಲೂ ಸ್ತ್ರೀಯರಿಗೆ ಹೆಚ್ಚಿನ ಸ್ಥಾನ ಆಧ್ಯತೆ ಕೊಡಲಾಗುತ್ತಿದೆ.
- ಅನಧಿಕೃತ ಬೇಸಾಯವನ್ನು ಖಾಯಂಗೊಳಿಸುವಲ್ಲಿ ಮಹಿಳಾ ಬೇಸಾಯಗಾರರಿಗೆ ಆದ್ಯತೆ ಹಾಗೂ ಹೆಚ್ಚುವರಿ ಭೂಮಿ ವಿತರಣೆಯಲ್ಲಿಯೂ ಅವರಿಗೆ ಮೀಸಲಾತಿ.
- ಕಡಿಮೆ ಹಾಗೂ ಮಧ್ಯಮ ಆದಾಯದ ವರ್ಗದವರಿಗೆ ಕರ್ನಾಟಕ ಗೃಹ ಮಂಡಳಿಯು ನಿರ್ಮಿಸುವ ಮನೆಗಳಲ್ಲಿ
- ಮಹಿಳಾ ಅರ್ಜಿದಾರರಿಗೆ ಶೇ. 30 ಮೀಸಲಾತಿ ಹಾಗೂ ಮಹಾನಗರ ಪಾಲಿಕೆ ಮತ್ತು ನಗರ ಸಭೆಗಳ ಶಾಪಿಂಗ್ ಕಾಂಪ್ಲೆಕ್ಸ್‌ಗಳಲ್ಲಿ ಮಹಿಳೆಯರಿಗೆ ಶೇ. 30 ಅಂಗಡಿಗಳ ಮೀಸಲಾತಿ.
- ಸ್ಥಳೀಯ ಸಂಘ: ಸಮಿತಿಗಳ ಸದಸ್ಯತ್ವದಲ್ಲಿ ಮಹಿಳೆಯರಿಗೆ ಶೇ. 30 ಮೀಸಲಾತಿ.
- ಪೈನು ಸಹಕಾರಿ ಸಂಘ ಹಾಗೂ ಕರ್ನಾಟಕ ಹಾಲು ಮಹಾಮಂಡಳಿಯಲ್ಲಿ ಮಹಿಳೆಯರಿಗೆ ಮೂರನೆಯ ಒಂದು ಪಾಲು ಪ್ರಾತಿನಿಧ್ಯ.
- ಸಾಮಾಜಿಕ ಅರಣ್ಯ ಕಾರ್ಯಕ್ರಮದಡಿಯಲ್ಲಿ ಸಸಿಗಳ ತೋಟ ಮತ್ತು ಸಸಿ ಉತ್ಪಾದನೆಯಲ್ಲಿ ಮಹಿಳೆಯರಿಗೆ ಶೇ. 50 ಹಂಚಿಕೆ.
- ಸಹಕಾರಿ ಸಂಘ, ಭೂ ಅಭಿವೃದ್ಧಿ ಬ್ಯಾಂಕ್‌ಗಳ ಆಡಳಿತ ಸಮಿತಿಯಲ್ಲಿ ಮೂರನೆಯ ಒಂದು ಪಾಲು ಪ್ರಾತಿನಿಧ್ಯ. ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನ ಆಡಳಿತದಲ್ಲಿ ಶೇ. 50 ಪ್ರಾತಿನಿಧ್ಯ.
- ಶಿಕ್ಷಕರ ಹುದ್ದೆಯಲ್ಲಿ ಮಹಿಳೆಯರಿಗೆ ಶೇ. 50 ರಷ್ಟು ಮೀಸಲಾತಿ.
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ನೀಡುವ ಸಾಲದಲ್ಲಿ ಮಹಿಳೆಯರಿಗೆ ಶೇ. 25 ಮೀಸಲು
- ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ನೀಡುವ ಸಹಾಯದಲ್ಲಿ ಮೂರನೆಯ ಒಂದು ಪಾಲು ಮಹಿಳೆಯರಿಗೆ.
- ಮಹಿಳೆಯರಿಗೆ ಆಸ್ತಿಯ ಹಂಚಿಕೆಯಲ್ಲಿ ಸಮಾನ ಹಕ್ಕು ನೀಡುವ ಮಸೂದೆಗೆ ರಾಷ್ಟ್ರಪತಿಯವರ ಅನುಮೋದನೆಯನ್ನು ನಿರೀಕ್ಷಿಸಲಾಗುತ್ತಿದೆ.
- ರಾಜ್ಯಾದ್ಯಂತ ಸದ್ಯವಲ್ಲೇ ಇನ್ನೂ 22 ಸಂಪೂರ್ಣ ಮಹಿಳಾ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗುವುದು.

ಇವೆಲ್ಲವುಗಳಿಂದಾಗಿ ರಾಜ್ಯದ ಮಹಿಳೆಯರು ಕರ್ನಾಟಕವು ಇಂದು ಕಾಣುತ್ತಿರುವ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ಪುರುಷರೊಡನೆ ಸರಿ ಸಮಾನವಾಗಿ ಪಾಲ್ಗೊಳ್ಳಲು ಸದವಕಾಶ.

ಕಾರವಾರ ಜಿಲ್ಲೆಯಲ್ಲಿ ಉಪ್ಪು ಸತ್ಯಾಗ್ರಹ, ಫಾರೆಸ್ಟ್ ಸತ್ಯಾಗ್ರಹ, ಶೇಂದಿ ಅಂಗಡಿ ಪಿಕೆಟಿಂಗ್, ಶಿಕ್ಷಕರ ಸಾಮೂಹಿಕ ರಾಜಿನಾಮೆ, ವಿದ್ಯಾರ್ಥಿಗಳ ಹರತಾಳದ ರೂಪ ತಾಳಿದರೆ, ಬೆಳಗಾವ, ಧಾರವಾಡ, ಬಿಜಾಪುರಗಳಲ್ಲಿ ತೀವ್ರ ಹಿಂಸಾತ್ಮಕ, ಗೆರಿಲ್ಲಾ ರೀತಿಯ ಹೋರಾಟ ನಡೆಯಿತು 15ರಿಂದ 25ರ ಹರೆಯದ ಯುವಕರು, ಹಳ್ಳಿ ರೈತರ ತಂಡ ಶಿಸ್ತು ಬದ್ಧವಾಗಿ ಟೆಲಿಗ್ರಾಂ ತಂತಿ ಕತ್ತರಿಸುವ, ರೈಲ್ವೆ ಹಳಿಕೀಳುವ, ಸ್ಟೇಶನಗಳನ್ನು ಆಕ್ರಮಿಸುವ ಕೆಲಸಗಳನ್ನು ಶಿಸ್ತು ಬದ್ಧವಾಗಿ ನಡೆಸಿರುವುದು ಗಮನಿಸತಕ್ಕದ್ದು. ಬಿಜಾಪುರ ಜಿಲ್ಲೆಯ ಮಿಂಚಿನಾಳ ರೈಲ್ವೆ ಸ್ಟೇಶನಿನ ಮೇಲೆ ನಡೆದ ಆಕ್ರಮಣ ಇಂದಿಗೂ ನನ್ನ ಮನದಲ್ಲಿ ಹಸಿಯಾಗಿಯೇ ಉಳಿದಿದೆ. ಸತ್ಯಾಗ್ರಹಿಗಳಲ್ಲಿದ್ದ ಹುಮ್ಮಸ್ಸು, ಧೈರ್ಯ,ಸಮಯ ಪ್ರಜ್ಞೆ, ಕರ್ತವ್ಯನಿಷ್ಠೆ ಹೊತ್ತ ಜವಾಬ್ದಾರಿಯನ್ನು ಸಕಾಲದಲ್ಲಿ ಮುಗಿಸಬೇಕೆಂಬ ನಿರ್ಧಾರಗಳು ಬ್ರಿಟಿಷರ ವಿರುದ್ಧ ಚಳುವಳಿಯ ಮಹತ್ವ ಗ್ರಾಮಾಂತರ ಪ್ರದೇಶದ ಯುವಕರಲ್ಲಿ ಕೂಡ ಎಷ್ಟು ಆಳವಾಗಿ ಬೇರೂರಿದೆಯೆಂದು ಕಂಡು ಬರುತ್ತದೆ. ಇಂಥ ಹೋರಾಟಗಳ ಪ್ರತಿ ಫಲವಾಗಿಯೇ ಬಿಜಾಪುರ ನಗರ ಮತ್ತು ಹಳ್ಳಿ ಪ್ರದೇಶದಲ್ಲಿ ಭೂಮಾಲಿಕರ ವಿರುದ್ಧ ಭೂಮಿಗಾಗಿ, ಭೂಮಿಯ ಹಕ್ಕಿಗಾಗಿ ಹೋರಾಟ ನಡೆಸಲು ಸಾಧ್ಯವಾಗಿದೆ.

ಮೈಸೂರು ಸಂಸ್ಥಾನದಲ್ಲಿ ಚಳುವಳಿ

ಕರ್ನಾಟಕದ ಇತರ ಭಾಗಗಳಲ್ಲಿ ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಿ ತೀವ್ರಗೊಳ್ಳುತ್ತಿರುವಾಗಲೇ ಮೈಸೂರು, ಕೊಡಗು ಜಿಲ್ಲೆಗಳಲ್ಲಿಯೂ ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಿತ್ತು. ಮುಂಬಯಿ ಕರ್ನಾಟಕದಲ್ಲಿ ಮಧ್ಯಮವರ್ಗದ ಮತ್ತು ರೈತರ ಪಾತ್ರ ಪ್ರಧಾನವಾಗಿದ್ದರೆ ಹಳೇ ಮೈಸೂರಿನಲ್ಲಿ ಮಧ್ಯಮವರ್ಗ ಮತ್ತು ರೈತರ ಜೊತೆಯಲ್ಲಿ ಕಾರ್ಮಿಕರ ವಿದ್ಯಾರ್ಥಿಗಳ ಪಾತ್ರ ಪ್ರಧಾನವಾಗಿತ್ತೆಂಬುದು ಗಮನಾರ್ಹ. ಮಂಗಳೂರು ಜಿಲ್ಲೆಯಲ್ಲಿ ಕೂಡ ವಿದ್ಯಾರ್ಥಿಗಳ, ಕಾರ್ಮಿಕರ ಪಾಲ್ಗೊಳ್ಳುವಿಕೆ ಇತ್ತು.

ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಚಳುವಳಿ ಅದರ ಜೊತೆಯಲ್ಲಿಯೇ ದೇಶಕ್ಕಾಗಿ ಸ್ವಾತಂತ್ರ್ಯ ಚಳುವಳಿಯ ಕಿಡಿ 1920-26ರಲ್ಲಿ ಪ್ರಾರಂಭವಾಗಿತ್ತು. ಮಹಾರಾಜರ ವಿರುದ್ಧ ಹೋರಾಟ ಒಂದಡೆಯಾದರೆ ಬ್ರಿಟಿಷರ ವಿರುದ್ಧ ಹೋರಾಟ ಮತ್ತೊಂದೆಡೆ. ಈ ಎರಡೂ ಹೋರಾಟಗಳು ಒಟ್ಟಾಗಿಯೇ ನಡೆಸಲ್ಪಟ್ಟವು. ಜವಾಬ್ದಾರಿ ಸರಕಾರಗಳ ರಚನೆಗಾಗಿ ಎಲ್ಲ ಸಂಸ್ಥಾನಗಳಲ್ಲೂ ಚಳುವಳಿ ನಡೆಯಿತು. ಇದಕ್ಕೆಲ್ಲ ಸ್ಪೂರ್ತಿ ನೀಡಿದ್ದು ಸ್ವಾತಂತ್ರ್ಯ ಚಳುವಳಿ. ಸಂಸ್ಥಾನಗಳೆಲ್ಲ ಬ್ರಿಟಿಷ್ ಭಾರತದಲ್ಲೇ ವಿಲೀನಗೊಳ್ಳ ಬೇಕೆಂಬ ನಿರ್ಣಯ ಎಲ್ಲ ಸಂಸ್ಥಾನಗಳ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಅದನ್ನು ಕಾರ್ಯರೂಪದಲ್ಲಿ ತರುವ ಪ್ರಯತ್ನ ಮೈಸೂರು ಸಂಸ್ಥಾನದಲ್ಲಿ ನಡೆಯಿತು. ದೇಶದ ಸ್ವಾತಂತ್ರ್ಯ ಚಳುವಳಿಯ ಪ್ರಥಮ ಹೆಜ್ಜೆ ಕಾಂಗ್ರೆಸ್ ಧ್ವಜ ಹಾರಿಸುವುದಾಗಿತ್ತು. ಬ್ರಿಟಿಷರು ಅದಕ್ಕೆ ಅವಕಾಶ ಮಾಡಿಕೊಡುತ್ತಿರಲಿಲ್ಲ. ಪೋಲಿಸರ ಪ್ರತಿಬಂಧ ಮುರಿದು ಧ್ವಜಾರೋಹಣ. ಆಗ ದಬ್ಬಾಳಿಕೆ–ಸೆರೆಮನೆಗಳನ್ನು ಕಾಣಬೇಕಾಗುತ್ತಿತ್ತು. ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ, ಸ್ವಾತಂತ್ರ್ಯ ಚಳುವಳಿಗಾಗಿ ಮೈಸೂರು ರಾಜ್ಯಾದ್ಯಂತ ಧ್ವಜಾರೋಹಣ ಮಾಡುವ ಕಾರ್ಯಕ್ರಮ ನಡೆದಾಗ ಬ್ರಿಟಿಶ್ ಆಡಳಿತೆಯಲ್ಲಿ ನಡೆದಂತೆಯೇ ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಧ್ವಜಾರೋಹಣಕ್ಕೆ ಸರಕಾರ ಅಡ್ಡಿ ಉಂಟು ಮಾಡಿತು. ಜನತೆ ಅದನ್ನು ವಿರೋಧಿಸಿತು. ಹಲವಾರು ಕಡೆ ಸರಕಾರದ ಪ್ರತಿಬಂಧಕಾಜ್ಞೆ ಮುರಿಯಲಾಯಿತು. ಗೋಲಿಬಾರಾಯಿತು. ಕೆಲವು ಕಡೆ ನಿರಪರಾಧಿಗಳು ಹುತಾತ್ಮರಾದರು. 1931 ಜೂನ್ 2ನೇ ತಾರೀಕು ಬೆಂಗಳೂರು ರೈಲ್ವೆ ಸ್ಟೇಶನಿನ ಮುಂದುಗಡೆ ಕೆಂಪಾಂಬುದಿ ಕೆರೆಯ ಅಂಗಳದಲ್ಲಿ 60 ಅಡಿ ಎತ್ತರದ ಧ್ವಜಸ್ತಂಭವನ್ನು ಕಾರ್ಮಿಕರ ಸಹಕಾರದಿಂದ ಸ್ಥಾಪಿಸಿ ಧ್ವಜಾರೋಹಣ ಮಾಡಿದಾಗ ಧ್ವಜ ಸ್ತಂಭದಿಂದ ರಾಷ್ಟ್ರಧ್ವಜವನ್ನು ಕೆಳಗಿಳಿಸಿ ಪೋಲಿಸರು ಅಪಮಾನ ಮಾಡಿದರು. ಜನ ಈ ಅಪಮಾನ ಎದುರಿಸಲು ಸಿದ್ದರಿರಲಿಲ್ಲ. ಪೋಲಿಸರು ಧ್ವಜವನ್ನು ವಾಪಸ್ ಕೊಡುವ ತನಕ ಸತ್ಯಾಗ್ರಹ ಮುಂದುವರಿಯಿತು. ಮದ್ದೂರಿನ ಬಳಿ ಶಿವಪುರದಲ್ಲಿ 1938 ಎಪ್ರಿಲ್ 26 ರಂದು ಧ್ವಜ ಹಾರಿಸಿದಾಗಲೂ ಪೋಲಿಸರು ಧ್ವಜ ಹಾರಿಸಿದವರನ್ನು ಸರದಿ ಪ್ರಕಾರ ಬಂಧಿಸಿದರು. ನಾಲ್ಕು ದಿವಸ ಇದೇ ರೀತಿ ಬಂಧನ ನಡೆಸಿ ಬೇಸತ್ತ ಪೋಲಿಸರು ಮರು ದಿವಸದಿಂದ ಸತ್ಯಾಗ್ರಹಿಗಳನ್ನು ಬಂಧಿಸುವುದನ್ನೇ ಬಿಟ್ಟುಕೊಟ್ಟರು.

ವಿದುರಾಶ್ವತ್ಥದ ಹತ್ಯಾಕಾಂಡ ಇಡಿ ದೇಶದ ಗಮನವನ್ನು ಸೆಳೆಯಿತು. 1938 ಎಪ್ರಿಲ್ 25 ರಂದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಐತಿಹಾಸಿಕ ಮತ್ತು ಪುಣ್ಯಕ್ಷೇತ್ರ ವಿದುರಾಶ್ವತ್ಥದಲ್ಲಿ ಹತ್ಯಾಕಾಂಡ ನಡೆಯಿತು. ಅಂದು ಮುಂಜಾನೆ ಕಾಂಗ್ರೆಸ್ ಧ್ವಜ ಹಾರಿಸಲಾಯಿತು. ಪೋಲಿಸರಿಗೆ ಅದು ಸಹನೆಯಾಗಲಿಲ್ಲ. ಗೋಲಿಬಾರ್ ಆಯಿತು. 49 ಜನ ಗುಂಡಿಗೆ ಬಲಿಯಾಗಿ ಆಸುನೀಗಿದರು. ಇವರ ಪೈಕಿ ತುಂಬು ಗರ್ಭಿಣಿ ಗೌರಮ್ಮ ಎಂಬಾಕೆ ಒಬ್ಬಳು. ಈ ಘಟನೆ ಕರ್ನಾಟಕದ ಜಲಿಯಾನ್ ವಾಲಾಬಾಗ್ ಎಂದು ಹೆಸರು ಪಡೆಯಿತು.

ಕಮ್ಯುನಿಸ್ಟರ ಪಾತ್ರ

ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಮಹಾತ್ಮ ಗಾಂಧಿ ಯವರು ಮತ್ತು ಕಾಂಗ್ರೆಸ್ಸಿನ ಧೋರಣೆಗಳಲ್ಲಿ, ಹೋರಾಟದ ತಂತ್ರಗಳಲ್ಲಿ, ಪದ್ಧತಿಗಳಲ್ಲಿ ಕಮ್ಯುನಿಸ್ಟ್ ಮುಖಂಡತ್ವಕ್ಕೆ ಸಂಪೂರ್ಣ ಒಪ್ಪಿಗೆ ಇಲ್ಲದಿದ್ದರೂ ಕೂಡ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ ಪಕ್ಷದಲ್ಲಿದ್ದು

ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ, ಸ್ವಾತಂತ್ರ್ಯ ಚಳುವಳಿಗಾಗಿ ಮೈಸೂರು ರಾಜ್ಯಾದ್ಯಂತ ಧ್ವಜಾರೋಹಣ ಮಾಡುವ ಕಾರ್ಯಕ್ರಮ ನಡೆದಾಗ ಬ್ರಿಟಿಶ್ ಆಡಳಿತೆಯಲ್ಲಿ ನಡೆದಂತೆಯೇ ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಧ್ವಜಾರೋಹಣಕ್ಕೆ ಸರಕಾರ ಅಡ್ಡಿ ಉಂಟು ಮಾಡಿತು. 1931 ಜೂನ್ 2ನೇ ತಾರೀಕು ಬೆಂಗಳೂರು ರೈಲ್ವೆ ಸ್ಟೇಶನಿನ ಮುಂದುಗಡೆ ಕೆಂಪಾಂಬುದಿ ಕೆರೆಯ ಅಂಗಳದಲ್ಲಿ 60 ಅಡಿ ಎತ್ತರದ ಧ್ವಜಸ್ತಂಭವನ್ನು ಕಾರ್ಮಿಕರ ಸಹಕಾರದಿಂದ ಸ್ಥಾಪಿಸಿ ಧ್ವಜಾರೋಹಣ ಮಾಡಿದಾಗ ಧ್ವಜ ಸ್ತಂಭದಿಂದ ರಾಷ್ಟ್ರಧ್ವಜವನ್ನು ಕೆಳಗಿಳಿಸಿ ಪೋಲಿಸರು ಅಪಮಾನ ಮಾಡಿದರು. ಜನ ಈ ಅಪಮಾನ ಎದುರಿಸಲು ಸಿದ್ದರಿರಲಿಲ್ಲ. ಪೋಲಿಸರು ಧ್ವಜವನ್ನು ವಾಪಸ್ ಕೊಡುವ ತನಕ ಸತ್ಯಾಗ್ರಹ ಮುಂದುವರಿಯಿತು.

ರೈತರೂ-ಕಾರ್ಮಿಕರೂ ಸಾಮೂಹಿಕವಾಗಿ ಚಳುವಳಿಯಲ್ಲಿ ಭಾಗವಹಿಸಬೇಕಾದರೆ, ಅದು ಪರಿಣಾಮಕಾರಿಯಾಗಬೇಕಾದರೆ, ರೈತರ, ಭೂಮಿ-ಗೇಣಿ ಪ್ರಶ್ನೆ, ಕಾರ್ಮಿಕರ ಆರ್ಥಿಕ ಬೇಡಿಕೆಗಳ ಕುರಿತೂ ಸಮಿತಿಗಳಲ್ಲಿ ಚರ್ಚೆ ಮಾಡಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಆ ಬೇಡಿಕೆಗಳನ್ನೂ ಮಂಡಿಸಿ ಪ್ರಚಾರಗೊಳಿಸಿ, ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ರೈತರ, ಕಾರ್ಮಿಕರ ಹೋರಾಟಗಳನ್ನು ಸೇರಿಸಿಕೊಳ್ಳಬೇಕೆಂದು ಕಮ್ಯುನಿಸ್ಟ್ ಪಕ್ಷ ಒತ್ತಾಯಿಸುತ್ತಲೇ ಬಂದಿತ್ತು.

ಕಾಂಗ್ರೆಸ್ ಪಕ್ಷದ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಹಲವಾರು ಕಮಿಟಿಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಕೂಡ (ಎಐಸಿಸಿ)ಆರಿ ಸಿ ಬರುತ್ತಿತ್ತು. ಆ ಕಮಿಟಿಗಳಲ್ಲಿ ತನ್ನ ಧೋ ರಣೆಯನ್ನು ಪ್ರತಿಪಾದಿಸುತ್ತಿತ್ತು. ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ ಕೂಡ ಕಾಂಗ್ರೆಸ್ಸಿನೊಳಗೆ ಇತ್ತು. ಹಿಟ್ಲರ್ ಸೋವಿಯತ್ ಯೂನಿಯನಿನ ಮೇಲೆ ಆಕ್ರಮಣ ಮಾಡಿದಾಗ ಜಾಗತಿಕ ಪರಿಸ್ಥಿತಿಯಲ್ಲುಂಟಾದ ಬದಲಾವಣೆಗಳನ್ನು ಲಕ್ಷಿಸಿ ಭಾರತ ಕಮ್ಯುನಿಸ್ಟ್ ಪಕ್ಷ ತಮ್ಮ ನಿಲುಮೆಯಲ್ಲಿ ಬದಲಾವಣೆ ಮಾಡಿ ಸೋವಿಯತ್ ರಶ್ಯಾವನ್ನು ರಕ್ಷಿಸಲು, ಜಗತ್ತನ್ನು ನಾಝೀ ಆಕ್ರಮಣದಿಂದ ಉಳಿಸಲು ಹಿಟ್ಲರ್, ಮುಸೋಲಿನಿ, ಟೋಜೊ ಅವರನ್ನು ಸೋಲಿಸುವುದೇ ಪ್ರಧಾನ ಕರ್ತವ್ಯ, ಆ ಮೂಲಕ ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಮುಂದುವರಿಸಬೇ ಕೆಂದು ನಿರ್ಧರಿಸಿ ಕಾಂಗ್ರೆಸ್ ಜೊತೆಗಿದ್ದ ತನ್ನ ಸಂಬಂಧವನ್ನು ಕಡಿದು ಹಾಕಿತು. ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಬ್ರಿಟಿಷ್ ಆಡಳಿತೆಯ ವಿರುದ್ಧ ಹೋರಾಟ ಮುಂದುವರಿಸಿತು. ಕರ್ನಾಟಕದಲ್ಲಿ ಮುಖ್ಯವಾಗಿ ಮೈಸೂರು ಸಂಸ್ಥಾನ, ಮಂಗಳೂರು, ಕಾರವಾರ ಕೊನೆಯಲ್ಲಿ ಬಿಜಾಪುರ, ಧಾರವಾಡಗಳಲ್ಲಿ ಕಮ್ಯುನಿಸ್ಟರು ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ನೇರ ಹಾಗೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಅನಂತರ ಕರ್ನಾಟಕ ಪ್ರಾಂತದಲ್ಲಿ ಅದರ ವಿಲೀನಕ್ಕಾಗಿ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಮಂಗಳೂರು ಜಿಲ್ಲೆಯಲ್ಲಿ ಎಸ್.ಎನ್. ಹೊಳ್ಳ, ಬಿ.ವಿ. ಕಕ್ಕಿಲ್ಲಾಯ ಮೊದಲಾದವರು ನೇಕಾರರ, ಬೀಡಿ ಗೇರು, ಟೈಲ್ಸ್, ಕಾಫಿ, ಬಂದರ್. ಪ್ರೆಸ್ ಮೊದಲಾದ ಕೆಲಸಗಾರರ ಸಂಘಟನೆಗಳನ್ನು, ವಿದ್ಯಾರ್ಥಿಗಳನ್ನು ಕೆಲವು ಪ್ರದೇಶಗಳಲ್ಲಿ ರೈತರನ್ನು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿದ್ದರು. ಮಂಗಳೂರಿನ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದ ಎನ್.ಎಲ್. ಉಪಾಧ್ಯಾಯರು, ಹೈಸ್ಕೂಲಿನಲ್ಲಿ ಎನ್.ಕೆ. ಉಪಾಧ್ಯಾಯರು ವಿದ್ಯಾರ್ಥಿ ದೆಸೆಯಲ್ಲಿಯೇ ಚಳುವಳಿಗೆ ಆಕರ್ಷಿಸಲ್ಪಟ್ಟು, ಸ್ಕೂಲಿಗೆ ಬಹಿಷ್ಕಾರ ಹಾಕಿ ಜನರೊಡನೆ ಸಹಭೋಜನ ದಂತ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

ರೈತ-ಕಾರ್ಮಿಕ ಸಂಘಟನೆ

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಮುಖಂಡರ ಜೊತೆಯಲ್ಲಿಯೇ ಎನ್.ಡಿ.ಶಂಕರ, ಎಂ. ಎಸ್. ರಾಮರಾವ್, ಕೊಡಗಿನಿಂದ ಬಂದ ಸಿ.ಬಿ. ಮೊನ್ನಯ್ಯ ಮೊದಲಾದವರು ಬೆಂಗಳೂರು,ಮೈಸೂರು, ಭದ್ರಾವತಿ, ದಾವಣಗೆರೆಗಳಲ್ಲಿ ಕಾರ್ಮಿಕರನ್ನು ಸಂಘಟಿಸಿ ಜವಾಬ್ದಾರಿ ಸರಕಾರಕ್ಕಾಗಿಯೂ, ದೇ ಶದ ಸ್ವಾತಂತ್ರ್ಯಕ್ಕಾಗಿಯೂ ಕಾರ್ಮಿಕರು ಮುಷ್ಕರ ಹೂಡುವಂತೆ ಇತರ ಚಟು ವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುತ್ತಿದ್ದರು. ಬೆಂಗಳೂರಿನ ಬಿನ್ನಿ ಮಿಲ್ಲು, ಮೈಸೂರು ಮಿನರ್ವ, ಟಿ.ಆರ್. ಮಿಲ್‌ಗಳು ವಿಮಾನ ಕಾರ್ಖಾನೆ, ಗವರ್ನಮೆಂಟ್ ಇಲೆಕ್ಟ್ರಿಕ್ ಕಾರ್ಖಾನೆ, ಎಂಕೊ ಬ್ಯಾಟರೀಸ್, ಮಹಾಲಕ್ಷ್ಮಿ ಮತ್ತು ಸರ್ವೋದಯ ಮಿಲ್ಲುಗಳು, ಮೈಸೂರು ಬಿವರೀಸ್, ಗ್ಲಾಸ್ ಫ್ಯಾಕ್ಟರಿ, ಐ.ಟಿ.ಐ. ಮೊದಲಾದ ಕಾರ್ಖಾನೆಗಳ ಕಾರ್ಮಿಕರೆಲ್ಲ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದರು. ಬಹು ಸಂಖ್ಯೆಯಲ್ಲಿ ವಿದ್ಯಾಥಿಗಳೂ ಕೂಡಾ ಅಂಥ ಹೋರಾಟಗಳಲ್ಲಿ ಪಾಲುಗಾರರಾಗುತ್ತಿದ್ದರು. ಆ ಕಾರಣದಿಂದಲೇ ಹಲವಾರು ಕಾರ್ಮಿಕ ಮುಖಂಡರನ್ನೂ, ಸೂರ್ಯನಾರ್ಯಣರಾವ್, ಎಂ.ಎಸ್. ಕೃಷ್ಣನ್ ಮೊದಲಾದ ವಿದ್ಯಾರ್ಥಿ ಮುಖಂಡರನ್ನೂ ಆಗ ಕಮ್ಯುನಿಸ್ಟ್ ವಿಚಾರ ಧಾರೆಯತ್ತ ಸೆಳೆಯಲು ಸಾಧ್ಯವಾಯಿತು. ಕೋಲಾರ ತಾಲೂಕಿನ ಕೆ.ಜಿ.ಎಫ್. ಮಾತ್ರವಲ್ಲ ಹೆಚ್ಚಿನ ತಾಲೂಕುಗಳಲ್ಲಿ ಹಲವಾರು ರೀತಿಯ ಚಳುವಳಿ ನಡೆದು ಅದರಲ್ಲಿ ಕಾರ್ಮಿಕರು, ರೈತಸಮುದಾಯ ಸಕ್ರಿಯವಾಗಿ ಭಾಗವಹಿಸಿದ ಕಾರಣದಿಂದಲೇ ಬಲಿಷ್ಠವಾದ ರೈತ ಸಂಘಟನೆ ಕಟ್ಟ ಹೋರಾಟ ನಡೆಸಲು, ತಮ್ಮ ನೆಲೆಯನ್ನು ಭದ್ರವಾಗಿಸಲು ಕಮ್ಯುನಿಸ್ಟರಿಗೆ ಸಾಧ್ಯವಾಯಿತು.

ಕಮ್ಯುನಿಸ್ಟರ ಪ್ರಭಾವದಿಂದಾಗಿ ಬೆಂಗಳೂರು, ಕೋಲಾರ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೋರಾಟ ತೀವ್ರಗೊಳಿಸಲು ಸಾಧ್ಯವಾಯಿತು. ಆಗಲೇ 1943ರ ಕೊನೆಯಲ್ಲಿ ಯರವಡಾ ಜೈಲಿನಿಂದ ಬಿಡುಗಡೆಯಾದ ಎನ್.ಎಲ್. ಉಪಾಧ್ಯಾಯರನ್ನು ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಪಕ್ಷದ ಸಂಘಟಕರನ್ನಾಗಿ ಬೆಂಗಳೂರಿಗೆ ಕಳುಹಿಸಿಕೊಟ್ಟ ನಂತರ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆಯುತ್ತಿದ್ದ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಕಾರ್ಮಿಕ ಸಂಘಟನೆಗಳು ಹೆಚ್ಚು ಶಿಸ್ತುಬದ್ಧವಾಗಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತಾಗಲು ಸಾಧ್ಯವಾಯಿತು. ಜನಜಾಗೃತಿ ಸಂಘದ ಹೆಸರಿನಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆಯುತ್ತಿದ್ದ ಚಳುವಳಿಯಲ್ಲಿ ಎನ್.ಎಲ್. ಉಪಾಧ್ಯಾಯರು ಸೇರಿಕೊಂಡರು. ಕೆ.ಜಿ.ಎಫ್. ಚಿನ್ನದ ಗಣಿಯಲ್ಲಿ ಬೆಂಗಳೂರಿನ ಬಟ್ಟೆ ಗಿರಣಿಗಳಲ್ಲಿ, ಭದ್ರಾವತಿ ಉಕ್ಕು-ಕಬ್ಬಿಣ ಕಾರ್ಖಾನೆಯಲ್ಲಿ, ದಾವಣಗೆರೆ-ಹರಿಹರಗಳಲ್ಲಿ ಕಾರ್ಮಿಕರ ಮುಷ್ಕರ, ಬೆಂಗಳೂರು-ಮೈಸೂರುಗಳಲ್ಲಿ ವಿದ್ಯಾರ್ಥಿಗಳ ಹರತಾಳ ಒಂದೇ ಸಮನೆ ಮುಂದುವರಿಯಿತು. ಕಮ್ಯುನಿಸ್ಟರು ಕೆಲವೇ ಜನರಿದ್ದರೂ ಕೂಡಾ ಕಾರ್ಮಿಕ-ವಿದ್ಯಾರ್ಥಿಗಳಲ್ಲಿಯ ಅವರ ಪ್ರಭಾವ, ಚಳುವಳಿಗಳಿಗೆ ಅವರ ಮಾರ್ಗದರ್ಶನ ಸರಕಾರದ ಕಣ್ಣು ಕೆಂಪಾಗುವಂತೆ ಮಾಡಿ ಎನ್.ಡಿ. ಶಂಕರ ಅವರನ್ನು ಬಂಧಿಸಿ, ಸಿ.ಬಿ.ಮೊನ್ನಯ್ಯ, ಎನ್.ಎಲ್. ಉಪಾಧ್ಯಾಯರನ್ನು ಮೈಸೂರು ಸಂಸ್ಥಾನದಿಂದ ಗಡಿಪಾರು ಮಾಡಲಾಯಿತು.

1939ರಿಂದಲೇ ಕಾರವಾರ ಜಿಲ್ಲೆಯಲ್ಲಿ ಎನ್.ಜಿ.ಮಾಳಸೇಕರ, ಗಣುಮಹಾಬಲ

ನಾಯಕ, ಗುಬ್ಬಿ ನಾಯಕ, ಕೈತಾನ, ಕಲಕುಟಕರ ಮೊದಲಾದವರು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿಯೇ ಬಲಿಷ್ಠವಾದ ಗೇಣಿದಾರರ ಸಂಘ ಕಟ್ಟಿ ಹೋರಾಟ ನಡೆಸುತ್ತಿದ್ದರು. ನಾಸಿಕ ಜೈಲಿನಿಂದ ಬಿಡುಗಡೆಯಾದ ನಂತರ 1943ರಲ್ಲಿ ಸಿಪಿಐ ಕೇಂದ್ರ ಸಮಿತಿ ಎನ್.ಕೆ. ಉಪಾಧ್ಯಾಯರನ್ನು ರೈಲ್ವೇ ಕೆಲಸಗಾರರ ಸಂಘಟನೆಗೆ ಹುಬ್ಬಳ್ಳಿಗೆ ಕಳುಹಿಸಿಕೊಟ್ಟಿತು. ಕಾರ್ಮಿಕ ಸಂಘಟನೆಯ ಜೊತೆಯಲ್ಲಿ ಸರಕಾರದ ವಿರುದ್ಧ ನಡೆದ ರಾಜಕೀಯ ಚಟುವಟಿಕೆಯಿಂದಾಗಿ ಧಾರವಾಡ ಜಿಲ್ಲೆಯಿಂದ ಅವರನ್ನು ಗಡಿಪಾರು ಮಾಡಲಾಯಿತು. ಮೈಸೂರು ಸಂಸ್ಥಾನದಿಂದ ಹೊರಹಾಕಲ್ಪಟ್ಟ ಎನ್.ಎಲ್. ಉಪಾಧ್ಯಾಯರು ಹುಬ್ಬಳ್ಳಿಯಲ್ಲಿ ನೆಲೆಸಿ ಕಾರವಾರ ಮೊದಲಾದ ಪ್ರದೇಶಗಳ ಚಳುವಳಿಗೆ ಮಾರ್ಗದರ್ಶನ ನೀಡಿದರು. ಸಿ.ಬಿ. ಮೊನ್ನಯ್ಯನವರೂ ಹುಬ್ಬಳ್ಳಿಗೆ ಬಂದರು. ಸಂಘಟನೆಯ ಕೆಲಸ ಮುಂದುವರಿಸಿದರು.


ಮುಂಬಯಿ, ಮದ್ರಾಸ್ ಪ್ರಾಂತ್ಯಗಳಲ್ಲಿ, ಹೈದರಾಬಾದ್ ಸಂಸ್ಥಾನದಲ್ಲಿ, ಬೇರೆ ಬೇರೆ ರಾಜರುಗಳ ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡಿಗರು ಬ್ರಿಟಿಷರ ವಿರುದ್ಧ, ಆದರ ಜೊತೆಯಲ್ಲಿಯೇ ಸಂಸ್ಥಾನಿಕರ ವಿರುದ್ಧ ನಡೆಸಿದ ಹೋರಾಟ ದೇಶದ ಇತರೆಡೆಗಳಲ್ಲಿ ನಡೆದ ಹೋರಾಟದಂತೆಯೇ ನಡೆಯಿತು. ಪೇಟೆ ಮತ್ತು ಗ್ರಾಮಗಳಲ್ಲಿ ಪ್ರತಿಬಂಧಗಳನ್ನು ಮುರಿದು ಧ್ವಜಾರೋಹಣ, ಗ್ರಾಮಾಧಿಕಾರಿಗಳಲ್ಲಿ ಪಟೇಲರುಗಳಿಗೆ ಖಾದಿ ಟೋಪಿ ಧರಿಸಲು ಒತ್ತಾಯ, ಸಭೆ, ಮೆರವಣಿಗೆಗಳು, ಹೈಸ್ಕೂಲು ಕಾಲೇಜುಗಳಿಗೆ ಬಹಿಷ್ಕಾರ, ಕೋರ್ಟ್ ಕಚೇರಿಗಳಿಗೆ ಬಹಿಷ್ಕಾರ, ರಾಜೀನಾಮೆಗಳು, ಕಾರ್ಮಿಕರ ಮುಷ್ಕರಗಳು ಇವುಗಳಲ್ಲಿ ಒಂದು ತರ ನಡೆದರೆ, ತಂತಿ ಕತ್ತರಿಸುವ, ಬೆಂಕಿ ಹಚ್ಚುವ ರಿಕಾರ್ಡ್ ಸುಡುವ ಕೃತ್ಯಗಳೂ ನಡೆದವು.

ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ಬ್ರಿಟಿಷರ ವಿರುದ್ಧವಾಗಿಯೇ ಸೀಮಿತವಾಗಿತ್ತು. ವಿದೇಶೀ ಬಟ್ಟೆ ಬರೆಗಳಿಗೆ ಬಹಿಷ್ಕಾರ, ಚರಕದ ಮೂಲಕ ನೂಲು ತಯಾರಿ, ಶೆರೆ ಶೇಂದಿಗಳಿಗೆ ಬಹಿಷ್ಕಾರ, ಶೇಂದಿ ಗಿಡಗಳನ್ನು ಕಡಿಯುವುದು, ಉಪ್ಪು ಸತ್ಯಾಗ್ರಹ, ಆಡಳಿತೆಯ ವಿರುದ್ಧ ನಾನಾ ರೀತಿಯ ಬಹಿಷ್ಕಾರಗಳು ನಡೆಯುತ್ತಿದ್ದವು. ಅವುಗಳ ಮೂಲಕವೇ ರೈತರನ್ನೂ, ಕಾರ್ಮಿಕರನ್ನೂ ವಿದ್ಯಾರ್ಥಿಗಳನ್ನೂ ಚಳುವಳಿಗೆ ಸೇರಿಕೊಳ್ಳುವಂತೆ ಆಕರ್ಷಿಸಲಾಗುತ್ತಿತ್ತು. ರೈತರೂ–ಕಾರ್ಮಿಕರೂ ಸಾಮೂಹಿಕವಾಗಿ ಚಳುವಳಿಯಲ್ಲಿ ಭಾಗವಹಿಸಬೇಕಾದರೆ, ಅದು ಪರಿಣಾಮಕಾರಿಯಾಗಬೇಕಾದರೆ, ರೈತರ, ಭೂಮಿ–ಗೇಣಿ ಪ್ರಶ್ನೆ, ಕಾರ್ಮಿಕರ ಆರ್ಥಿಕ ಬೇಡಿಕೆಗಳ ಕುರಿತೂ ಸಮಿತಿಗಳಲ್ಲಿ ಚರ್ಚೆ ಮಾಡಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಆ ಬೇಡಿಕೆಗಳನ್ನೂ ಮಂಡಿಸಿ ಪ್ರಚಾರಗೊಳಿಸಿ, ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ರೈತರ, ಕಾರ್ಮಿಕರ ಹೋರಾಟಗಳನ್ನು ಸೇರಿಸಿಕೊಳ್ಳಬೇಕೆಂದು ಕಮ್ಯುನಿಸ್ಟ್ ಪಕ್ಷ ಒತ್ತಾಯಿಸುತ್ತಲೇ ಬಂದಿತ್ತು. ಮೈಸೂರು ಸಂಸ್ಥಾನದ ಕಾರ್ಮಿಕ ಕೇಂದ್ರಗಳಲ್ಲಿ ಕಾಂಗ್ರೆಸ್ ಪ್ರಭಾವಶಾಲಿಯಾಗಿದ್ದರೂ ಕೂಡಾ, ಅಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ, ಜವಾಬ್ದಾರಿ ಸರಕಾರಕ್ಕಾಗಿ ನಡೆದ ಹೋರಾಟದಲ್ಲಿ ಕಮ್ಯುನಿಸ್ಟ್ ಮುಖಂಡರು ಕಾರ್ಮಿಕರ ಸಮಸ್ಯೆಗಳನ್ನೂ ಸೇರಿಸಿ ಹೋರಾಡಿದ್ದರಿಂದ, ಕಾಂಗ್ರೆಸ್ ಮುಖಂಡರು ಮಾಲಕರೊಂದಿಗೆ ಹೊಂದಾಣಿಕೆ ಮಾಡಿದ್ದಾಗಲೆಲ್ಲಾ ಅವರನ್ನು ತ್ಯಜಿಸಿ ಕಮ್ಯುನಿಸ್ಟ್ ಮುಖಂಡತ್ವವನ್ನು ಸ್ವೀಕರಿಸಿದ್ದ ಕಾರಣದಿಂದಲೇ ಹಲವಾರು ಕಾರ್ಮಿಕ ಕೇಂದ್ರಗಳಲ್ಲಿ ಕಮ್ಯುನಿಸ್ಟರು ತಮ್ಮ ಪ್ರಭಾವ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಮಂಗಳೂರು ಜಿಲ್ಲೆಯಲ್ಲಿಯೂ ಕೆಂಬಾವುಟದ ಪ್ರಭಾವ ಉಳಿಸಿಕೊಳ್ಳಲು ಸಾಧ್ಯವಾಯಿತು. ಹಾಗೆಯೇ "ಉಳುವವನೇ ಭೂಮಿ ಒಡೆಯ", "ಮುಕ್ಕಾಲು ಪಾಲು ಗೇಣಿದಾರನಿಗೆ", "ಸಾವುಕಾರರ ಸಾಲ ರದ್ಧತಿ" ಬೇಡಿಕೆಗಳನ್ನು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿ ಸೇರಿ ಹೋರಾಡಿದ್ದರಿಂದಲೇ ಕಾರವಾರ, ಮಂಗಳೂರು ಬಿಜಾಪುರ, ಕೋಲಾರ, ತುಮಕೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ರೈತ ಸಂಘ ಭದ್ರಗೊಳಿಸಲು ಸಾಧ್ಯವಾಯಿತು.



ಈ ಬಾರಿಯ ಸ್ವಾತಂತ್ರ್ಯ ದಿನದಂದು ಸ್ವಾತಂತ್ರ್ಯ ರಕ್ಷಣೆಯ ಪ್ರತಿಜ್ಞೆ ಕೈಗೊಳ್ಳುತ್ತಿರುವ ಸತ್ಯಾಗ್ರಹಿಗಳ ಒಂದು ತಂಡ

ಸ್ವಾತಂತ್ರ್ಯ ಚಳುವಳಿಯಲ್ಲಿ ದಿನಗಳಲ್ಲಿ ರೂಪುಗೊಂಡ ಶಿಸ್ತು, ಸ್ಫೂರ್ತಿ ಹಾಗೆಯೇ ಮುಂದುವರಿಯುತ್ತಿದ್ದರೆ, ಕಾಂಗ್ರೆಸ್ ಮುಖಂಡರು ಒಡಕು ನೀತಿಯನ್ನು ಸರಿಸದಿದ್ದರೆ ಇಂದಿನ ಕರ್ನಾಟಕದ ರಾಜಕೀಯ ರೂಪರೇಷೆಯೇ ಬದಲಾಗುತ್ತಿತ್ತು. ಕೆಲವೇ ಕಮ್ಯುನಿಸ್ಟ್ ಮುಖಂಡರಿದ್ದರೂ ಕೂಡಾ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳೂ, ಸಕ್ರಿಯವಾಗಿ, ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡಿದರು. ಈ ವಿಭಾಗದ ಜನರಲ್ಲಿ ರಾಜಕೀಯ ಜಾಗೃತಿ ಉಂಟುಮಾಡಿ ಸ್ವಾತಂತ್ರ್ಯ ನಂತರವೂ ತಮ್ಮ ಸಮಸ್ಯೆಗಳಿಗಾಗಿ ಹೋರಾಟ ಮುಂದುವರಿಸಲಿಕ್ಕೆ ಮಾರ್ಗದರ್ಶನ ನೀಡಿದರು.



ಬೆಂಗಳೂರಿನಲ್ಲಿ ನಬಾರ್ಡ್ ಕಛೇರಿಯೆದುರು ರೈತರ ಪ್ರತಿಭಟನೆ

ಕಾಯಿದೆಭಂಗ ಚಳುವಳಿ 1994

ಕರ್ನಾಟಕದಲ್ಲಿ ಹೊಸ ಸ್ಫೂರ್ತಿ, ಹೊಸ ಸಂದೇಶ ನೀಡಿದ ಚಳುವಳಿ

ಎಸ್.ಕೆ. ಉಪಾಧ್ಯಾಯ

ನಮ್ಮ ರಾಜ್ಯದಲ್ಲಿ ಆಗಸ್ಟ್ 16ರಿಂದ ಸೆಪ್ಟೆಂಬರ್ 6ರವರಗೆ ಶಿವಮೊಗ್ಗ ಜಿಲ್ಲೆಯೊಂದನ್ನು ಬಿಟ್ಟು 19 ಜಿಲ್ಲೆಗಳಲ್ಲಿ ಕಾನೂನುಭಂಗ ಚಳುವಳಿ ನಡೆಯಿತು. ಆಗಸ್ಟ್ 16ರಂದು ಬೆಂಗಳೂರಿನಲ್ಲಿ ಪಿ.ಬಿ. ಸದಸ್ಯರಾದ ಇ.ಬಾಲಾನಂದನ್, ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಎಸ್.ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ, ವಿ.ಜೆ.ಕೆ.ನಾಯರ್, ಜಿಲ್ಲಾ ಕಾರ್ಯದರ್ಶಿ ಆರ್.ಶ್ರೀನಿವಾಸ್ ಅವರನ್ನೊಳಗೊಂಡು 2000 ಜನರನ್ನು ಬಂಧಿಸಿ ಬಿಡುಗಡೆ ಮಾಡಲಾಯಿತು.

ಬೆಂಗಳೂರಿನಲ್ಲಿ ರಾಜ್ಯ ಕಾರ್ಯದರ್ಶಿ, ಕೇಂದ್ರ ಸಮಿತಿ ಸದಸ್ಯ ಪಿ.ರಾಮಚಂದ್ರರಾವ್ ಅವರ ನೇತೃತ್ವದಲ್ಲಿ ನೂರಾರು ಜನರನ್ನು ಬಂಧಿಸಿ ಬಿಡುಗಡೆ ಮಾಡಲಾಯಿತು.

ಬಿಜಾಪುರದಲ್ಲಿ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಎಸ್.ಕೆ. ಉಪಾಧ್ಯಾಯರ ನೇತೃತ್ವದಲ್ಲಿ 37 ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಯಿತು. ಗುಲ್ಬರ್ಗದಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆಯವರ ನೇತೃತ್ವದಲ್ಲಿ 131 ಜನರನ್ನು ಜೈಲಿಗೆ ಹಾಕಲಾಯಿತು.

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ರೈತ ಮುಖಂಡ ಮುಗುವಾಳಪ್ಪನವರ ನೇತೃತ್ವದಲ್ಲಿ 9 ಜನರನ್ನು ಜೈಲಿಗೆ ಹಾಕಲಾಯಿತು. ಎಲ್ಲಾ ರಾಜ್ಯ ಸಮಿತಿ ಸದಸ್ಯರೂ, ಸಾಮೂಹಿಕ ಸಂಘಟನೆಗಳ ಮುಖಂಡರೂ ಈ ಚಳುವಳಿಯಲ್ಲಿ ಭಾಗವಹಿಸಿದ್ದಾರೆ.


ದ.ಕ. ಜಿಲ್ಲೆಯಲ್ಲಿ 13 ದಿವಸ ಪಿಕೆಟಿಂಗ್ ನಡೆದು 3220 ಜನ ಭಾಗವಹಿಸಿ ಬಂಧನಕ್ಕೊಳಗಾಗಿ ಬಿಡುಗಡೆಯಾದರು.ಇದರ ಪೈಕಿ 1173 ಮಹಿಳೆಯರು, 1150 ಕೃಷಿ ಕಾರ್ಮಿಕರು, ಬೀಡಿ, ಹೆಂಚಿನ ಕೆಲಸಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲೂಕಿನಲ್ಲಿ ಪ್ರತಿ ದಿವಸ ಪಿಕೆಟಿಂಗ್ ನಡೆಯಿತು. ಜಿಲ್ಲೆಯಲ್ಲಿ ಒಟ್ಟು 6000 ಜನ ಭಾಗವಹಿಸಿದ್ದರು.

ಕೆ.ಜಿ.ಎಫ್.ನಲ್ಲಿ ಟಿ.ಎಸ್.ಮಣಿಯವರ ನೇತೃತ್ವದಲ್ಲಿ 21 ಜನ ಜೈಲಿಗೆ ಹೋಗಿದ್ದರು. ರೈತರೂ, ಕೃಷಿ ಕಾರ್ಮಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಗುಲ್ಬರ್ಗಾದಲ್ಲಿ 2050 ಜನ ಭಾಗವಹಿಸಿ 131 ಜನ ಜೈಲಿಗೆ ಹೋಗಿದ್ದರು. 50 ಜನ

ಬಿಜಾಪುರದಲ್ಲಿ ಕಾ.ಎಸ್.ಕೆ.ಯವರ ನೇತೃತ್ವದಲ್ಲಿ ಅಂಚೆ ಕಛೇರಿ ಪಿಕೆಟಿಂಗ್ ನಡೆಸಿ ಜೈಲಿಗೆ ಹೋಗಿ ಬಂದ ಮಹಿಳೆಯರು





Compliments
From the makers of Thirty Brand Beedies
30
B MANJUNATH PAI
BHARATH BEEDI WORKS PRIVATE LIMITED
MANGALORE

ಮಹಿಳೆಯರು ಸೇರಿದ್ದರು.

ರಾಯಚೂರಿನಲ್ಲಿ 6000 ಜನ ಭಾಗವಹಿಸಿದರು. 409 ಜನ ಜೈಲಿಗೆ ಹೋಗಿದ್ದರು. 250 ಜನ ಮಹಿಳೆಯರು ಮತ್ತು 3500 ಜನ ಕೃಷಿ ಕಾರ್ಮಿಕರು ಭಾಗವಹಿಸಿದ್ದರು. ವಿದ್ಯಾರ್ಥಿಗಳ ಸಂಖ್ಯೆ ಕೂಡಾ ಹೆಚ್ಚಾಗಿತ್ತು.

ದ.ಕ., ಬೆಂಗಳೂರು, ರಾಯಚೂರು, ಕೋಲಾರ, ಗುಲ್ಬರ್ಗಾಗಳಲ್ಲಿ ಹೆಚ್ಚಿನ ಕೇಂದ್ರಗಳಲ್ಲಿ ಚಳುವಳಿ ನಡೆಸಲು ಸಾಧ್ಯವಾಗಿದೆ.

ಜನರ ಪ್ರತಿಕ್ರಿಯೆ

ಕಾನೂನುಭಂಗ ಚಳುವಳಿಯನ್ನು ಸಾರ್ವಜನಿಕರು ಸ್ವಾಗತ ಮಾಡಿದ್ದಾರೆ. ಸಿಪಿಐ(ಎಂ) ಒಂದೇ ಜನರ ಸಮಸ್ಯೆಗಳನ್ನು, ದೇಶದ ಸಮಸ್ಯೆಯನ್ನು ಎತ್ತಿ ಹಿಡಿಯುತ್ತದೆ, ಅದರ ಸಲುವಾಗಿ ಚಳುವಳಿ ನಡೆಸುತ್ತದೆ, ಸಮಸ್ಯೆಗಳ ಕುರಿತು ಅರಿವು ಮೂಡಿಸಲು ಪ್ರಚಾರ ಪ್ರಕ್ಷೋಭೆ ನಡೆಸುತ್ತದೆ, ಅಧಿಕಾರದ ಆಸೆಯಿಲ್ಲದೆ ಸತತ ಹೋರಾಟದಲ್ಲಿ ಮುಳುಗಿದೆ ಎಂಬ ಒಳ್ಳೆ ಅಭಿಪ್ರಾಯ ಮೂಡಿ ಬಂದಿದೆ.

ತಮ್ಮ ದೈನಂದಿನ ಜೀವನದಲ್ಲಿ ಬೆಲೆ ಏರಿಕೆ, ನಿರುದ್ಯೋಗ, ಕಾರ್ಖಾನೆಗಳ ಮುಚ್ಚುವಿಕೆ, ಮಕ್ಕಳ ಫೀಸ್ ಹೆಚ್ಚಳ ಮೊದಲಾದ ಸಂಕಷ್ಟಗಳ ಮೂಲಕ ಕೇಂದ್ರ-ರಾಜ್ಯ ಸರಕಾರಗಳ ನೀತಿಯಿಂದಾಗಿ ಬೇಸತ್ತಿದ್ದರೂ ಕೂಡಾ, ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಯಿಂದಾಗಿ, ದೇಶದ ಮೇಲಾಗುವ ವಿದೇಶೀ ಬಂಡವಾಳದ ಆಕ್ರಮಣ, ಅದರಿಂದಾಗಿ ನಮ್ಮ ದೇಶೀ ಕೈಗಾರಿಕೆಗಳ ಮೇಲೂ, ಜನರ ಮೇಲೆಯೂ ಹಾಗೆಯೇ ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ಆಗಬಹುದಾದ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ತಿಳುವಳಿಕೆಯಿಲ್ಲ. ಅದರಂತೆಯೇ ಡಂಕೆಲ್ ಸೂಚನೆಗಳು, ಗ್ಯಾಟ್ ಒಪ್ಪಂದಕ್ಕೆ ಒಪ್ಪಿಗೆಯಿಂದಾಗಿ ಒಕ್ಕಲುತನ, ಔಷಧ ಉತ್ಪಾದನೆಗಳ ಮೇಲಾಗುವ ಕೆಟ್ಟ ಪರಿಣಾಮ, ಹೀಗೆ ಈ ಎರಡೂ ನೀತಿಗಳಿಂದಾಗಿ ದೇಶದ ಸ್ವಾತಂತ್ರ್ಯಕ್ಕೇ ತಟ್ಟುವ ಅಪಾಯದ ಕುರಿತು ಜನರಿಗೆ ಯಾವ ರೀತಿಯ ತಿಳುವಳಿಕೆಯೂ ಇಲ್ಲ. ಸರಕಾರದ ಪ್ರಚಾರ ಮಾಧ್ಯಮಗಳು, ರೇಡಿಯೋ, ಟಿ.ವಿ.ಗಳು ಮಂತ್ರಿಗಳ ಹೇಳಿಕೆಗಳೆಲ್ಲ ಹೊಸ ಆರ್ಥಿಕ ನೀತಿ "ಸ್ವರ್ಗದ ಬಾಗಿಲನ್ನೇ" ತೆರೆದಿಟ್ಟದೆಂದು ಸಾರ್ವಜನಿಕರಲ್ಲಿ ಭ್ರಮೆ ಉಂಟುಮಾಡುತ್ತಿರುವಾಗ, ಆಗಸ್ಟ್ 16ರಿಂದ ಸೆಪ್ಟೆಂಬರ್ 6ರವರೆಗೆ ನಡೆದ ಕಾನೂನು ಭಂಗ ಚಳುವಳಿ, ಜಿಲ್ಲಾ ಸಮಿತಿಗಳು ಹೊರಡಿಸಿದ ಲಕ್ಷಗಟ್ಟಲೆ ಕರಪತ್ರಗಳು, ಜಿಲ್ಲಾ-ತಾಲೂಕು ಮಟ್ಟದ ಸಮಾವೇಶಗಳು, ಹಳ್ಳಿಗಳಲ್ಲಿ ನಡೆಸಿದ ಜೀಪ್ ಜಾಥಾ-ಭಾಷಣಗಳು, ಸಿ. ನಂಜುಂಡಪ್ಪನವರ ಕಿರು ಹೊತ್ತಿಗೆ ಸೀತಾರಾಂ ಯೆಚೂರಿಯವರ "ಗ್ಯಾಟ್-94"ರ ಕುರಿತು ಪುಸ್ತಕಗಳೆಲ್ಲ ಜನರಲ್ಲಿ ಮೂಡಿ ಬರುತ್ತಿರುವ "ಭ್ರಮೆ"ಯನ್ನು ತೆಗೆದು ಹಾಕಲು ಸಹಾಯಕವಾಗಿವೆ.

ಜಿಲ್ಲೆ	ಭಾಗವಹಿಸಿದವರು	ಮಹಿಳೆಯರು	ಜೈಲಿಗೆ ಹೋದವರು
ದ.ಕ.	7220	1173	-
ಕೋಲಾರ	6000	750	21
ಗುಲ್ಬರ್ಗ	2150	50	131
ರಾಯಚೂರು	7150	750	409
ಮೈಸೂರು	50	-	-
ಬಳ್ಳಾರಿ	1306	-	73
ಬಿಜಾಪುರ	500	50	37
ಹಾಸನ	790	350	-
ಧಾರವಾಡ	3035	236	-
ಬೆಂಗಳೂರು	3050	-	93
ತುಮಕೂರು	750	-	11
ಉ.ಕನ್ನಡ	1131	-	36
ಕೊಡಗು	500-	-	-
ಮಂಡ್ಯ	140	-	-
ಬೀದರ್	240	-	-

ಹುಬ್ಬಳ್ಳಿಯಲ್ಲಿ ಕೇಂದ್ರ ಕಛೇರಿ ಮುಂದೆ ಪಿಕೆಟಿಂಗ್ ನಡೆಸಲು ಹೊರಟಿರುವ ಮೆರವಣಿಗೆ



ಜೈಲುಭರೋ ಕಾರ್ಯಕ್ರಮ ನಡೆದಾಗ ಜನರು ತೋರ್ಪಡಿಸಿದ ಬೆಂಬಲ ಹೃದಯ ಸ್ಪರ್ಶಿಯಾಗಿತ್ತು. ಈ ಹೋರಾಟದಲ್ಲಿ ತಾವೂ ಸೇರಿಕೊಳ್ಳಬಾರದೇಕೆಂಬ ಆಸೆ ಅವರ ಕಣ್ಣಲ್ಲಿ ಎದ್ದು ಕಾಣುತ್ತಿತ್ತು. ಅದರ ಜೊತೆಯಲ್ಲಿ ಈ ಚಳುವಳಿಯ ಉದ್ದೇಶವನ್ನೂ ಇನ್ನೂ ಆಳವಾಗಿ ಅಭ್ಯಾಸ ಮಾಡಬೇಕೆಂಬ ಭಾವನೆ ಅವರಲ್ಲಿ ಕಾಣಬಹುದಾಗಿತ್ತು. ಜೈಲರು, ಕಂದಾಯ ಅಧಿಕಾರಿಗಳು ಮತ್ತಿನ್ನಿತರರು ಅಧಿಕಾರ ವರ್ಗಕ್ಕೆ ಹಾಗೆಯೇ ಶಿಕ್ಷಕರು ಮೊದಲಾದವರು ಡಂಕೆಲ್ ಸೂಚನೆಗಳ ಕುರಿತು ಮಾಹಿತಿ ತಿಳಿದುಕೊಳ್ಳಬೇಕೆಂಬ ಅಪೇಕ್ಷೆ ವ್ಯಕ್ತಮಾಡುತ್ತಿದ್ದನ್ನು ನೋಡುವಾಗ ನಮ್ಮ ದೇಶದ ಸುಶಿಕ್ಷಿತ ಜನ ಕೂಡಾ ತಮ್ಮ ಮೇಲೆ ಹಾಗೆಯೇ ದೇಶದ ಮೇಲೆ ಕೆಟ್ಟ ಪರಿಣಾಮ ಬೀರುವ ಸಮಸ್ಯೆಗಳ ಕುರಿತು ಬಿಂಬಿಸುತ್ತಿಲ್ಲ ಎಂಬ ಅಂಶವನ್ನು ಎತ್ತಿ ತೋರಿಸುತ್ತದೆ. ಅಂಥ ಸಂದರ್ಭದಲ್ಲಿ ಅವರಿಗೆ ತಿಳುವಳಿಕೆ ನೀಡುವ ಪುಸ್ತಕಗಳು, ಕಿರು ಹೊತ್ತಿಗೆಗಳು ಹೆಚ್ಚು ಪ್ರಕಟಗೊಳ್ಳಬೇಕು. ಮಾರಾಟ ಮಾಡಬೇಕು ಎಂಬ ಅಂಶ ಈ ಚಳುವಳಿಯಿಂದಾಗಿ ಗುರ್ತಿಸಬೇಕಾದ ವಿಷಯ.

ಆಂತರಿಕ ಮಾರುಕಟ್ಟೆಯ ಮಿತಿಗಳಿಂದಾಗಿ ಈಗಿರುವ ಮಟ್ಟದ ಬೆಳವಣಿಗೆ ಉಳಿಸಿಕೊಳ್ಳಲು ರಫ್ತು ಹೆಚ್ಚಿಸುವುದೊಂದೇ ಮಾರ್ಗವೆಂದು ಆಳುವವರ್ಗ ತೀರ್ಮಾನಕ್ಕೆ ಬಂತು. ಇದಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಬೇಕು. ಇದಕ್ಕೆ ಸಾಮ್ರಾಜ್ಯಶಾಹಿಗಳ ಮೇಲೆ ಅವಲಂಬಿಸಬೇಕು. ಇದಕ್ಕೆ ಆಮದು ಉದಾರೀಕರಣ ಮಾಡಲೇ ಬೇಕು. ಇಂತಹ ಹಿನ್ನೆಲೆಯಲ್ಲಿ ಹೊಸ ಆರ್ಥಿಕ ನೀತಿ ಬಂದದ್ದು.

ಆಮದು ಉದಾರೀಕರಣದಿಂದಾಗಿಯೇ 1991ರ ಬಿಕ್ಕಟ್ಟು ಉದ್ಭವವಾದದ್ದು. ಈ ಬಿಕ್ಕಟ್ಟಿನ ಪರಿಹಾರಕ್ಕಾಗಿ ಐಎಂಎಫ್–ವಿಶ್ವ ಬ್ಯಾಂಕ್‌ಗಳಿಂದ ನೆರವು ಕೋರಿತ್ತು ಸರ್ಕಾರ. ಈ ಕೋರಿಕೆ ಎಂದರೆ ದೇಶದ ಜುಟ್ಟನ್ನೇ ಈ ಸಾಮ್ರಾಜ್ಯಶಾಹಿಗಳ ಕೈಗೆ ನೀಡಿದಂತೆ. ಭೋಗ ವಸ್ತುಗಳ ಆಮದು ಉದಾರೀಕರಣದಿಂದಾಗಿ ಆಮದು ವಿಪರೀತ ಏರಿತು. 1984 ಮತ್ತು 1991ರ ನಡುವೆ ನಮ್ಮ ವಿದೇಶೀ ಸಾಲ 28000 ಕೋಟಿ ರೂ.ಗಳಿಂದ 100425 ಕೋಟಿ ರೂಪಾಯಿಗಳಿಗೇರಿತು. ಭಾರತವೆಂಬ ಮಹಾನ್ ಮಾರುಕಟ್ಟೆ ತನ್ನ ಕೈಗಳಿಂದ ಎಂದೂ ತಪ್ಪಿಸಿಕೊಂಡು ಹೋಗದಂತೆ ಮಾಡುವುದೇ ಬ್ಯಾಂಕ್–ಫಂಡ್‌ಗಳ ಕೆಲಸ–ಆರ್ಥಿಕ ನೆರವಿಗಾಗಿ ಷರತ್ತುಗಳ ಸರಣಿ.

ಸ್ವಾರ್ಥ ಸಾಧನೆಗಾಗಿ ಆರಿಸಿದ ದಾರಿ

ಇಲ್ಲೇ ಪ್ರಶ್ನೆ ಏಳುವುದು–ನಮ್ಮ ದೇಶದ ಆಳುವ ವರ್ಗ ಸಾಮ್ರಾಜ್ಯಶಾಹಿಯ ತಾಳಕ್ಕೆ ತಕ್ಕಂತೆ ಕುಣಿವ ದಳ್ಳಾಳಿ ಬಂಡವಾಳಶಾಹಿಯೇ? ಅದರ ಇಬ್ಬಗೆಯ ಗುಣ ಅಳಿಸಿ ಹೋಗಿದೆಯೇ?– ಆದರೆ ಅಂತಹದ್ದೇನೂ ಆಗಿಲ್ಲ. ನಮ್ಮ ಗುತ್ತೇದಾರಿ ಬಂಡವಾಳಶಾಹಿ ವರ್ಗ ಸಾಮ್ರಾಜ್ಯ ಶಾಹಿಯ ಪೂರ್ಣ ಅಡಿಯಾಳಾಗಿಲ್ಲ. ಅದರ ಪಾಲುದಾರನಾಗಲು ಹವಣಿಸುತ್ತಿದೆ.

ಆದ್ದರಿಂದಲೇ ಅದು ಐ.ಎಂ.ಎಫ್.ನ ಹಲವು ಷರತ್ತುಗಳನ್ನು ಒಪ್ಪಿಕೊಂಡು ಅದರ ಭಾರವನ್ನು ಬಡಜನತೆಯ ಹೆಗಲಿಗೆ ದಾಟಿಸುತ್ತಿದೆ. ಆದರೆ ತನ್ನ ಹಿತಾಸಕ್ತಿಗಳಿಗೇ ಧಕ್ಕೆ ಬಂದಾಗ ಸಾಮ್ರಾಜ್ಯಶಾಹಿಗೆದುರಾಗಿ ಹೋರಾಡುತ್ತದೆ. ಡಂಕೆಲ್ ಪ್ರಸ್ತಾವಗಳು, ಪೇಟೆಂಟ್ ಕಾಯಿದೆ, ಸೂಪರ್ 301, ಇವುಗಳಿಗೆಲ್ಲ ಪ್ರತಿರೋಧ ತೋರಿಸುತ್ತಿರುವ ಕಾರಣವೂ ಇದೆ.

ಗುತ್ತೇದಾರಿ ಬಂಡವಾಳಿಗರಿಗೆ ಸಾಮ್ರಾಜ್ಯ ಶಾಹಿಗಳ ಆಕ್ರಮಣವನ್ನು ತಡೆಗಟ್ಟುವ ತಾಕತ್ತಿದೆ. ಉಳಿದ ಬಂಡವಾಳಿಗರಿಗೆ ಈ ಪ್ರಮಾಣದಲ್ಲಿ ತಾಕತ್ತಿಲ್ಲ. ಆದರೆ ಆಳುವ ವರ್ಗದ ಮೈತ್ರಿಯಲ್ಲಿ ಹೊಸ ಹೊಸ ವೈರುಧ್ಯಗಳು ಬಂದೇ ಬರುತ್ತವೆ

ಆಳುವ ವರ್ಗದ"ಬೇರೆ ದಾರಿಯೇ ಇಲ್ಲ" ಎಂಬ ವಾದ ಒಪ್ಪುವಂತಹದ್ದೇನಲ್ಲ. ಈ ಬಿಕ್ಕಟ್ಟುಗಳನ್ನು ಎದುರಿಸಲು ಬೇರೆ ದಾರಿ ಖಂಡಿತವಾಗಿಯೂ ಇತ್ತು. ಅನಾವಶ್ಯಕ ಆಮದನ್ನು ಕಡಿತ ಮಾಡುವುದು ಒಂದು ದಾರಿಯಾದರೆ ರಫ್ತನ್ನು ಹೆಚ್ಚಿಸುವುದು ಇನ್ನೊಂದು ದಾರಿ. ಆದರೆ ಇದರ ಅರ್ಥ ಆಳುವ ವರ್ಗ ತನ್ನ "ರಫ್ತು ಆಧಾರಿತ" ಬೆಳವಣಿಗೆಯ ದಾರಿಯನ್ನು ಬಿಡಬೇಕಾಗಿತ್ತು ಗುತ್ತೇದಾರಿ ಬಂಡ ವಾಳಶಾಹಿ ತನ್ನ ನಾಯಕತ್ವ ಮತ್ತು ಲಾಭ ಎರಡನ್ನೂ ಉಳಿಸಿಕೊಳ್ಳಲು ಐ.ಎಂ.ಎಫ್. ಸಾಲ ಪಡೆದು ದೇಶದ ಅಪಾರ ಜನಸಮೂಹವನ್ನೇ ಬಿಕ್ಕಟ್ಟಿಗೆ ಸಿಲುಕಿಸುವ ದಾರಿಯನ್ನು ಆಯ್ದುಕೊಂಡಿತು.

ಆದ್ದರಿಂದಲೇ ಈ ಹೊಸ ನೀತಿ.

ಆಳುವ ವರ್ಗದ"ಬೇರೆ ದಾರಿಯೇ ಇಲ್ಲ" ಎಂಬ ವಾದ ಒಪ್ಪುವಂತಹದ್ದೇನಲ್ಲ. ಈ ಬಿಕ್ಕಟ್ಟುಗಳನ್ನು ಎದುರಿಸಲು ಬೇರೆ ದಾರಿ ಖಂಡಿತವಾಗಿಯೂ ಇತ್ತು.
ಗುತ್ತೇದಾರಿ ಬಂಡವಾಳಶಾಹಿ ತನ್ನ ನಾಯಕತ್ವ ಮತ್ತು ಲಾಭ ಎರಡನ್ನೂ ಉಳಿಸಿಕೊಳ್ಳಲು ಐ.ಎಂ.ಎಫ್. ಸಾಲ ಪಡೆದು ದೇಶದ ಅಪಾರ ಜನಸಮೂಹವನ್ನೇ ಬಿಕ್ಕಟ್ಟಿಗೆ ಸಿಲುಕಿಸುವ ದಾರಿಯನ್ನು ಆಯ್ದುಕೊಂಡಿತು.
ಆದ್ದರಿಂದಲೇ ಈ ಹೊಸ ನೀತಿ.



ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಗಂಗಿರಾಮನಗರ, ಬೆಂಗಳೂರು-27. ಫೋನ್. 2236462 ಸಂಪಾದಕರು: ಪಿ. ರಾಮಚಂದ್ರರಾವ್
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು-27. ಫೋನ್. 2234066